the Government intends reconstituting. . . .

Mr. SPEAKER.—May I know from the Hon'ble Member how this arises ?

Sri K. PUTTASWAMY.—Now that the Minister submitted that the University Bill is not likely to be placed before us in the present session. . . .

Sri A. G. RAMACHANDRA RAO.—I did not say so.

Sri K. PUTTASWAMY.—Naturally the Government will have to reconstitute the bodies either under the old Act or have another session of the House either in the month of April or in May for passing the University Bill. I want to know what Government intend doing in this matter.

Sri A. G. RAMACHANDRA RAO.—Government is very anxious to finalise the Bill during this session alone. That is why I said that the Select Committee met thrice during the heavy Budget agenda. If, in any case, it is not possible, then an early session will be called and the matter will be considered.

Sri K. S. VASAN.—The Hon'ble Minister has not said anything about the Kolar Gold Fields Nationalisation Bill. Is it going to be placed in this session ?

Sri A. G. RAMACHANDRA RAO.—I submit that the draft Bill is ready and we are in correspondence with the Government of India. We are pursuing it very seriously.

Sri K. S. VASAN.—Where is the necessity for consulting the Government of India for placing this Bill before the House, when the draft Bill is ready ?

Sri A. G. RAMACHANDRA RAO.—It comes under the concurrent jurisdiction and the approval and assent of the President is necessary.

BUDGET FOR 1956-57—DEMANDS FOR GRANTS.

Mr. SPEAKER.—Now Demands will be taken up. Demands Nos. 26 and 1 will be taken up together. Demands Nos. 38 and 42 can be taken up together, I have allotted time in this way. Demands 26 and 41: One and a half hours Demands 38 and 42: two hours. Today we have to close exactly at 5 P. M.

Sri V. M. MASCARENHAS (St. John's Hill).—More time must be given for Industries Demand, Sir.

Sri T. MARIAPPA (Mysore City—North).—Industries Demand should have more time.

Mr. SPEAKER.—I have no objection to change the time limit or distribute time. But you have got to close exactly at 5 o'clock. Today is the last day. So Demands Nos. 26 and 41 will be taken up till 3 and Demands 38 and 42 will be taken up after 3·30 and we close at 5.

Sri Mulka GOVINDA REDDY (Chitaldrug).—Before the discussion begins. I would like to know whether the Chair has fixed any time limit for Ministers. At what time can the Minister reply on demands Nos. 43 and 41 and at what time the Minister in charge for Electricity will reply on the other two Demands. If you fix the time required for the Ministers concerned, you may allot time for the members.

Mr. SPEAKER.—Time will be half an hour for the Government to reply on every two Demands at a time. So they require one hour as they have to meet many of the points raised.

Sri Mulka GOVINDA REDDY.—So, till 2-30 discusion can go on the first two Demands ?

Mr. SPEAKER.—Yes. I will move Demand No. 26, but Demand No. 41 can also be discussed.

DEMAND No. 26.—INDUSTRIES AND SUPPLIES INCLUDING SERICULTURE.

43. INDUSTRIES AND SUPPLIES.

Mr. SPEAKER.—Motion moved :

" That a sum not exceeding Rs. 8,26,80,300 be granted to the Government to defray the charges which will come in course of payment during the year ending 31st day of March 1957, in respect of 'Industries and Supplies'."

Sri. V. M. MASCARENHAS (St. John's Hill).—As there will be very many speakers, please restrict each speaker to a maximum of five minutes, Sir.

Mr. SPEAKER.—Yes.

*ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಕೈಗಾರಿಕೆ ಉದ್ಯಮದ ಮೇಲೆ ಸರ್ಕಾರದವರು 9 ಕೋಟಿ 61 ಲಕ್ಷ ರೂಪಾಯಿಗಳ ಬಂಡವಾಳ ಹಾಕಿದ್ದಾರೆ. ಆ ಬಂಡವಾಳವನ್ನು ಸಾರ್ವಜನಿಕರಿಂದ ಸಾಲಪಡೆದು ಹಾಕಿದ್ದಾರೆ. ಕೈಗಾರಿಕೆ ಉದ್ಯಮಗಳನ್ನು ಖಾಸಗೀ ಮನುಷ್ಯರು ಯಾವ ರೀತಿ ನಡೆಸುತ್ತಾರೋ ಆ ರೀತಿ ಸರ್ಕಾರದವರು ನಡೆಸುವುದಕ್ಕೆ ಸಿದ್ಧರಾಗಿಲ್ಲ. ಅನೇಕ ಕೈಗಾರಿಕೆ ಸಂಸ್ಥೆಗಳಲ್ಲಿ ಪದಾರ್ಥಗಳನ್ನು ತಯಾರು ಮಾಡಿ ಅವು ಬಿಕರಿಯಾಗದೆ ಸ್ಟಾಕ್‌ನಿಂತಿದೆ. ಉದಾಹರಣೆಗೆ ಹೇಳುವುದಾದರೆ ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಸರಕು ಸ್ಟಾಕು ಇದೆ. ಹಾಗೆಯೇ ಅನೇಕ ಕೈಗಾರಿಕೆ ಉದ್ಯಮಗಳಲ್ಲಿ ಬಹಳವಾಗಿ ಸ್ಟಾಕುಗಳನ್ನಿಟ್ಟಿದ್ದಾರೆ. ಯಾಕೆ ಇಟ್ಟಿದ್ದಾರೆ ಅಂದರೆ ಒಂದು ಬಡ್ಜೆಟ್ ಇಲ್ಲ. ಏನು ತಯಾರು ಮಾಡಬೇಕು, ಈ ವರ್ಷ ಎಷ್ಟು ವ್ಯಾಪಾರ ಮಾಡಬಹುದು ಎನ್ನತಕ್ಕದ್ದಕ್ಕೆ ಒಂದು ಮುಂದಾಲೋಚನೆ ಇಲ್ಲದೆ ಮನಸ್ಸಿಗೆ ಬಂದಂತೆ ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆಂದು ನನ್ನ ಭಾವನೆ.

ದೇಶದಲ್ಲಿ ಸರ್ಕಾರದವರು ನಡೆಸುತ್ತಿರತಕ್ಕ ಕೈಗಾರಿಕೆ ಸಂಸ್ಥೆಗಳಲ್ಲಿ ಹೆಚ್ಚು ಮುತುವರ್ಜಿ ಬಂದು, ಒಂದು initiative ಬರಬೇಕಾದರೆ, ಯಾವ ರೀತಿ ಆ ಕೈಗಾರಿಕೆಗಳನ್ನು ಉತ್ತಮಪಡಿಸಬೇಕೆಂದು ಯೋಚನೆ ಮಾಡುತ್ತೇವೆ, ಮತ್ತು ಅವುಗಳ ಆಡಳಿತವನ್ನು ಉತ್ತಮಪಡಿಸುವ ಯೋಚನೆ ಮಾಡುತ್ತೇವೆಂದು ಹಿಂದೆ ರಾಜಪ್ರಮುಖರು ಸಹ ಅವರ ಭಾಷಣದಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ, ಇವು ಸಾರ್ವಜನಿಕರಿಂದ ಸಾಲ ಪಡೆದು ತಂದಿರತಕ್ಕ ಹಣವನ್ನು ಹಾಕಿ ನಡೆಸುತ್ತಿರತಕ್ಕ ಉದ್ಯಮಗಳು. ಇವುಗಳಲ್ಲಿ ಸಾರ್ವಜನಿಕರಿಗೆ ಕೊಡಬೇಕಾದ ಬಡ್ಡಿಯನ್ನು ಕೊಟ್ಟು ಅದರ ಮೇಲೆ ಲಾಭ ಬರಬೇಕು ಎನ್ನುವ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ನಡೆಸಬೇಕು ಎನ್ನುವ ತತ್ವದಿಂದ ಹೇಳುತ್ತಿದ್ದೇನೆ. ಸರ್ಕಾರದವರು ಈ ದೃಷ್ಟಿಯಿಂದ ಕೈಗಾರಿಕೆ ಉದ್ಯಮಗಳನ್ನು ನಡೆಸುತ್ತಿಲ್ಲವೆಂದು ನನ್ನ ಭಾವನೆ.

ಎರಡನೆಯದು, Government Electric Factory ವಿಷಯ, ಈ ಫ್ಯಾಕ್ಟರಿಯಲ್ಲಿ ಪ್ಲಾಸ್ಟಿಕ್ ವಿಭಾಗವನ್ನು ಬೇರೆ ಮಾಡಿದರು. ಇದನ್ನು ಒಂದು ಖಾಸಗಿ ಸಂಸ್ಥೆಗೆ ವಹಿಸಿದರು. ಆ ಸಂಸ್ಥೆಯವರು ಯಂತ್ರೋಪಕರಣಗಳನ್ನು ತರಿಸುವುದಕ್ಕೆ ಮತ್ತು working capital ಗೋಸ್ಕರ ಸರ್ಕಾರದಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಈ ಹಣವನ್ನು ಅವರ ಸ್ವಂತ ಹೆಸರಿನಲ್ಲಿಟ್ಟು ಕೊಂಡಿದ್ದಾರೆ. ಅಕೌಂಟೆಂಟ್ ಜನರಲ್ ಅವರು ಅವರ ವರದಿಯಲ್ಲಿ ಹೇಳಿರುವುದನ್ನು ನಾನು ಓದುತ್ತೇನೆ.

P. No. 13: "The Company has drawn a sum of Rs. 33.98 lakhs, in lump, from Government, for the acquisition of Capital Assets and for meeting the working expenses of the two undertakings referred to above and has been depositing the drawings in a private bank, pending actual expenditure."

ಇದು ಬಹಳ ತಪ್ಪು.

"Even the amounts drawn for working expenses have been charged to Capital instead of to current revenue."

ಇದೂ ಬಹಳ ತಪ್ಪು.

"The realisations on account of sale proceeds are not remitted in—to the Treasury but are utilised for expenditure on the undertakings" Government undertaking ಎಂದು ಒಪ್ಪಿಕೊಂಡು, ಪ್ರಾರಂಭಮಾಡಿ ದುಡ್ಡು ತೆಗೆದುಕೊಂಡು, ಪದಾರ್ಥಗಳು ವ್ಯಾಪಾರವಾದರೆ ಸರ್ಕಾರದ ಖಜಾನೆಗೆ ಇರಸಾಲು ಮಾಡುತ್ತಿಲ್ಲ.

"Accounts are not rendered monthly to the Audit office for the amounts received and payments made."

ಎಂದು ಅಕೌಂಟೆಂಟ್ ಜನರಲ್‌ರವರು ಯಾವ ಯಾವ ಲೋಪದೋಷಗಳಿವೆ ಎಂಬುದನ್ನೆಲ್ಲ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆನ್ನುವುದನ್ನು ಸಹ ನಾವು ಎದುರು ನೋಡುತ್ತಿದ್ದೇವೆಂದು ಬರೆದಿದ್ದಾರೆ. ಆ ರೀತಿ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದೆ ಇದ್ದರೆ ಸರ್ಕಾರದವರು ಕೂಡಲೆ ಇದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಪೋರ್ಸ್‌ಲೈನ್ ಫ್ಯಾಕ್ಟರಿಯಲ್ಲಿ N. G. K. ಸ್ಕೀಂ ಜಾರಿಗೆ ತಂದರು. ಅದಕ್ಕೆ ಜಪಾನ್ ದೇಶದಿಂದ ತಜ್ಞರನ್ನು (experts) ಕರೆಸಿದರು. ಜಪಾನ್ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಇಂಡಿಯಾ ಸರ್ಕಾರದ ಮುಖಾಂತರ ಒಂದು ಒಪ್ಪಂದವಾಗಿ N. G. K. Scheme ಎಂದು high tension insulators ತಯಾರಿಸುವುದಕ್ಕೆ ಒಂದು ಯೋಜನೆಯನ್ನು ಮಾಡಿದ್ದಾರೆ. ಆ ತಜ್ಞರು ಎಷ್ಟು ದಿವಸಗಳಿಂದ ಇದ್ದಾರೆಂದರೆ ಎರಡು ಮೂರು ವರ್ಷಗಳಿಂದ ಇದ್ದಾರೆಂದು ಕಾಣುತ್ತದೆ. ಮೊದಲಿನ ಅಂದಾಜು ಪ್ರಕಾರ 64 ಲಕ್ಷ ರೂಪಾಯಿಗಳು ಅದಕ್ಕೆ ಖರ್ಚಾಗಬೇಕಾಗಿತ್ತು. ಆದರೆ ಈಗ ರಿವೈಸ್ ಆಗಿರುವ ಅಂದಾಜಿನ ಪ್ರಕಾರ 83 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಇನ್ನೂ ಆ ಕೆಲಸ ಮುಗಿದಿಲ್ಲ. ಫೆಬ್ರವರಿ ತಿಂಗಳಿನಿಂದ ತಯಾರು ಮಾಡಲು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದರು. ಇದುವರೆಗೆ ಎಷ್ಟು ತಯಾರಾಗಿದೆ ಎಂದು ಗೊತ್ತಿಲ್ಲ. ಒಂದು ವರ್ಷಕ್ಕೆ ಮೂರು ಸಾವಿರ ಟನ್ high tension insulators ತಯಾರಾಗಬೇಕು. ಇವು Sharavathi Hydro-electric Scheme ಮತ್ತು ಮೈಸೂರು ಸಂಸ್ಥಾನದಲ್ಲಿರತಕ್ಕ ಇತರ ವಿದ್ಯುಚ್ಛಕ್ತಿ ಯೋಜನೆಗಳಿಗೆ ಬೇಕಾಗುತ್ತದೆ. ಅದಕ್ಕೋಸ್ಕರ ಈ ಯೋಜನೆಯನ್ನು ಮಾಡಿದ್ದೇವೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಜಪಾನ್ ದೇಶದಿಂದ ತಜ್ಞರು ಬಂದು ಇಲ್ಲಿ

ರುವುದಕ್ಕೆ ತಕ್ಕಷ್ಟು ಪ್ರಯೋಜನ ನಮಗೆ ಆಗಿದೆಯೇ ? ಹಾಗಿಲ್ಲದೆ ಇದ್ದರೆ ಯಾತಕ್ಕೆ ಅವರಿಂದಾಗುವ ಪ್ರಯೋಜನವನ್ನು ಪಡೆಯಲು ನಿಧಾನಮಾಡುತ್ತಿದ್ದೀರಿ ? ಸರ್ಕಾರದ ಮೇಲ್ವಿಚಾರಣೆ ಸರಿಯಾಗಿದೆಯೇ ಎಂದು ನೋಡಬೇಕು. ಇದು ಬಹಳ ಅಗತ್ಯ.

ಮೂರನೆಯದು, ಸಿಮೆಂಟ್ ಮಾರಾಟಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಸಿಮೆಂಟ್ ನಮ್ಮಲ್ಲಿಯೇ ತಯಾರಾದರೂ ಕೂಡ ಅನೇಕ ಬಡವರಿಗೆ ಪರ್ಮಿಟ್ ಸಿಕ್ಕುತ್ತಿಲ್ಲ. ನ್ಯಾಯವಾದ ಬೆಲೆಗೆ ಸಿಮೆಂಟ್ ಕೊಡುತ್ತಿಲ್ಲವೆಂದು ಎಲ್ಲೆಲ್ಲೂ ಪುಕಾರುಗಳಿವೆ. ಸರ್ಕಾರದ ಧಾರಣೆಗೆ ಕೊಡುವುದಕ್ಕೆ ಬದಲಾಗಿ ಹೆಚ್ಚು ಧಾರಣೆಗೆ ಕೊಟ್ಟರೆ ಜನರಿಗೆ ಬಹಳ ತೊಂದರೆ ಯಾಗುತ್ತದೆ. ಈ ವಿಷಯದಲ್ಲಿ ಸರ್ಕಾರದವರು ದಯವಿಟ್ಟು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಸರ್ಕಾರದವರು ಸಾರ್ವಜನಿಕರಿಂದ ಸಾಲವಾಗಿ ತಂದ ಹಣದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಬಳ್ಳಾರ ಚಿನ್ನದಗಣಿಯಲ್ಲಿ ಕಳೆದು ಬಿಟ್ಟರು. ಒಂದು ಉದ್ಯಮವನ್ನು ತೆಗೆದುಕೊಂಡರೆ ಮೊದಲು ಅದರ ಬಗ್ಗೆ ಪರೀಕ್ಷೆ ಮಾಡಬೇಡವೆ? ಹತ್ತು ಲಕ್ಷ ರೂಪಾಯಿಗಳನ್ನು ಕಳೆದಮೇಲೆ ತಜ್ಞರನ್ನು (experts) ಕರೆಸಿ ಪರೀಕ್ಷೆ ಮಾಡಿಸುತ್ತಿದ್ದಾರೆ. ಹತ್ತು ಲಕ್ಷ ರೂಪಾಯಿಗಳನ್ನು ಯಾರ ದುಡ್ಡೆಂದು ಯಾರನ್ನೂ ಕೇಳದೆ ಒಂದು ಉದ್ಯಮಕ್ಕೆ ಹಾಕಿ ಅದನ್ನು ಪ್ರಾರಂಭಮಾಡಿ, ನಾಲ್ಕು ವರ್ಷಗಳ ಕಾಲ ನಡೆಸಿ ಅನಂತರ ಅಲ್ಲಿ ಚಿನ್ನವಿಲ್ಲ, ಎಷ್ಟೇ ಪ್ರಯತ್ನಪಟ್ಟರೂ ಸಹ ಅಲ್ಲಿ ಚಿನ್ನ ಸಿಕ್ಕುವುದಿಲ್ಲವಾದುದರಿಂದ ಕೆಲಸ ಕಾರ್ಯಗಳನ್ನು ನಿಲ್ಲಿಸಿಬಿಡುತ್ತೇವೆಂದರೆ ಹೇಗೆ? ಈ ಉದ್ಯಮವನ್ನು ಪ್ರಾರಂಭಮಾಡುವುದಕ್ಕೆ ಮೊದಲೇ ಸರಿಯಾಗಿ ವಿಮರ್ಶೆಮಾಡಬೇಕಾಗಿತ್ತು. ಹಾಗಿಲ್ಲದೆ ಈ ರೀತಿ ಏಕಾಏಕಿ ಒಂದು ಉದ್ಯಮಕ್ಕೆ ಕೈಹಾಕಿ, ಸಾರ್ವಜನಿಕರ ದುಡ್ಡನ್ನು, ಹತ್ತು ಲಕ್ಷ ರೂಪಾಯಿಗಳನ್ನು ಕಳೆದುಬಿಟ್ಟಿರಲ್ಲ, ಇದು ಎಂಥ ಅನ್ಯಾಯ ! ಈ ರೀತಿ ಮಾಡಬಾರದು.

ನಮ್ಮ ದೇಶದಲ್ಲಿ ಗಂಧಕವಿಲ್ಲ. ನಮಗೆ ಬೇಕಾದ ಗಂಧಕವೆಲ್ಲ ಹೊರಗಡೆಯಿಂದ ಬರಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಇಂಗಳಗದಾಳ್‌ಬಳಿ ಗಂಧಕದ ಅದುರು ಸಿಕ್ಕುತ್ತದೆಂದು ಗೊತ್ತಾಗಿದೆ. ಇದನ್ನು ಭೂಮಿಯಿಂದ ತೆಗೆದು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದಕ್ಕೆ ತಕ್ಷಣ ಒಂದು ಯೋಜನೆಯನ್ನು ತಯಾರು ಮಾಡಿದರೆ ನಮಗೆ ಅನುಕೂಲವಿದೆ ಎಂದು Mineral Development Committeeಯವರು ಸಲಹೆಮಾಡಿದ್ದರು. ಅದು ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ ಎಂಬುದು ಗೊತ್ತಾಗಿಲ್ಲ. ಒಂದು ವರ್ಷದಿಂದೀಚೆಗೆ Mineral Development Committeeಯವರ ಸಲಹೆಗಳನ್ನು ಯಾವರೀತಿ ಜಾರಿಗೆ ತಂದಿದ್ದಾರೆನ್ನುವುದನ್ನು ಸಹ ಸರ್ಕಾರದವರು ತಿಳಿಯಪಡಿಸಬೇಕು. ಇಂಥದೆಲ್ಲ ಬಹಳ ಅಗತ್ಯ.

ಸರ್ಕಾರದವರು ನಡೆಸುತ್ತಿರತಕ್ಕ ಯಾವ ಕೈಗಾರಿಕೆಯನ್ನೇ ತೆಗೆದುಕೊಂಡರೂ, ಸಾರ್ವಜನಿಕರು ಯಾವ ರೀತಿ ತಮ್ಮ ಕೈಗಾರಿಕೆಗಳನ್ನು ಯಾವರೀತಿ ಲಾಭದಾಯಕವಾಗಿ ನಡೆಸುತ್ತಾರೆಯೋ ಆ ರೀತಿ ಸರ್ಕಾರದವರು ನಡೆಸುವುದಕ್ಕೆ ಪ್ರಯತ್ನಮಾಡುವುದಿಲ್ಲ. ಆ ರೀತಿ ಲಾಭದಾಯಕವಾಗುವಂತೆ ಮಾಡುವುದಕ್ಕೆ ಏನಾದರೂ ಏರ್ಪಾಡು ಮಾಡಬೇಕು. ಅಂಥ ಏರ್ಪಾಡುಮಾಡದೆ ಹೋದರೆ ನಾವು ಏನು ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇವೆಯೋ ಆ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ಆದುದರಿಂದ ಸರ್ಕಾರಿ ಕೈಗಾರಿಕೆಗಳೂ ಲಾಭದಾಯಕವಾಗುವಂತೆ ಮಾಡುವುದು ಬಹಳ ಮುಖ್ಯ.

1·30 P.M.

ಇನ್ನೊಂದು, ಮೈಸೂರಿನ ಡೈಕ್ರೊಮೇಟ್ ಫ್ಯಾಕ್ಟರಿಯನ್ನು ಈಗಾಗಲೆ ಮುಚ್ಚಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿನ ನಷ್ಟ. ಈ ರೀತಿ ನಷ್ಟವಾಗಬೇಕಾದರೆ ಕಾರಣವಿರಬೇಕು. ಇಂಡಿಯಾದಲ್ಲಿ ಹನ್ನೊಂದು ಡೈಕ್ರೊಮೇಟ್ ಫ್ಯಾಕ್ಟರಿಗಳಿವೆ. ಅದನ್ನೆಲ್ಲಾ ಮುಚ್ಚಿದ್ದಾರೆಯೆ? ಇಲ್ಲ. ಮೈಸೂರು ಸರ್ಕಾರದ ಡೈಕ್ರೊಮೇಟ್ ಫ್ಯಾಕ್ಟರಿಯನ್ನು ಮಾತ್ರ ಮುಚ್ಚಿದ್ದಾರೆ. ಈಗ ಮಿನಿಮಮ್ ಸ್ಟಾಫ್ ಇಟ್ಟು ನಡೆಸುತ್ತಿದ್ದೇವೆ ಅಥವಾ ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಫ್ಯಾಕ್ಟರಿಯವರಿಗೆ ವಹಿಸಿದ್ದೇವೆ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಇವರಿಗೆ ಕೈಗಾರಿಕೆ ಉದ್ಯಮದ ಅನುಭವವಿಲ್ಲವೆಂದು ಕಾಣುತ್ತದೆ. ಸಂಪೂರ್ಣವಾಗಿ ಅನುಭವ ಪಡೆದು ನಡೆಸಬೇಕು. ಸಾರ್ವಜನಿಕ ಹಣದಲ್ಲಿ ಈ ರೀತಿ ಜೂಜು ಆಡಬಾರದು ಎಂಬುದನ್ನು ಈ ಸಂದರ್ಭದಲ್ಲಿ ಗಮನಕ್ಕೆ ತರುತ್ತೇನೆ.

ಮತ್ತೊಂದು ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ. ಇದರಲ್ಲಿ ತಯಾರುಮಾಡಿರುವ ಮಾಲನ್ನು ಮಾರುವುದಕ್ಕಾಗುವುದಿಲ್ಲ. ಏಕೆಂದರೆ ತಾತಾ ಕಂಪೆನಿಯವರು ತಯಾರು ಮಾಡಿರುವ ಇಂಪ್ಲಿಮೆಂಟ್ಸ್ ಬಹಳ ಚೆನ್ನಾಗಿವೆ. ತಾತಾ ಕಂಪೆನಿಯ ಪದಾರ್ಥಗಳೊಂದಿಗೆ ನಮ್ಮ ಮೈಸೂರಿನಲ್ಲಿ ತಯಾರಾಗತಕ್ಕವು ನಿಲ್ಲಲಾರದೆ ಬಹಳ ಕಷ್ಟವಾಗಿದೆ. ಇದಕ್ಕೆ ಕಾರಣವೇನು ? ನಾವೂ ಸಹ ಇತರ ಕಂಪೆನಿಗಳವರು ಹೇಗೆ ತಯಾರಿಸುತ್ತಾರೆಂಬುದನ್ನು ತಿಳಿದುಕೊಂಡು ಹೆಚ್ಚಾಗಿ ಸಂಶೋಧನೆ ನಡೆಸಿ ಲಾಭದಾಯಕವಾಗಿ ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯು ಕೆಲಸಮಾಡುವಂತೆ ಮಾಡಬೇಕೇ ವಿನಾ ಸರ್ಕಾರಿ ಹಣದಿಂದ ಸಾಮಾನುಗಳನ್ನು ತಯಾರಿಸಿ ದಾಸ್ತಾನಿಡಬಾರದು. ಈ ಫ್ಯಾಕ್ಟರಿ ಲಾಭದಾಯಕವಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಈ ಸಲಹೆ ನೀಡುತ್ತಿದ್ದೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಸಭೆಯ ಮುಂದಿರುವ ಡಿಮ್ಯಾಂಡ್ ಮನವಿಯನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅರಸೀಕೆರೆ ತಾಲ್ಲೂಕು ಬಾಗೇಶಪುರದಬಳಿ ಬಿಳಿಯ ಮಣ್ಣು ಸಿಕ್ಕಿ ಅದರಿಂದ ಪಿಂಗಾಣಿ ಸಾಮಾನನ್ನು ತಯಾರಿಸುತ್ತಿದ್ದಾರೆ. ಆ ಮಣ್ಣು ಹೊರಕ್ಕೆ ಹೋಗುತ್ತಿದೆ. ಅಲ್ಲಿ ಬರೀ ಮಣ್ಣನ್ನು ಶುದ್ಧಿಮಾಡಿ ಹೊರಕ್ಕೆ ಕಳಿಸುತ್ತಿದ್ದಾರೆ. ಅರಸೀಕೆರೆ ತಾಲ್ಲೂಕು ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆ. ಅಲ್ಲಿ ಯಾವ ಕೈಗಾರಿಕೆಯೂ ಇಲ್ಲದೆ ಅಲ್ಲಿರುವ ಬಡಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಅಲ್ಲಿಂದ ಮಣ್ಣನ್ನು ಹೊರಕ್ಕೆ ಕಳುಹಿಸುವುದಕ್ಕೆ ಬದಲಾಗಿ ಅದೇ ಜಾಗದಲ್ಲಿ ಒಂದು ಕಾರ್ಖಾನೆ ಸ್ಥಾಪಿಸಿ ಪಿಂಗಾಣಿ ಸಾಮಾನನ್ನು ತಯಾರಿಸಿದರೆ ಸರ್ಕಾರಕ್ಕೆ ಈಗ ಅಲ್ಲಿನ ಬಿಳಿಯ ಮಣ್ಣನ್ನು ಹೊರಕ್ಕೆ ಕಳಿಸುವುದರಿಂದ ಎಷ್ಟು ಆದಾಯ ಬರುತ್ತಿದೆಯೋ ಅದಕ್ಕಿಂತ ಹೆಚ್ಚು ಆದಾಯ ಬರುತ್ತದೆ. ಕೂಡಲೇ ಅಲ್ಲಿ ಒಂದು ಕಾರ್ಖಾನೆ ಸ್ಥಾಪನೆಮಾಡಿ ಮಣ್ಣಿನ ಪಾತ್ರೆಗಳನ್ನು ಅಲ್ಲಿ ತಯಾರು ಮಾಡಬೇಕು, ಮತ್ತು ಅಲ್ಲಿ ಶುದ್ಧವಾದ ಬಳಪದಕಲ್ಲು ಸಹ ಸಿಕ್ಕುತ್ತದೆ, ಅದರಿಂದ ಪಾತ್ರೆಗಳನ್ನು ತಯಾರಿಸಿ ವರಮಾನವನ್ನು ಕೂಡ ಹೆಚ್ಚಿಸಬಹುದು. ಮಾನ್ಯ ಸಚಿವರು ಆ ಕಡೆ ಪ್ರವಾಸಮಾಡಿದಾಗ ಇದನ್ನು ಪರಿಶೀಲನೆ ಮಾಡಿದ್ದಾರೆ. ಸರ್ಕಾರದವರು ಈ ಎರಡು ಕೈಗಾರಿಕೆಗ

(ಶ್ರೀ ಬಿ. ಚಿಕ್ಕಣ್ಣ).

ಳನ್ನೂ ಅಲ್ಲಿ ಸ್ಥಾಪನೆಮಾಡಿ ಕೆಲಸ ಚೆನ್ನಾಗಿ ನಡೆಯುವಂತೆ ಏರ್ಪಾಡುಮಾಡಿ ಅಲ್ಲಿನ ಜನರಿಗೆ ಹೊಟ್ಟೆಗೆ ಅನ್ನ ಸಿಕ್ಕುವಹಾಗೆ ಮಾಡುತ್ತಾರೆಂದು ನಂಬುತ್ತೇನೆ.

ಇದಕ್ಕೆ ಸಂಬಂಧಪಟ್ಟಹಾಗೆ ಅರಸೀಕೆರೆಯಲ್ಲಿ ನಾರಿನ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಸಚಿವರು ಅಲ್ಲಿಗೆ ಬಂದಾಗ ಮನವಿಮಾಡಿದ್ದಾರೆ. ಅಲ್ಲಿ ಒಂದು ಸಲಕ್ಕೆ 8-10 ಲಕ್ಷ ಕಾಯಿ ಸುಲಿದು ಮಾರಾಟಕ್ಕೆ ತರುತ್ತಾರೆ. ಇಷ್ಟು ನಾರೂ ಕೂಡ ಅನ್ಯಾಯವಾಗುತ್ತಿದೆ. ಅಲ್ಲಿ ನಾರಿನ ಕೈಗಾರಿಕೆಯನ್ನು ಸ್ಥಾಪಿಸಿ ಒಂದು ಕಾರ್ಖಾನೆ ಏರ್ಪಡಿಸಿದರೆ ದೇಶಕ್ಕೆ ಉಪಯುಕ್ತವಾದ ಹಗ್ಗವನ್ನು ತಯಾರಿಸಬಹುದು. ಇದರ ಉಪಯೋಗ ನಮ್ಮ ದೇಶಕ್ಕೆ ಎಷ್ಟರಮಟ್ಟಿಗಿದೆಯೆಂಬುದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಮೈಸೂರು ದೇಶದಲ್ಲಿ ಶೇಕಡ 80 ಮಂದಿ ವ್ಯವಸಾಯಗಾರರಿರುವುದರಿಂದ ಹಗ್ಗಗಳ ಆವಶ್ಯಕತೆ ಬಹಳವಾಗಿದೆ. ಈಗ ಒಂದು ಮಾರು ಇರುವ ಒಳ್ಳೆಯ ಹಗ್ಗಕ್ಕೆ 3-4 ಆಣೆಗಳ ಬೆಲೆಯಿದೆ. ಹೊರದೇಶದಿಂದ, ತಿರುವಾಂಕೂರು—ಕೊಚ್ಚಿನಿಂದ ಅಲ್ಲಿ ಹಗ್ಗ ತಯಾರಾಗಿ ಇಲ್ಲಿಗೆ ಬಂದು ಮಾರಾಟವಾಗುತ್ತಿದೆ. ನಮ್ಮಲ್ಲಿ ಸಿಕ್ಕುವ ನಾರು ಅನ್ಯಾಯವಾಗುತ್ತಿದೆ. ಆದ್ದರಿಂದ ಈಗಲಾದರೂ ಅಲ್ಲಿ ನಾರಿನ ಕೈಗಾರಿಕೆಗೆ ತಕ್ಕ ಏರ್ಪಾಡು ಮಾಡಬೇಕೆಂದು ಮನವಿ ಮಾಡುತ್ತೇನೆ.

ಇದಕ್ಕೆ ಸಂಬಂಧಪಟ್ಟಹಾಗೆ ಅರಸೀಕೆರೆ ತಾಲ್ಲೂಕಿನಲ್ಲಿ ಬಹಳ ಪ್ರಸಿದ್ಧವಾದ ಹತ್ತಿಯಿದೆ. ಈಜಿಪ್ಷಿಯನ್ ಹತ್ತಿಬಿಟ್ಟರೆ ಅರಸೀಕೆರೆಯಲ್ಲಿ ಸಿಕ್ಕುವ ಹತ್ತಿ ಎರಡನೆಯ ದರ್ಜೆಯದು. ಅದನ್ನು ಎಂ.ಎ. V ಹತ್ತಿ ಎಂದು ಕರೆಯುತ್ತಾರೆ. ಅರಸೀಕೆರೆಯಲ್ಲಿ ಹತ್ತಿ ಕಾರ್ಖಾನೆ ಸ್ಥಾಪಿಸಿದರೆ ಜನರಿಗೆ ಅನುಕೂಲವಾಗುತ್ತದೆ; ರೈತರಿಗೆ ಒಳ್ಳೆಯ ಬೆಲೆ ಸಿಕ್ಕುವುದಲ್ಲದೆ ಜನತೆಗೂ ನೆರವುಸಿಕ್ಕಿ ಅನುಕೂಲವಾಗುತ್ತದೆ. ಸರ್ಕಾರದವರು ಆದಷ್ಟು ಜಾಗ್ರತೆ ಇದಕ್ಕೆ ಏರ್ಪಾಡುಮಾಡಬೇಕೆಂದು ಆ ತಾಲ್ಲೂಕಿನ ಜನರೆಲ್ಲರೂ ಹತ್ತಾರುವರ್ಷಗಳಿಂದ ಸರ್ಕಾರದಲ್ಲಿ ಮನವಿ ಮಾಡಿದ್ದಾರೆ. ಆದರೆ ಸರ್ಕಾರದವರು ಇದಕ್ಕೆ ಗಮನ ಕೊಟ್ಟಹಾಗೆ ಕಾಣಲಿಲ್ಲ. ಈಗಲಾದರೂ ಕೂಡ ನಾನು ತಿಳಿಸಿದಂಥ 3-4 ಸಂದರ್ಭಗಳಲ್ಲೂ ಕೂಡ ಜಾಗ್ರತೆ ತಕ್ಕ ಏರ್ಪಾಡು ಮಾಡಿ ಕೈಗಾರಿಕೆಗಳನ್ನು ಏರ್ಪಡಿಸುವುದನ್ನು ಕಾರ್ಯರೂಪಕ್ಕೆ ತಂದು ಅನುಕೂಲಪಡಿಸಬೇಕೆಂದು ಮನವಿ ಮಾಡುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಡಿಮ್ಯಾಂಡ್ ನಂಬರು 26 ಮತ್ತು 41ರ ಬಗ್ಗೆ ಸರ್ಕಾರದವರ ಹಣದ ಬೇಡಿಕೆಯನ್ನು ಅನುಮೋದಿಸುವುದಕ್ಕೆ ಮೊದಲು ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಇಡೀ ನಮ್ಮ ಸಂಸ್ಥಾನದ ಆಯವ್ಯಯದ ಅಂದಾಜನ್ನು ನೋಡಿದರೆ ಈ ಕೈಗಾರಿಕೆಗಳ ಬಗ್ಗೆ ನಾವು ಖರ್ಚು ಮಾಡುತ್ತಿರುವ ಹಣ ಬಹಳ ಹೆಚ್ಚಿನದೆಂದು ಮನವರಿಕೆಯಾಗುತ್ತದೆ. ಹಾಗಿದ್ದರೂ ಕೂಡ ಈ ಕೈಗಾರಿಕೆಗಳಿಂದ ಎಷ್ಟು ಆದಾಯ ಸರ್ಕಾರಕ್ಕೆ ಬರಬೇಕೋ ಅಷ್ಟು ಬಾರದಿರುವುದರಿಂದ ನಿಜವಾಗಿಯೂ ಈ ಕೈಗಾರಿಕೆಗಳಲ್ಲಿ ಮತ್ತು ಇವುಗಳನ್ನು ನಡೆಸುವುದರಲ್ಲಿ ಏನೋ ಒಂದು ಲೋಪವಿದೆಯೆಂಬುದು ಸ್ವಯಂವಿದಿತವಾಗಿದೆ. ಸರ್ಕಾರದವರು ಹೊಸಹೊಸ ಉದ್ಯಮ, ಕೈಗಾರಿಕೆಗಳನ್ನು ಪ್ರಾರಂಭಿಸುವುದನ್ನು ಬಿಟ್ಟು ಇರತಕ್ಕ ಕೈಗಾರಿಕೆಗಳಲ್ಲಿ ಏನೇನು ಲೋಪಗಳಿವೆಯೆಂಬುದನ್ನು ವಿಮರ್ಶೆ ಮಾಡಿ ಅವನ್ನು ಸರಿಪಡಿಸಿ ಕೈಗಾರಿಕೆಗಳು ಲಾಭದಾಯಕವಾಗಿ ನಡೆಯುವಂತೆ ಮಾಡುವುದಕ್ಕೆ ಕಡ್ಡಾಯವಾಗಿ ಗಮನ ಕೊಡಬೇಕು. ಎರಡನೆಯದಾಗಿ ಸರ್ಕಾರದವರು ಅನೇಕ ಖಾಸಗಿ ಉದ್ಯಮಗಳಲ್ಲಿ ಬಂಡವಾಳವನ್ನು ಷೇರು ರೂಪದಲ್ಲಿ ಹಾಕಿದ್ದಾರೆ. ಅವುಗಳು ಲಾಭದಾಯಕವಾಗಿ ನಡೆಯಬೇಕಾದರೆ ಅಲ್ಲಿನ ಆಡಳಿತದಲ್ಲಿ ಲೋಪದೋಷಗಳಿರಬಾರದು. ಸರ್ಕಾರದವರು ಷೇರು ಹಾಕಿರುವ ಉದ್ಯಮಗಳನ್ನು ಸರ್ಕಾರದವರೇ ನೇರವಾಗಿ ತೆಗೆದುಕೊಂಡು ನಡೆಸುವುದಕ್ಕೆ ಏರ್ಪಾಡು ಮಾಡಬೇಕು.

ಚನ್ನಪಟ್ಟಣದಲ್ಲಿ ಒಂದು ಸ್ಪನ್‌ಸಿಲ್ಕ್ ಕಾರ್ಖಾನೆಯಿದೆ. ಅಲ್ಲಿ ಕೂಡ ಸರ್ಕಾರದ ಷೇರು ಬಂಡವಾಳವಿದೆ. ಸರ್ಕಾರದವರು ಅಲ್ಲಿಗೆ ಸುಮಾರು ನಾಲ್ಕು ಜನ ಡೈರೆಕ್ಟರುಗಳನ್ನು ನಾಮಕರಣ ಮಾಡುತ್ತಾರೆ. ಇಡೀ ಭಾರತದೇಶದಲ್ಲಿ ಗೃಹ ಕೈಗಾರಿಕೆಗಳಲ್ಲಿ ಪ್ರಗತಿಯುತವಾದುದು ರೇಷ್ಮೆ ಕೈಗಾರಿಕೆಯೆಂದು ಭಾವಿಸಿದ್ದೇವೆ. ಇಡೀ ಭಾರತದಲ್ಲಿರುವ ಸ್ಪನ್‌ಸಿಲ್ಕ್ ಫ್ಯಾಕ್ಟರಿ ಇದೊಂದೇ. ಹಾಗಿದ್ದರೂ ಚನ್ನಪಟ್ಟಣದಲ್ಲಿರುವ ಫ್ಯಾಕ್ಟರಿ ಚೆನ್ನಾಗಿ ಕೆಲಸಮಾಡುತ್ತಿಲ್ಲವೆಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಸರ್ಕಾರದವರು ಈ ಫ್ಯಾಕ್ಟರಿಯವರಿಗೆ 15 ಅಥವಾ 16 ಲಕ್ಷ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಮತ್ತೆ ಸಾಲಕ್ಕೆ ಕೋರಿಕೆ ಬಂದಿದೆ. ಸರ್ಕಾರದವರು ಇದರಲ್ಲಿ ಷೇರು ರೂಪವಾಗಿ ಬಂಡವಾಳವಿಟ್ಟಿದ್ದರೂ ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟ ನಾಲ್ಕು ಜನ ಡೈರೆಕ್ಟರುಗಳಿದ್ದರೂ ಈ ಫ್ಯಾಕ್ಟರಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡುತ್ತಿಲ್ಲ. ಇದಕ್ಕೆ ಕೂಡಲೆ ಗಮನಕೊಟ್ಟು ಆಡಳಿತ ಸೂತ್ರವನ್ನು ಸರ್ಕಾರ ವಹಿಸಿಕೊಂಡು ಈ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹಣ್ಣುಗಳು ಕೆಡದಂತೆ ಶೇಖರಿಸಿಡಲು ಒಂದು ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಹಿಂದೆ ಅನೇಕ ಸಲ ಚರ್ಚೆಯಾಗಿದೆ, ಅನೇಕ ಸಂದರ್ಭಗಳಲ್ಲಿ ಸಲಹೆ ಮಾಡಿದೆ. ಅದರಂತೆ ಮೈಸೂರು ಪಟ್ಟಣದ ಬಳಿ ಒಂದು ಕೈಗಾರಿಕೆ ಸ್ಥಾಪನೆ ಮಾಡಲು ಸರ್ಕಾರದವರು ಮನಸ್ಸು ಮಾಡಿದ್ದಾರೆಂದು ತಿಳಿದುಬಂದಿದೆ. ಆದರೆ ಬೆಂಗಳೂರಿನ ಸುತ್ತುಮುತ್ತಲೂ ಬೆಳೆಯುವಷ್ಟು ಹಣ್ಣುಗಳು ಮೈಸೂರಿನ ಕಡೆ ಇಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಅಂಶ. ಹಾಗಿರುವಾಗ ಯಾವ ಸೌಲಭ್ಯವಿದೆಯೆಂದು ಇದಕ್ಕೆ ಮೈಸೂರನ್ನು ಆರಿಸಿದರೋ ಗೊತ್ತಿಲ್ಲ. ಈ ರೀತಿ ಮೈಸೂರಿನಲ್ಲಿ ಮಾಡಬೇಕೆಂದು ಯೋಚಿಸುತ್ತಿದ್ದರೆ ಅದನ್ನು ಬಿಡಬೇಕು. ಈ ಒಂದು ಉದ್ಯಮ ಯಶಸ್ವಿಯಾಗಿಯೂ ಲಾಭದಾಯಕವಾಗಿಯೂ ನಡೆಯಲು ಬೆಂಗಳೂರಿನಲ್ಲಿ ಹೆಚ್ಚು ಸೌಲಭ್ಯವಿದೆ. ಇಲ್ಲಿ ಮಾಡಿದರೆ ಹೆಚ್ಚು ಟ್ರಾನ್ಸ್‌ಪೋರ್ಟೇಷನ್ ಛಾರ್ಜಸ್ ಬೀಳುವುದಿಲ್ಲ, ಖರ್ಚು ಕಡಮೆ. ಹಣ್ಣು ಹೆಚ್ಚಾಗಿ ಬೆಳೆಯದಿರುವ ಕಡೆ ಸ್ಥಾಪಿಸಿದರೆ ಹಣ್ಣುಗಳನ್ನು ದೂರದಿಂದ ಅಲ್ಲಿಗೆ ಸಾಗಿಸುವ ಖರ್ಚು ವಗೈರೆ ಹೆಚ್ಚುತ್ತದೆ. ಆದ್ದರಿಂದ ಬೆಂಗಳೂರೇ ಹಣ್ಣನ್ನು ಕೆಡದಂತೆ ಶೇಖರಿಸಲೂ ಮತ್ತು ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೂ ಯೋಗ್ಯವಾಗಿದೆ ಮತ್ತು ಇದರ ಸುತ್ತುಮುತ್ತ ಹೆಚ್ಚಿನ ಹಣ್ಣು ಬೆಳೆಯುವ ಪ್ರದೇಶವಿದೆ. ಇದನ್ನು ಗಮನಿಸಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Sri M. RAJASEKHARA MURTHY (Yelandur).—The silk industry is a

cottage industry which is providing subsidiary occupation to the extent of nearly 2 lakhs of families in our State. Even if the Government spend crores of rupees on any other cottage industry, it is not possible to provide employment to the people who are now living in the rural parts to such a large extent. Such an industry has now received a rude shock, particularly after the war. Taking the situation of the troubles that have come up before this industry, the Government have decided to spend to the extent of Rs. 6 crores in the Socond Five-Year Plan. Even the State Government are providing a good sum in their budget. But unfortunately, the amount that is made available both by the Centre as well as the State Government is not being spent in that particular year. The Central Silk Board has now provided to the extent of Rs. 23 lakhs. Till now the amount that is spent so far by the State Government is only Rs. 3·5 lakhs. Even in the State budget, if you look into it, you will find that in the year 1950-51 the total amount provided is Rs. 4 lakhs and the amount spent is Rs. 69,487. 51-52: The amount provided is Rs. 4,21,500 and the amount spent is Rs. 58,240. 1952-53: The amount provided in the budget is Rs. 2,81,000 and the amount spent is Rs. 10,717. 1953-54: The amount provided in the budget is Rs. 3,29,400 and the amount spent is Rs. 88,522. 1954-55: The amount provided is Rs. 3,94,300 and the amount spent is Rs. 2,47,270. 1955-56: The amount provided is Rs. 22,95,400 and the amount that is spent is Rs. 5,67,500. That particular department is not spending the amount that is made available in the Budget. I know the Director of Sericulture is posted with all the problems connected with the silk industry and he has done wonderful service. In spite of that, the schemes have not been executed because there is no adequate staff in the department. Nobody is to be blamed for that. I have tabled cut motions in this connection even during the previous session that a special officer of the grade of Assistant Director should be appointed only for the purpose of executing the schemes. Even the Central Silk Board has come forward and said that they are going to finance to the extent of 50 per cent that the State Government is going to incur on this account. With all that, the Government have not been able to appoint an officer so far. I expect that the Government will take prompt action in this matter.

The second thing I would like to touch upon is the nationalisation of the Mysore Silk Filature. The Mysore Silk Filature was started about 15 years back with 7 branches and formerly it was providing employment to the extent of nearly 2,000 labourers. Now after the war—of course during the period of war it was able to make some profit—after the war it received a rude shock and some of the branches of the Silk Filature have been closed down for want of finance. The Government have already given a loan of Rs. 11 lakhs and the interest that accrued on this account amounts to about Rs. 2 lakhs. Unless financial help is forthcoming from the State Government or the Government themselves take over this industry and run it under their own management, control and ownership, it is not possible to run this industry on a rational basis. Therefore, in the interests of the sericulturists and also in the interests of the labourers, the Government should take immediate action. This question was raised in 1953. From 1953 till now for the last three years the Government are singing the same song and saying that the file is under consideration. The file is hit like a football from one office to another without securing any goal. The Government seem to have been decided to be undecided, definite to be indefinite. . . .

Mr. SPEAKER.—The Hon'ble Member must close.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ—ಈಗಾಗಲೇ ನಮ್ಮ ಮಾನ್ಯ ಮಿತ್ರರಾದ ಶ್ರೀ ರಾಜಶೇಖರಮೂರ್ತಿಯವರು ರೇಷ್ಮೆ ಕೈಗಾರಿಕೆಯ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ಆದರೆ ನಾನೂ ಮತ್ತು ಈ ಮಾನ್ಯ ಸಭೆಯ ಅನೇಕ ಸದಸ್ಯರೂ ಈ ವಿಚಾರವಾಗಿ ಹಿಂದೆ ಎಷ್ಟೋ ಸಾರ್ತಿ ಅನೇಕ ವಿಚಾರಗಳನ್ನು ಹೇಳಿದ್ದೇವೆ. ಆದಾಗ್ಯೂ ಈ ರೇಷ್ಮೆ ಕೈಗಾರಿಕೆಗೆ ಸರ್ಕಾರದವರು ಯಾವ ಒಂದು ವಿಧವಾದ ಸ್ಪೂರ್ತಿಯನ್ನೂ ಕೊಟ್ಟ ಹಾಗೆ ಕಾಣುವುದಿಲ್ಲ. 1949ರಲ್ಲೇ ಈ ರೇಷ್ಮೆ ತಯಾ-

(ಶ್ರೀ ಜಿ. ಪಾಪಣ್ಣ.)

ರಿಕೆಯ ವಿಚಾರದಲ್ಲಿ ಒಂದು ಬೋರ್ಡು ಪ್ರಾರಂಭವಾಯಿತು. ಆಗಿನಿಂದಲೂ ವಿಶೇಷವಾಗಿ ಕೇಂದ್ರ ಸರ್ಕಾರದವರು ಈ ಕೈಗಾರಿಕೆಗೆ ಗ್ರಾಂಟನ್ನು ಕೊಡುತ್ತಿದ್ದಾರೆ. ಈ ಕೈಗಾರಿಕೆಗೆ ಈ ವರ್ಷ ಒದಗಿಸಲಾಗಿದ್ದ 23 ಲಕ್ಷ ರೂಪಾಯಿಗಳ ನಿಧಿಯಲ್ಲಿ ಕೇವಲ ಮೂರು ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿ ಉಳಿದ ಮೊಬಲಗೆಲ್ಲಾ ಲ್ಯಾಪ್ಸಾಗಿ ಹೋಯಿತು. ಇದೊಂದು ದೊಡ್ಡ ಗೃಹಕೈಗಾರಿಕೆ, ಹಾಗೂ ಗ್ರಾಮಕೈಗಾರಿಕೆಯಾಗಿದೆ. ಈ ಉದ್ಯಮಕ್ಕೆ ಆಲ್ ಇಂಡಿಯಾ ಸಿಲ್ಕ್ ಬೋರ್ಡಿನವರು ಯಥೇಷ್ಟವಾಗಿ ಹಣವನ್ನು ಕೊಡುತ್ತಿದ್ದಾರೆ. ಹಾಗೆ ಅವರು ಕೊಡತಕ್ಕಂಥ ಮೊಬಲಗನ್ನು ನಮ್ಮ ಸಂಸ್ಥಾನ ಸರಿಯಾಗಿ ಖರ್ಚು ಮಾಡುತ್ತಿಲ್ಲ. ಇಲ್ಲಿಯವರೆಗೆ ಯಾವ ಯಾವ ಬೋರ್ಡಿನವರು ನಮಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ, ಆ ಪೈಕಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಯಿತು ಎಂಬತಕ್ಕ ವಿಚಾರಗಳನ್ನೆಲ್ಲಾ ಈಗ ಸರ್ಕಾರದವರು ತಿಳಿಸಬೇಕಾದದ್ದು ಅವರ ಮುಖ್ಯ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಕೈಗಾರಿಕೆಯ ವಿಚಾರದಲ್ಲಿ ಕೇಂದ್ರ ಸರ್ಕಾರದ ನೀತಿಯೇ ಒಂದು ರೀತಿಯಾಗಿದೆ, ನಮ್ಮ ಸರ್ಕಾರದ ನೀತಿಯೇ ಮತ್ತೊಂದು ರೀತಿಯಾಗಿದೆ. ಇದನ್ನು ನೋಡಿದರೆ "ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು" ಎನ್ನುವ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿರುವಂತೆ ಭಾಸವಾಗುತ್ತಿದೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೊಂದು ಸಹಕಾರ ಕೊಡತಕ್ಕ ರೀತಿಯಲ್ಲಿ ವರ್ತಿಸುತ್ತಿಲ್ಲ. ಈ ರೀತಿ ಆಗಬಾರದು, ಎಂಬ ಬಗ್ಗೆ ಅನೇಕ ಮಾನ್ಯ ಸದಸ್ಯರು ಇದೇ ಸಭೆಯಲ್ಲಿ ಒತ್ತಿ ಹೇಳಿರುತ್ತಾರೆ. ಅಷ್ಟು ಹೇಳಿದ್ದಾಗ್ಯೂ ಈ ದಿವಸ ಆ ವಿಚಾರಗಳು ಯಾವ ಮಟ್ಟದಲ್ಲಿ ನಡೆಯುತ್ತಿವೆ ಎನ್ನುವುದಾಗಲಿ ಅಥವಾ ಈ ಉದ್ಯಮ ಯಾವ ಪರಿಸ್ಥಿತಿಯಲ್ಲಿ ಮುಂದುವರಿಯುತ್ತಿದೆ ಎನ್ನುವುದೊಂದೂ ನಮಗೆ ಅರ್ಥವಾಗುತ್ತಿಲ್ಲ. ಹೀಗಾಗಿ ನಮಗೆ ಚನ್ನಪಟ್ಟಣ ಸಿಲ್ಕ್ ಫಿಲೇಚರ್ ವಿಚಾರದಲ್ಲಿ ಒಂದೂ ತಿಳಿಯದಂತಾಗಿವೆ. ಆದರೆ ಶ್ರೀ ಎ. ವಿ. ನರಸಿಂಹರೆಡ್ಡಿಯವರು ಹೇಳಿದ ಹಾಗೆ, ಚನ್ನಪಟ್ಟಣ ಸ್ಪನ್ ಸಿಲ್ಕ್ ವಿಚಾರದಲ್ಲಿ ಹೇಳಬೇಕೆಂದರೆ ಇದೊಂದು ನಮ್ಮ ದೇಶಕ್ಕೆ ಬಹಳ ಮುಖ್ಯವಾದಂಥ ಕೈಗಾರಿಕೆ ಕಾರ್ಖಾನೆ. ನಮ್ಮ ಇಡೀ ಇಂಡಿಯಾದೇಶಕ್ಕೇ ಇಂಥ ಕಾರ್ಖಾನೆ ಇರತಕ್ಕದ್ದು ಇದೊಂದೇ ಒಂದು. ಇಂಥ ಕಾರ್ಖಾನೆಯನ್ನು ಈ ದಿವಸ ಯಾರೋ ಖಾಸಗಿ ಜನಗಳಿಗೆ ಬಾಡಿಗ್ಗೆ ಕೊಟ್ಟಿದ್ದಾರೆ. ಹಾಗೆ ಕೊಟ್ಟಿರುವುದರ ಜೊತೆಗೆ ದುಡ್ಡನ್ನು ಬೇರೆ ಸಾಲ ಕೊಟ್ಟಿದ್ದಾರೆ. ಆದರೆ ಈ ದಿವಸ ಈ ವಿಷಯ ಏನಾಗಿದೆ, ಯಾವ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ತಿಳಿಸುವುದಕ್ಕೆ ಇವರಿಗೆ ಶಕ್ತಿ ಇಲ್ಲ. ಇನ್ನು ಇದೇ ರೀತಿಯಾಗಿ ಅನೇಕ ಕೈಗಾರಿಕೆ ಕಾರ್ಖಾನೆಗಳವರಿಗೆ ವಿಶೇಷ ದುಡ್ಡನ್ನು ಸಾಲವಾಗಿ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಯಾವ ಉದ್ದೇಶದಿಂದ ಹಾಗೆ ಸಾಲ ಕೊಟ್ಟಿದ್ದಾರೋ ಆ ಉದ್ದೇಶವನ್ನು ಈ ದಿವಸ ಖಂಡಿತವಾಗಿಯೂ ಅವರು ನೆರವೇರಿಸುತ್ತಿಲ್ಲ. ದೇವನಹಳ್ಳಿಯಲ್ಲಿ ಕರ್ಣಾಟಕ ಫಿಲೇಚರ್ ಸಿಲ್ಕ್ ಎಂದು ಒಂದು ಕಂಪೆನಿಯಿದೆ. ಆ ಕಂಪೆನಿಗೆ 40 ಸಾವಿರ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಹಾಗೆ ಸಾಲ ಕೊಟ್ಟಿರತಕ್ಕದ್ದರ ಉದ್ದೇಶ ಅಲ್ಲಿ ಒತ್ತಾಯಪೂರ್ವಕವಾಗಿ ಉತ್ತಮ ರೇಷ್ಮೆ ಗೂಡುಗಳನ್ನು ತಯಾರು ಮಾಡಬೇಕೆಂಬುದೇ ಆಗಿದೆ ಎಂದು ಹೇಳಿದ್ದರು. ಆದರೆ ಇನ್ನಾದರೂ ನಮ್ಮ ಸರ್ಕಾರದವರು ಈ ಆಲಸ್ಯಮನೋಭಾವನೆಯನ್ನು ಬಿಟ್ಟು ಈ ಕೈಗಾರಿಕೆಯು ನಮ್ಮ ದೇಶದಲ್ಲಿ ಮುಂದುವರಿಯುವಂತೆ ಮಾಡಲು ಮನಸ್ಸು ಮಾಡುತ್ತಾರೆಂದು ನಂಬಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಮ್ಮ ದೇಶದಲ್ಲಿ ಈ ಹೊಸ ಕೈಗಾರಿಕೆಗಳು ಸ್ಥಾಪನೆಯಾಗಬೇಕಾದುದು ಎಷ್ಟು ಮುಖ್ಯವಾದದ್ದೋ, ಅವುಗಳು ಮುಂದುವರಿಯುವುದೂ ಮತ್ತು ಸ್ಥಾಪಿಸಿದಂಥ ಕೈಗಾರಿಕೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಅವುಗಳಿಂದ ಹೆಚ್ಚು ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲೂ ಮತ್ತು ಅವುಗಳಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರತಕ್ಕ ರೀತಿಯಲ್ಲೂ ನಡೆಸಿಕೊಂಡು ಬರಬೇಕೆಂಬುದೂ ಸಹ ಅಷ್ಟೇ ಮುಖ್ಯವಾದದ್ದು. ಈ ದಿವಸ ನಮ್ಮ ಮಂಡ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆಯಿದೆ. ಅದರ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೂ ಮತ್ತು ಸರ್ಕಾರದವರ ಗಮನಕ್ಕೆ ಕೆಲವು ವಿಚಾರಗಳನ್ನು ತರುವುದಕ್ಕೂ ನಾನೀಗ ನಿಂತಿದ್ದೇನೆ. ಈ ದಿವಸ ಆ ಸಕ್ಕರೆ ಕಾರ್ಖಾನೆಗೆ ದಿವಸಕ್ಕೆ 1,500 ಟನ್ ಕಬ್ಬನ್ನು ಅರೆಯುವಂಥ ಶಕ್ತಿ ಇದೆ. ಆದರೆ ಈ ದಿವಸ ಅಲ್ಲಿರತಕ್ಕಂಥ ಇಂಜಿನಿಯರಿಂಗ್ ಇಲಾಖೆಯವರು ಎಷ್ಟರಮಟ್ಟಿಗೆ ಆ ಕಬ್ಬು ಬೆಳೆಯತಕ್ಕ ಪ್ರದೇಶಗಳಲ್ಲಿ ಈ ಕಬ್ಬಿನ ಬೆಳೆಗೆ ನೀರನ್ನು ಒದಗಿಸುತ್ತಿದ್ದಾರೆಂದರೆ ಆ ಕಾರ್ಖಾನೆಗೆ ಒಂದು ದಿವಸಕ್ಕೆ ಎಷ್ಟು ಪ್ರಮಾಣದ ಕಬ್ಬನ್ನು ಅರೆಯಲು ಶಕ್ತಿ ಇದೆಯೋ ಅಷ್ಟು ಕಬ್ಬನ್ನಾದರೂ ಬೆಳೆಯುವುದಕ್ಕೆ ಅವರು ಅವಕಾಶ ಮಾಡಿಕೊಟ್ಟಿಲ್ಲ.

ಇಷ್ಟು ಮಾತ್ರವೇ ಅಲ್ಲ. ಈಗ ಇರತಕ್ಕ ಶಕ್ತಿಯಿಂದ ಒಂದು ವರ್ಷ ಒಂಬತ್ತು ತಿಂಗಳು ಕೂಡ ಅರೆಯದೇ ಇರುವುದು ಅಂಕಿಅಂಶಗಳಿಂದ ಗೊತ್ತಾಗುತ್ತಾ ಇದೆ. ನೆಟ್ಟ ಒಂದು ವರ್ಷ ಎಂಟು ತಿಂಗಳಿನಲ್ಲಿ ಅರೆದರೆ ಎಷ್ಟು ಸಕ್ಕರೆ ಬರುತ್ತಾ ಇತ್ತೋ ಒಂದು ವರ್ಷ ಒಂಬತ್ತು ತಿಂಗಳಿನಲ್ಲಿ ಅರೆದರೆ ಅದರ ಅರ್ಧಭಾಗ ಬರುತ್ತಾ ಇದೆ ಎಂತಲೂ ಅಂಕಿಅಂಶದಿಂದ ಗೊತ್ತಾಗುತ್ತಾ ಇದೆ. ಅರ್ಧಕ್ಕೆ ಇಳಿದಾಗ ಅದರಿಂದ ರೈತರಿಗೂ ವಿಶೇಷವಾದ ನಷ್ಟ ಮತ್ತು ಸರ್ಕಾರಕ್ಕೂ ವಿಶೇಷವಾಗಿ ನಷ್ಟವಾಗುವುದನ್ನು ಒತ್ತಿ ಹೇಳಬೇಕಾದ ಅಗತ್ಯವಿಲ್ಲ. ಇಷ್ಟು ಮಾತ್ರವೇ ಅಲ್ಲ. ಒಂದು ವರ್ಷ ಒಂಬತ್ತು ತಿಂಗಳವರೆಗೂ ಜಮೀನಿನಲ್ಲಿ ನೀರು ಹಾಕಿದರೆ ಆ ಜಮೀನಿನ ಸಾರ ಕೂಡ ಹೋಗಿ ಕ್ರಮೇಣ ಚೌಳು ಉತ್ಪನ್ನವಾಗಿ ಭೂಮಿಯಲ್ಲಿ ಬೆಳೆ ಕಮ್ಮಿಯಾಗುವುದು ಕಂಡುಬರುತ್ತಾ ಇದೆ. ಕೇಂದ್ರ ಆಹಾರ ಸಚಿವರಾದ ಅಜಿತ್‌ಪ್ರಸಾದ್ ಜೈನ್‌ಅವರು ಮಂಡ್ಯಕ್ಕೆ ದಯಮಾಡಿಸಿದ್ದಾಗ ಇದರ ಶಕ್ತಿಯನ್ನು ದಿನ ಒಂದಕ್ಕೆ ನಾಲ್ಕು ಸಾವಿರ ಟನ್‌ವರೆಗೂ ಹೆಚ್ಚಿಸಿದರೆ ಇದರಿಂದ ರೈತರಿಗೂ ಹೆಚ್ಚು ಅನುಕೂಲವಾಗುತ್ತದೆ ಮತ್ತು ಕಾರ್ಖಾನೆಯವರಿಗೂ ಹೆಚ್ಚು ಆದಾಯ ಬರುತ್ತದೆ ಎಂದಾಗ ಒಟ್ಟು ಖರ್ಚು ಎಷ್ಟಾಗುತ್ತದೆಯೋ ಅದರಲ್ಲಿ ಅರ್ಧ ಭಾಗವನ್ನು ಇಂಡಿಯಾ ಸರ್ಕಾರದವರು ಕೊಡುತ್ತೇವೆ ಇನ್ನರ್ಧ ಭಾಗವನ್ನು ಸಂಸ್ಥಾನ ಸರ್ಕಾರದವರು ವಹಿಸಿಕೊಂಡರೆ ಆಗಬಹುದು ಎಂದು ಹೇಳಿದರು. ನಮ್ಮ ಸರ್ಕಾರದವರು ದಯವಿಟ್ಟು ಈ ಶಕ್ತಿಯನ್ನು ನಾಲ್ಕು ಸಾವಿರ ಟನ್ನಿಗೆ ಹೆಚ್ಚಿಸಿ ಒಂದು ವರ್ಷ ಎರಡು ತಿಂಗಳಿನೊಳಗೇ ನೆಟ್ಟ ಕಬ್ಬನ್ನು ಅರೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೂ ಒಂದೇ ಒಂದು ವಿಷಯ. ಒಂದು ವರ್ಷ ಒಂಬತ್ತು ತಿಂಗಳು ನೀರು ಹರಿಯುವುದರಿಂದ ತಮಗೆ ಗೊತ್ತಿರುವ ಹಾಗೆ ಕನ್ನಂಬಾಡಿಯಲ್ಲಿ ಅನೇಕ ಸ್ವಾರ್ಥಿ

ನೀರು ಒಣಗಿಹೋಗಿದೆ. ಒಂದು ವರ್ಷ ಕನ್ನಂಬಾಡಿಯಲ್ಲಿ ಸಂಪೂರ್ಣವಾಗಿ ನೀರು ಒಣಗಿ ಕೋಟ್ಯನು ಕೋಟಿ ರೂಪಾಯಿ ಆದಾಯ ಬರುತ್ತಾ ಇದ್ದುದು ಕಮ್ಮಿ ಆಗಿದೆ. ಆದ್ದರಿಂದ ಈ ಶಕ್ತಿಯನ್ನು ಹೆಚ್ಚಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

(*A number of Members rose*)

Mr. SPEAKER.—Hon'ble Members who have not spoken at all must be given chance.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ಸ್ವಾಮಿ, ಬಹಳ ಹೆಚ್ಚು ಹಣ ಖರ್ಚಾಗತಕ್ಕ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಾನ್ಯ ಮಂತ್ರಿಗಳೂ ಮತ್ತು ಮೈಸೂರು ಸರ್ಕಾರದವರೂ ಈ ಮೊಬಲಗು ಸದ್ವಿನಿಯೋಗವಾಗುವಂತೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಪದೇಪದೇ ಮಾನ್ಯಸದಸ್ಯರನೇಕರು ಹೇಳುತ್ತಾ ಇದ್ದೇವೆ. ಎಸ್ಟಿಮೇಟ್ ಕಮಿಟಿಯವರು ಈ ವಿಚಾರದಲ್ಲಿ ಏನು ವರದಿ ಕೊಟ್ಟಿದ್ದಾರೆ, ಯಾವರೀತಿ ಕಾರ್ಯಗತವಾಯಿತು ಎಂಬುದು ಸ್ವಲ್ಪ ಅನುಮಾನದ ಪ್ರಶ್ನೆಯಾಗಿದೆ. ಈಗ ಇರತಕ್ಕ ಎಸ್ಟಿಮೇಟ್ ಕಮಿಟಿಯವರ ವರದಿ ಇದುವರೆಗೂ ಬಂದಿಲ್ಲ. ಬಂದಿದ್ದರೆ ಇನ್ನೂ ಸ್ವಲ್ಪ ಸಹಾಯಕವಾಗುತ್ತಾ ಇತ್ತೋ ಏನೋ. ಏಕೆಂದರೆ ಸರ್ಕಾರದವರು ಎಸ್ಟಿಮೇಟ್ ಕಮಿಟಿಯನ್ನು ಮಾಡಿದಮೇಲೆ ಅವರು ಲೋಪದೋಷ ಏನು ಹೇಳುತ್ತಾರೋ ಅದನ್ನು ಆಗಾಗ್ಯೆ ಸರಿಪಡಿಸಿಕೊಂಡು ಹೋದರೆ ಇಲಾಖೆಯಲ್ಲಿರತಕ್ಕ ಲೋಪದೋಷಗಳು ಪರಿಹಾರವಾಗುವುದಕ್ಕೆ ಸಹಾಯಕವಾಗುತ್ತದೆ ಎಂದು ಹೇಳುತ್ತೇನೆ.

ಈಗ ಬೆಂಗಳೂರಿನ ಸುತ್ತಮುತ್ತಲೂ ಕೈಗಾರಿಕೆಗಳನ್ನು ಕೇಂದ್ರೀಕರಿಸುತ್ತಾ ಇದ್ದಾರೆ. ಒಂದು ದೊಡ್ಡ ಲೋಪ ಏನಾಗುತ್ತಿದೆ ಎಂದರೆ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡುವಾಗ ಅವರಿಗೆ ಎಷ್ಟು ಎಕರೆ ಜಮೀನು ಖಚಿತವಾಗಿ ಬೇಕು ಎನ್ನುವ ಲೆಕ್ಕ ಇಲ್ಲದೆ 50-100 ಎಕರೆ ಬೇಕಾಗಿದ್ದರೆ 300-400 ಎಕರೆ ಒಂದೇ ಸಾರಿಗೆ ತೆಗೆದುಕೊಳ್ಳುತ್ತಾರೆ. ಈ ರೀತಿ ತೆಗೆದುಕೊಂಡರೆ ಅಲ್ಲಿರತಕ್ಕ ರೈತನ ಸ್ಥಿತಿ ಏನಾಗಬೇಕು? ಅವರಿಗೆ ಬೇರೆ ರೀತಿಯಲ್ಲಿ ಪರಿಹಾರವನ್ನೇನೋ ಕೊಡುತ್ತಾರೆ. ಆದರೆ ಈ ರೀತಿ ಅವನ ಜಮೀನನ್ನೆಲ್ಲಾ ಕಿತ್ತುಕೊಂಡು ಆ ಗ್ರಾಮವನ್ನೇ ಬಿಟ್ಟು ಯಾವುದೋ ಒಂದು ರೀತಿಯಲ್ಲಿ ಅವನು ತನ್ನ ಜೀವನ ಕ್ರಮವನ್ನೇ ಬದಲಾಯಿಸಿಕೊಳ್ಳುವಂತೆ ಮಾಡತಕ್ಕ ಸರ್ಕಾರದ ನೀತಿ ಸರಿಯಾದ ನೀತಿಯಲ್ಲ. ಆ ರೀತಿ ಮಾಡಬಾರದು ಎಂದು ಹೇಳುತ್ತೇನೆ. ಕೈಗಾರಿಕೆಗಳನ್ನು ಪ್ರಾರಂಭ ಮಾಡುವಾಗ ಆ ಗ್ರಾಮದಲ್ಲಿರತಕ್ಕ ರೈತನಿಗೆ ಪರಿಹಾರ ಕೊಡುವುದು ಒಂದೇ ಅಲ್ಲದೆ, ಬೇರೆ ರೀತಿಯ ಜಮೀನಿನ ಅನುಕೂಲ ಮಾಡದೆ ಈ ರೀತಿ ಇಂಡಿಯಾ ಸರ್ಕಾರದವರು ಭಾರಿ ಕೈಗಾರಿಕೆಗಳನ್ನು ಬೆಂಗಳೂರಿನ ಸುತ್ತಮುತ್ತಲೂ ಕಾನ್ಸೆಟ್ರೇಟ್ ಮಾಡುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ.

ಹಣ್ಣುಗಳನ್ನು ಪ್ರಿಸರ್ವ್ ಮಾಡುವ ವಿಷಯದಲ್ಲಿ ಅನೇಕರು ಹೇಳಿದ್ದಾರೆ. ಪ್ರಪಂಚದಲ್ಲಿ ಯಾವ ಹಣ್ಣು ಬೆಳೆಯುವುದಕ್ಕೆ ಅವಕಾಶವಿಲ್ಲವೋ ಅಂಥ ಹಣ್ಣು ಬೆಂಗಳೂರು ಸುತ್ತಮುತ್ತಲಿನ 30-35 ಮೈಲಿ ಫಾಸಲೆಯಲ್ಲಿ ಬೆಳೆಯುವುದಕ್ಕೆ ಅನುಕೂಲವಿದೆ ಎಂದು ತಜ್ಞರು ಹೇಳಿದ್ದಾರೆ. ಅದು ಈಗ ಕಾರ್ಯಗತವಾಗಿ ನಡೆಯುತ್ತಾ ಇದೆ. ನಮ್ಮ ಮೈಸೂರು ಸರ್ಕಾರದವರು ಇದಕ್ಕೆಷ್ಟು ಆಫೀಸರನ್ನು ಪರದೇಶಕ್ಕೆ ಕಳುಹಿಸಿದ್ದರು ಎಂದು ಕೇಳುತ್ತೇವೆ. ಅವರು ಎಲ್ಲಿದ್ದಾರೆ ಏನು ಕಾರ್ಯಕ್ರಮ ಕೈಗೊಳ್ಳುತ್ತಾಯಿದ್ದಾರೆ ಎಂಬುದು ಅರ್ಥವಾಗಿಲ್ಲ. ರೈತರು ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿ ಹಣ್ಣುಗಳನ್ನು ಬೆಳೆಯುತ್ತಾರೆ. ಆ ರೀತಿ ಬೆಳೆದ ಹಣ್ಣುಗಳಿಗೆ ಸರಿಯಾದ ರಕ್ಷಣೆ ಸಿಕ್ಕುವಂತೆ ಸಹಾಯಮಾಡಿ ಕೊಡುವುದು ಸರ್ಕಾರದವರ ಕರ್ತವ್ಯವಾಗಿದೆ.

ಮೈಸೂರಿನಲ್ಲಿ ರೇಷ್ಮೆ ನೇಯುವ ಕಾರ್ಖಾನೆ ಇದೆ. ಅಲ್ಲಿ ಯಾವ ಸಮಯದಲ್ಲಿ ನೋಡಿದರೂ ಸಹ ಒಂದೇ ರೇಟು ಇರುತ್ತದೆ. ಈ ರೀತಿ ಏಕೆ ಮಾಡುತ್ತಾರೋ ಗೊತ್ತಿಲ್ಲ. ಅಲ್ಲಿರುವವರು business line ಅಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದು ಖಚಿತವಾಗಿ ಗೊತ್ತಾಗುತ್ತದೆ. ಅವರಿಗೆ ಸಂಬಳ ಕೊಡುತ್ತಾಯಿದ್ದೀರಿ, ಅವರು ಯಾವುದೋ ಒಂದು ರೀತಿಯಲ್ಲಿ ತಮಗೆ ಅನುಕೂಲವಾದಂತೆ ಕೆಲಸ ಮಾಡುತ್ತಾ ಇದ್ದಾರೆ. ಇದರಿಂದ ಸರ್ಕಾರದವರಿಗೆ ಬಹಳ ನಷ್ಟವಾಗುತ್ತಿದೆ. ಪ್ರೈವೇಟ್ ಲಿಮಿಟೆಡ್ ಕನ್ಸರ್ನ್‌ಗಳಲ್ಲಿ ಎಲ್ಲಿ ನೋಡಲಿ ಆದಾಯ ಬರುತ್ತಾ ಇದೆ. ಆದ್ದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಹತ್ತು ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಾ ಇರುವಾಗ ಪ್ರತಿಯೊಬ್ಬ ಸದಸ್ಯರಿಗೂ ಯಾವಯಾವ ಕಾರ್ಖಾನೆ, ಯಾವಯಾವ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಂಬುದು ತಿಳಿದಿರಬೇಕು. ಮತ್ತು ಪ್ರತಿಯೊಬ್ಬ ಸದಸ್ಯರೂ ಈ ವಿಷಯದಲ್ಲಿ ಕೊಡತಕ್ಕ ಸಲಹೆಗಳನ್ನು ಪರಿಶೀಲನೆ ಮಾಡಿ, ಯಾವ ಲೋಪವೂ ಆಗದಹಾಗೆ ನೋಡಿಕೊಳ್ಳಬೇಕಾದದ್ದು ಸರ್ಕಾರದ ಜವಾಬ್ದಾರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ರೇಷ್ಮೆ ಕೈಗಾರಿಕೆ ವಿಷಯದಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ರೇಷ್ಮೆ ಕೈಗಾರಿಕೆಯನ್ನು ಯಾರುಯಾರು ಅವಲಂಬಿಸಿದ್ದಾರೋ ಅಂಥ ಸುಮಾರು ಎರಡು ಲಕ್ಷ ಸಂಸಾರಗಳು, ನಮ್ಮ ಸಂಸ್ಥಾನದಲ್ಲಿ ಇವೆ. ಈ ಬೆಲೆಯ ಏರುಪೇರುಗಳಿಂದ ಅವರ ಒಂದು ಆರ್ಥಿಕ ದುಃಸ್ಥಿತಿ ಹೇಳತೀರದು. ಇದನ್ನು ಸುಮಾರು $4\frac{1}{2}$ ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿ ಆಯಾಯ ಪ್ರಾಂತದಿಂದ ಬರತಕ್ಕ ಪ್ರತಿಯೊಬ್ಬ ಸದಸ್ಯರೂ ಸಭೆಯ ಗಮನಕ್ಕೂ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಮಂತ್ರಿಗಳ ಗಮನಕ್ಕೂ ತಂದರೂ ಸಹ ಈ ಏರುಪೇರನ್ನು ನಿಲ್ಲಿಸತಕ್ಕ ಒಂದು ಶಕ್ತಿ, ಸಾಮರ್ಥ್ಯ ಸರ್ಕಾರಕ್ಕೆ ಬರಲಿಲ್ಲವಲ್ಲ ಎಂದು ಹೇಳಿ ವಿಷಾದ ಪಡಬೇಕಾಗಿದೆ. ನಿಮ್ಮಲ್ಲಿದ್ದ ಶಕ್ತಿಯನ್ನು ವಿನಿಯೋಗಿಸಿಕೊಂಡಿದ್ದೀ ಆದರೆ ನಿಜವಾಗಿಯೂ ಸಂಬಂಧಪಟ್ಟ ಇಲಾಖೆಯವರು ಬಹಳ ಸುಲಭವಾದ ಯೋಜನೆಗಳನ್ನು ಮಾಡಬಹುದಾಗಿತ್ತು. ಈ ಏರುಪೇರು ಏಕೆ ಆಗುತ್ತಾ ಇದೆ ಎಂದರೆ Supply and Demandನ ಮೇಲೆ ಒಂದು ಹತೋಟಿ ಇಲ್ಲದೇ ಇರುವುದರಿಂದ ಆಗುತ್ತಾ ಇದೆ; ಇದನ್ನು ಆರ್ಥಿಕ ತಜ್ಞರಿಂದ ತಿಳಿಯಬೇಕಾದದ್ದು ಅನಾವಶ್ಯಕ. ನಮ್ಮ ಸ್ಥಳೀಯ ರೇಷ್ಮೆ ಉತ್ಪನ್ನವಾಗತಕ್ಕದ್ದು ಎಷ್ಟು ಮತ್ತು ಸ್ಥಳೀಯ ರೇಷ್ಮೆಗೆ ಸ್ಥಳದಲ್ಲಿ ಡಿಮ್ಯಾಂಡ್ ಎಷ್ಟಿದೆ ಎನ್ನುವುದನ್ನು ತಿಳಿದುಕೊಂಡಿದ್ದರೆ ಬೆಲೆ ನಿಗದಿ ಮಾಡಬಹುದಾಗಿತ್ತು ಎಂದು ನಾನು ಹೇಳಬಲ್ಲೆ. ಈಗಾಗಲೇ ನಮ್ಮಲ್ಲಿ ಸರ್ಕಾರ ಒಂದು ನೀತಿಯನ್ನು

(ಶ್ರೀ ಯು. ಎಂ. ಮಾದಪ್ಪ.)

ಅನುಸರಿಸಿದೆ. ಇಂಪೋರ್ಟ್ ಪಾಲಿಸಿಯಿಂದ ಸರ್ಕಾರಕ್ಕೆ 7½ ಲಕ್ಷ ರೂಪಾಯಿ ಸಂಪಾದನೆಯಾಗಿದೆ ಎಂದು ಹೇಳುವ ಸ್ಥಿತಿ ಇಲ್ಲ. ಜೊತೆಗೆ ಆರ್ಟಿಫಿಷಿಯಲ್ ಸಿಲ್ಕ್ ವ್ಯಾಪಾರವನ್ನೂ ಕೈಕೊಂಡ ಫಲಿತಾಂಶವಾಗಿ ನಮ್ಮ ರೇಷ್ಮೆ ಬೆಲೆ ಇಳಿದು ಹೋಯಿತು ಎಂದು ಹೇಳುತ್ತೇನೆ. ಹ್ಯಾಂಡ್‌ಲೂಂ, ಪವರ್‌ಲೂಂಗಳಿಗೆ ಸಾಕಾದಷ್ಟು ಕಚ್ಚಾರೇಷ್ಮೆ ಸಿಕ್ಕದೇ ಇರುವುದು ನಿಜ. 1951ರಲ್ಲಿ ಮೈಸೂರು ಸ್ಟೇಟ್ ಸೆಮಿನಾರ್ ಆದಾಗ,

> "Power-looms use filature silk and the quantity of filature raw silk is inadequate to meet the full requirements of the power looms in the State. Hence import of raw silk is necessary."

ಎಂದು ಹೇಳಿದ್ದಾರೆ. ಹಾಗಿದ್ದಮೇಲೆ, ಸಿಲ್ಕ್ ಫಿಲೇಚರಿನ ಉತ್ಪನ್ನವನ್ನು ಹೆಚ್ಚಿಸದೇ ಇದ್ದುದು ಸರ್ಕಾರದ ತಪ್ಪು.

2 P.M.

ಆದ್ದರಿಂದ Artificial Silk (ಕೃತಕ ರೇಷ್ಮೆ) ಹಿಂದೆ ಎಷ್ಟು ಹೆಚ್ಚಿಗೆ ಬರುತ್ತಿತ್ತೋ, ಅದೇ ಪ್ರಮಾಣದಲ್ಲಿಲ್ಲದಿದ್ದರೂ, ಈಗಲೂ ಹೆಚ್ಚಿಗೆಯೇ ಬರುತ್ತಿದೆಯೆಂದು ಹೇಳಬಲ್ಲೆ. ಅದಕ್ಕೆ ಬದಲು ಕೈಮಗ್ಗಕ್ಕೆ ಮತ್ತು ಪವರ್‌ಲೂಂಗೆ ಫಿಲೇಚರ್ ರೇಷ್ಮೆಯನ್ನೇ ಉಪಯೋಗಿಸುವುದಕ್ಕೆ ಅವಕಾಶವಿದೆ, ಉಪಯೋಗಿಸಬಹುದು ಎಂದು ಸೆಮಿನಾರ್‌ನಲ್ಲಿ ಕೂಡ ಹೇಳಿದ್ದಾರೆ. ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ಉತ್ಪತ್ತಿಯಾಗುವ ಸಿಲ್ಕನ್ನು ಪವರ್‌ಲೂಂಗಳಿಗೆ ಹಂಚುವ ಹತೋಟಿಯನ್ನು ಸರ್ಕಾರದವರು ಇಟ್ಟುಕೊಳ್ಳಬೇಕು. ಇದನ್ನು ಮಾಡಿ ಕೃತಕ ರೇಷ್ಮೆಯನ್ನು ತೆಗೆದುಕೊಳ್ಳುವ ರೀತಿಯಲ್ಲಿ ಫಿಲೇಚರ್ ರೇಷ್ಮೆಯನ್ನು ಕೊಂಡು ಮಾಡಬಹುದು. ಹೊರದೇಶದ ರೇಷ್ಮೆಯನ್ನು ವ್ಯಾಪಾರ ಮಾಡುವಂತೆ ನಮ್ಮ ದೇಶದ ರೇಷ್ಮೆಯನ್ನು ವ್ಯಾಪಾರ ಮಾಡಿದರೆ ನಮ್ಮ ದೇಶದ ರೇಷ್ಮೆಗೆ protection ಕೊಟ್ಟಂತಾಗುತ್ತದೆ. ಈಗಾಗಲೇ ಸರ್ಕಾರದವರು ಮೂರು emporiumಗಳನ್ನು ತೆಗೆಯುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಆ ಎಂಪೋರಿಯಂನಲ್ಲಿ ಸಿಲ್ಕ್ ವ್ಯಾಪಾರವನ್ನೂ ಕೈಕೊಳ್ಳುವುದಕ್ಕೆ ಅವಕಾಶವಿದೆಯೆಂದು ನಾನು ಹೇಳುತ್ತೇನೆ. ಆಮೇಲೆ ಉತ್ಪತ್ತಿಯಮೇಲೆ ಹೆಚ್ಚಿಗೆ ಕಂಟ್ರೋಲ್ ಇಟ್ಟುಕೊಳ್ಳತಕ್ಕ ಸಂಬಂಧವಾಗಿ ಖಾಸಗಿ ಮನುಷ್ಯರು ಸಿಲ್ಕ್ ಫಿಲೇಚರ್ ಜಾಯಿಂಟ್ ಸ್ಟಾಕ್ ಕಂಪೆನಿಯೊಂದನ್ನು ಮಾಡಿಕೊಂಡು ತಯಾರು ಮಾಡುತ್ತಿದ್ದಾರೆ. ಸರ್ಕಾರದವರು ಅದರಲ್ಲಿ ಷೇರು ತೆಗೆದುಕೊಳ್ಳುವುದರಿಂದಲೋ ಅಥವಾ ಬೇರೆ ರೀತಿಯಲ್ಲೋ encouragement ಕೊಡುವ ಪದ್ಧತಿಯಿತ್ತು. ಇದರಿಂದ production ಉತ್ತಮವಾಗುತ್ತಿತ್ತು. ಆದರೆ ಇತ್ತೀಚೆಗೆ ಟಿ-ನರಸೀಪುರದ ಫಿಲೇಚರ್ ಕಂಪೆನಿಯ ರೀತಿನೀತಿಗಳನ್ನು ನೋಡಿದರೆ ಬಹಳ ವಿಷಾದಕರವಾಗಿದೆ. ನಮ್ಮ ಡೈರೆಕ್ಟರುಗಳೇ ಬೇಕಾದಷ್ಟು ಜನರಿದ್ದರೂ, ಸರ್ಕಾರದವರು ಬೇಕಾದಷ್ಟು ಷೇರುಗಳನ್ನು ಕೊಂಡಿದ್ದರೂ ಆ ಕಂಪೆನಿಯ ಸ್ಥಿತಿಗತಿಗಳು ಆಶಾದಾಯಕವಾಗಿಲ್ಲ. ಸರ್ಕಾರದವರು ಪೂರ್ತ ಈ ಷೇರುಗಳನ್ನೆಲ್ಲಾ ಕೊಂಡುಕೊಳ್ಳಬೇಕು ಅಥವಾ liquidate ಮಾಡಬೇಕು. ಅಂತೂ voluntary liquidation ಮಾಡಬೇಕೇ ಅಥವಾ compulsory liquidation ಮಾಡಬೇಕೇ ಎಂದು ಒಂದು ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರದವರ ಮುಖ್ಯ ಕರ್ತವ್ಯವೆಂದು ಹೇಳುತ್ತೇನೆ.

ಈ ಸಂಬಂಧದಲ್ಲಿ ರೈತರಿಗೆ ಆಗಬೇಕಾದ ಒಂದೆರಡು ವಿಷಯಗಳನ್ನು ಹೇಳದೆ ಇದ್ದರೆ ತೀರದು. ಕೆಲವರು ಹೇಳುತ್ತಾರೆ ಪರದೇಶದ ರೇಷ್ಮೆ ಬಹಳ ಉನ್ನತ ಮಟ್ಟದಲ್ಲಿದೆ, ಕೈಮಗ್ಗದವರು ಅದನ್ನೇ ಆಶಿಸುತ್ತಾರೆ ಎಂದು. ಒಂದುವೇಳೆ ಅವರು ಹೇಳುವುದು ನಿಜವಾಗಿದ್ದರೆ ಅದು ಯಾರ ತಪ್ಪು? ನಮ್ಮ ದೇಶದ ರೇಷ್ಮೆಯನ್ನು ಆ ಮಟ್ಟಕ್ಕೆ ತರದೆ ಇದ್ದರೆ ನಮ್ಮ ದೇಶದ ರೇಷ್ಮೆಗೆ ಪುರಸ್ಕಾರ ದೊರಕಿಸಿಕೊಡದೆ ಇದ್ದರೆ ನಮ್ಮ ರೇಷ್ಮೆಗೆ ಸ್ಥಾನಮಾನ ಸಿಕ್ಕುತ್ತದೆಯೇ? ಆದ್ದರಿಂದ well subsidy ಕೊಟ್ಟು irrigated leavesನ್ನು ತಯಾರುಮಾಡಿ ನಮ್ಮ ರೇಷ್ಮೆಯನ್ನು ಉತ್ತಮಪಡಿಸುವುದಕ್ಕೆ ಏರ್ಪಾಡು ಮಾಡಬೇಕಾದ್ದು ಸರ್ಕಾರದವರ ಕರ್ತವ್ಯ. ಸುಧಾರಿತ ರೀತಿಯ ಚರಕದ ಬೇಸಿನ್‌ಗಳನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಸಾಲದ ರೂಪದಲ್ಲಿಯೋ ಗ್ರಾಂಟ್‌ರೂಪದಲ್ಲಿಯೋ ಹಣವನ್ನು ಕೊಟ್ಟು ಸಹಾಯಮಾಡುವುದು ಅವಶ್ಯಕ. ಮಾರ್ಕೆಟಿಂಗ್ ಅನುಕೂಲತೆಗಳನ್ನು ಮಾಡಿಕೊಡುವುದೂ ಕೂಡ ಹಾಗೆಯೇ ಅವಶ್ಯಕ. ಆದ್ದರಿಂದ ಕಕೂನ್‌ಗಳನ್ನು ಮಾರಾಟ ಮಾಡುವುದಕ್ಕೂ ದಾರವನ್ನು ಮಾರಾಟ ಮಾಡುವುದಕ್ಕೂ ಏರ್ಪಾಡುಗಳನ್ನೂ ಏಕಕಾಲದಲ್ಲಿ ಸ್ಥಾಪನೆ ಮಾಡಬೇಕಾದ್ದು ಅವಶ್ಯಕ. ಇದಕ್ಕಾಗಿ ತಮ್ಮ ಭಾಗದ್ದಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೇಂದ್ರಸರ್ಕಾರದವರು ಕೊಡುವುದಕ್ಕೆ ಸಿದ್ಧವಾಗಿದ್ದರೂ ನಮ್ಮ ಭಾಗದ್ದಾದ ಇನ್ನು ಹತ್ತುಲಕ್ಷ ರೂಪಾಯಿಗಳನ್ನು ಒದಗಿಸಿಕೊಳ್ಳುವ ಯೋಚನೆ ನಮ್ಮ ಸರ್ಕಾರದವರಿಗೆ ಬರಲಿಲ್ಲ ಎಂದು ನಾನು ವಿಷಾದಪಡುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಸರ್ಕಾರದ ಯಂತ್ರ ಏನೇ ಬದಲಾವಣೆಯಾದರೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡ ಹರಿಜನರ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲವಲ್ಲಾ ಎನ್ನಲಿಕ್ಕೆ ಒಂದು ಉದಾಹರಣೆಯನ್ನು ಸರ್ಕಾರದವರ ಗಮನಕ್ಕೆ ನಾನು ತರಬಯಸುತ್ತೇನೆ.

ಗ್ರಾಮಾಂತರಗಳಲ್ಲಿ ಬಹುಭಾಗ ಹರಿಜನರು ತಂಗಡಿಚಕ್ಕೆ ಕೈಗಾರಿಕೆಯನ್ನು ಮಾಡಿ ಜೀವಿಸುತ್ತಿದ್ದಾರೆ. ವರ್ಷೇ ವರ್ಷೇ ಲಕ್ಷಾಂತರ ರೂಪಾಯಿಗಳ ವ್ಯವಹಾರ ತಂಗಡಿಚಕ್ಕೆಯಲ್ಲಿ ನಡೆಯುತ್ತಿರುತ್ತದೆ. ಇತರ ಜನರಿಗೆ ಅರ್ಥವಾಗದೆ ಇರುವ ಈ ಕೈಗಾರಿಕೆ ನಮ್ಮ ಜನರಿಗೆ ಬಹಳ ಚೆನ್ನಾಗಿ ರೂಢಿಯಲ್ಲಿ ಬಂದಿದೆ. ಇಷ್ಟಾದರೂ, ತಂಗಡಿಚಕ್ಕೆಯಲ್ಲಿ ನೇರವಾಗಿ ವ್ಯವಹಾರ ನಡೆಸುವವರು ಹರಿಜನರಲ್ಲ. ಬೇರೆಯವರು ವ್ಯವಹಾರ ನಡೆಸುತ್ತಾ ನಮ್ಮ ಜನರಿಗೆ ಕಡಿಮೆ ಕೂಲಿ ಕೊಟ್ಟು ತಾವು ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ಈ ವಿಷಯನ್ನು ಪದೇ ಪದೇ ಸರ್ಕಾರದ ಗಮನಕ್ಕೆ ತಂದರೂ ಕೂಡ ಅವರು ಗಮನಕ್ಕೆ ತೆಗೆದುಕೊಳ್ಳದಿರುವುದನ್ನು ಕಂಡು ನಮಗೆ ಮತ್ತೂ ವಿಷಾದವಾಗುತ್ತದೆ. ಏಕೆಂದರೆ ಮೈಸೂರು ದೇಶದಲ್ಲಿಗುವ ಮೂಲೆಗೆ ಬಿದ್ದಿರತಕ್ಕ ಅನೇಕ ಕೈಗಾರಿಕೆಗಳನ್ನು ಸರ್ಕಾರದವರು ಮುಂದುವರಿಸಿ ಪ್ರೋತ್ಸಾಹಿಸುತ್ತಿದ್ದಾರೆ. ಇಷ್ಟಾದರೂ, ಅದರಲ್ಲೂ ಬಡಜನರನ್ನು ಉತ್ತಮ ಮಟ್ಟಕ್ಕೆ ತರಬೇಕೆಂದು ಆಸೆಯುಳ್ಳವರಾಗಿದ್ದರೂ, ಇದುವರೆಗೂ ಬಡಜನರ ಕೈಯಲ್ಲಿರತಕ್ಕ ಈ

ಕೈಗಾರಿಕೆಯನ್ನು ಅಭಿವೃದ್ಧಿಮಾಡುವುದಕ್ಕೆ ಇನ್ನೂ ಮನಸ್ಸು ಮಾಡಿಲ್ಲ. ಇದೊಂದು ಉತ್ತಮವಾದ ಕೈಗಾರಿಕೆ. ಅನೇಕ ಹರಿಜನ ಸಂಸಾರಗಳು ಇದರಿಂದ ಜೀವನ ಮಾಡುತ್ತಿವೆ. ಇಂಥದ್ದನ್ನು ಹರಾಜು ಮಾಡಿಸಿ ಯಾರೋ ಒಬ್ಬರಿಬ್ಬರಿಗೆ ಕೊಟ್ಟರೆ ಹರಿಜನರಿಗೆ ಬಹಳ ಅನ್ಯಾಯವಾಗುತ್ತದೆ. ಅದಕ್ಕೆ ಬದಲು ಇದನ್ನೇ ಹರಿಜನರಿಗೆ ವಹಿಸಿ ಒಬೊಬ್ಬರಿಗೆ 10 ರೂಪಾಯಿನಂತೆ ಟ್ಯಾಕ್ಸ್ ಹಾಕಿದರೂ ಎರಡು ಲಕ್ಷ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಅನೇಕ ಹರಿಜನ ಸಂಸಾರಗಳ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಪದೇ ಪದೇ ಈ ಸಭೆಯ ಮುಂದೆ ಅರಿಕೆ ಮಾಡಿಕೊಂಡರೂ ಸರ್ಕಾರದವರು ನಮ್ಮ ಆಸೆಯನ್ನು ನೆರವೇರಿಸುತ್ತಿಲ್ಲ. ಈ ವಿಚಾರದಲ್ಲಿ ಇಡೀ ಸಭೆಯೇ ನಮ್ಮ ಬೇಡಿಕೆಗೆ ಬೆಂಬಲ ಕೊಡುತ್ತದೆಂದು ನಾನು ನಂಬಿದ್ದೇನೆ.

ಇದರಂತೆ ಚರ್ಮದ ಕೈಗಾರಿಕೆಯೂ ಕೂಡ ಹರಿಜನರ ದೃಷ್ಟಿಯಿಂದ ಅತಿ ಮುಖ್ಯವಾದ ಒಂದು ಕೈಗಾರಿಕೆ. ಚರ್ಮವನ್ನು ಹದಗೊಳಿಸುವುದಕ್ಕಾಗಿ ದೊಡ್ಡ ದೊಡ್ಡ ಟ್ಯಾನರಿಗಳು ಅನೇಕಕಡೆ ಸ್ಥಾಪಿತವಾಗಿವೆ. ಗ್ರಾಮಾಂತರಗಳಲ್ಲಿರತಕ್ಕ ಈ ಕೈಗಾರಿಕೆಯನ್ನು ಉತ್ತಮಪಡಿಸುವುದರ ಕಡೆಗೆ ನಮ್ಮ ಸರ್ಕಾರದವರು ಗಮನಕೊಟ್ಟು ಹೊರಗಡೆಯಿಂದ ಬರುತ್ತಿರತಕ್ಕ ಲಕ್ಷಾಂತರ ರೂಪಾಯಿಗಳ ಬೂಟು, ಚಪ್ಪಲಿಗಳನ್ನು ತರಿಸುವುದನ್ನು ನಿಲ್ಲಿಸಬಹುದು. ಹರಿಜನರೇ ಬಹುಮಟ್ಟಿಗೆ ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದರೂ ತಾವು ಕಂಟ್ರಾಕ್ಟುಗಳನ್ನು ಕೊಡುವುದು ಬ್ರಾಹ್ಮಣರಿಗೆ ಅಥವಾ ಮುಸಲ್ಮಾನರಿಗೆ ; ನೇರವಾಗಿ ಎಂದೂ ಹರಿಜನರಿಗೆ ಕೊಡುವುದಿಲ್ಲ. ಅವರ ಕೈಯಿಲ್ಲಾದರೂ ಅವರಿಗೆ ಕೊಡುವ ಅನುಕೂಲ ಕಲ್ಪಿಸಿ ಕೊಡುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಇಲಾಖೆಯ ಮಂತ್ರಿಗಳು).—ಅವರಿಗೆ ಯಾವರೀತಿ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೀರಿ ?

ಶ್ರೀ ಟಿ. ಹನುಮಯ್ಯ.—ಬೆಂಗಳೂರು ಸಿಟಿಯಲ್ಲಿ ಅವರಿಗಾಗಿ ಒಂದು ಫ್ಯಾಕ್ಟರಿಯನ್ನು ಏರ್ಪಡಿಸಿದರೆ ಲಕ್ಷಾಂತರ ರೂಪಾಯಿ ದುಡ್ಡು ಸಿಕ್ಕುತ್ತದೆ. ನಮ್ಮ ಜನರಿಗೂ ಹೆಚ್ಚಿಗೆ ಹಣ ಸಿಕ್ಕುವಂತಾಗುತ್ತದೆ. ಇದನ್ನು ಸರ್ಕಾರದವರು ಆಲೋಚನೆಮಾಡಿ ತಕ್ಕ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

Sri V. M. MASCARENHAS (St. John's Hill).—While speaking on starting of industries during the last few years, the Hon'ble Members will be surprised to see that during the First Yive-Year Plan the Mysore State did not launch one single industry in the State. Not that they had no schemes on hand ; but I see now that some of these schemes have taken such a long time to mature and to pass the so called red-tapism in the Secretariat. Perhaps in the year 1956 some of them may see the light of the day. I hope in the future, things will not go on like this. In this age of progress, we cannot lose time, because every day lost is so much money lost.

Some of my friends have asked for either nationalisation or taking over firms like the Mysore Spun Silk Mills and the Silk Filatures. It is unwise that the Government of Mysore have given them large loans. Let us stop at that. Let not good money go after bad. If these companies are unable to stand on their own legs and return the money that the Government has given them, those companies can be liquidated and the Government can consider how best they could come into the picture and what best they could do in the interests of the State.

One more word. My friend Sri Narasimha Reddy and Sri Byre Gowda spoke of the fruit canning industry in the State and pointed out that Bangalore and its neighbourhood is the best area for starting the industry because Bangalore is not only the largest fruit growing centre in the State but it is very conveniently situated as mangoes come from Srinivasapur and other parts of Kolar and also from Channapatna and oranges come from Hassan. So Bangalore is not only best placed for producing fruits but also for canning and most important than all, it affords the best market. In view of this, my personal view is that taking of the fruit canning industry to any other part of the State would not be in the best interests of the industry itself, I do not know if the Hon'ble Minister has got some specific views on this subject. But I would earnestly appeal to him once again to enquire into the real needs of the particular industry. It is not a big industry. I must admit it is only a cottage industry. I do not see the need why the Government should even think of having a Joint Stock Company for the purpose. It can entirely be hundred per cent Government owned. It does not need much money and if it is run on proper lines, it can certainly be a profitable venture.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳು ಸಾಮಾನ್ಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿವೆಯೇ ಹೊರತು, ಗ್ರಾಮಾಂತರ ಪ್ರದೇಶದಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ಒಂದು ನೀತಿಯನ್ನೂ ಕೂಡ ನಾವು ಹಾಕಿಕೊಂಡಿಲ್ಲ. ಮುಖ್ಯವಾಗಿ ನಾವು ಈ ರೀತಿ ಪಟ್ಟಣ

(ಶ್ರೀ ಡಿ. ಎಂ. ಗೋವಿಂದರಾಜು.)

ಗಳಲ್ಲಿ ಕೈಗಾರಿಕೆಗಳನ್ನು ಕೇಂದ್ರೀಕೃತವಾಗಿ ಮಾಡುತ್ತಾ ಹೋದರೆ, ಗ್ರಾಮಾಂತರದ ಜನರು ಪಟ್ಟಣಗಳಲ್ಲಿ ವಿಪರೀತವಾಗಿ ಬಂದು ಸೇರುವುದಕ್ಕೆ ಅವಕಾಶವಾಗುತ್ತದೆ. ಅವರ ಆರ್ಥಿಕ ಸ್ಥಿತಿ, ಅನುಕೂಲಪಡಿಸಬೇಕಾದರೆ, ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕಾದುದು ಬಹಳ ಮುಖ್ಯವಾದುದು. ಇನ್ನು ಮುಂದೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಾಗ ನಮ್ಮ ಸರ್ಕಾರದವರು ಆದಷ್ಟು ಗ್ರಾಮಾಂತರ ಪ್ರದೇಶದಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ತನ್ಮೂಲಕ ಗ್ರಾಮಾಂತರ ಪ್ರದೇಶದ ಜನಗಳಿಗೆ ಅನುಕೂಲವನ್ನು ಕಲ್ಪಿಸುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ನೆಲಮಂಗಲ ತಾಲ್ಲೂಕಿನಲ್ಲಿ ನಾಲ್ಕು—ಐದು ವರ್ಷಗಳಿಂದ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆಮಾಡಿ ಎಂದು ಕೇಳುತ್ತಿದ್ದೇವೆ. ಅಲ್ಲಿ ಹೆಂಚಿನ ಕೈಗಾರಿಕೆ ಮಾಡುವುದಕ್ಕೆ ಜೇಡಿಮಣ್ಣು ಸಿಕ್ಕುತ್ತದೆ. ಪಿಂಗಾಣಿ ಕೈಗಾರಿಕೆ ಸ್ಥಾಪನೆ ಮಾಡು ಮಾಡುವುದಕ್ಕೆ ಸುದ್ದೆ ಮಣ್ಣು ಮತ್ತು ಅದಕ್ಕೆ ಬೇಕಾದ ಕಚ್ಚಾ ಮಾಲುಗಳು ನಮ್ಮ ತಾಲ್ಲೂಕಿನಲ್ಲಿ ಸಿಕ್ಕುವುದರಿಂದ, ಯಾವುದಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಎಂದು ಅನೇಕ ಸಾರಿ ಕೇಳಿ ಕೊಂಡಿದ್ದೇನೆ. ಕಚ್ಚಾ ಮಾಲುಗಳು ಸಿಕ್ಕುವುದರಿಂದ ಹೆಂಚಿನ ಕಾರ್ಖಾನೆಯನ್ನಾಗಲಿ, ಪಿಂಗಾಣಿ ಕಾರ್ಖಾನೆಯನ್ನಾಗಲಿ, ಸ್ಥಾಪನೆಮಾಡಿ, ಅಲ್ಲಿನ ಜನಗಳಿಗೆ ಒಂದು ಕೈಗಾರಿಕೆಯಿಂದ ಕೂಲಿ ಸಿಕ್ಕುವುದಕ್ಕೆ ಅನುಕೂಲ ಮಾಡಿ ಎಂದು ಬಹಳ ದಿವಸಗಳಿಂದಲೂ ಕೇಳುತ್ತಿದ್ದೇನೆ. ಅದರಂತೆಯೇ ಸರ್ಕಾರದವರು ಯೋಚನೆ ಮಾಡಿ ನಮ್ಮ ನೆಲಮಂಗಲದ ತಾಲ್ಲೂಕಿಗೆ ಕಡೆಯ ಪಕ್ಷ ಹೆಂಚಿನ ಅಥವಾ ಪಿಂಗಾಣಿ ಕಾರ್ಖಾನೆಯನ್ನು ಕೊಟ್ಟು ಅಲ್ಲಿನ ಜನಗಳ ಸಂಪಾದನಾಶಕ್ತಿ ಹೆಚ್ಚುವಂತೆ ಮಾಡಬೇಕು ಎಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಮತ್ತು ಅಜೂಬಾಜು ಜಾಗದಲ್ಲಿ ರೇಷ್ಮೆ ಚೆನ್ನಾಗಿ ಬೆಳೆಯುತ್ತದೆ. ಇಲ್ಲಿಯ ರೇಷ್ಮೆ ಬಹಳ ಉತ್ತಮವಾಗಿದೆ. ಬಿತ್ತನೆಗೆ ಉಪಯೋಗವಾಗುತ್ತದೆ. ಅಂತಹ ರೇಷ್ಮೆ ಬೆಳೆಯುವ ಸ್ಥಳಗಳಲ್ಲಿ ಒಂದು ರೇಷ್ಮೆ ಗೂಡಿನ ಕೇಂದ್ರವನ್ನು ಸ್ಥಾಪನೆ ಮಾಡಿ ಎಂದು ಅನೇಕಸಾರಿ ಕೇಳಿದ್ದೇವೆ. ಅದೇ ರೀತಿ ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದರೂ ಕೂಡ ಇದುವರೆಗೂ ಸ್ಥಾಪನೆ ಮಾಡಿಲ್ಲ. ಈಗಲಾದರೂ ಸರ್ಕಾರದವರು ಗಮನವಿಟ್ಟು ತ್ಯಾಮಗೊಂಡ್ಲುವಿನಲ್ಲಿ ರೇಷ್ಮೆ ಗೂಡಿನ ಕೇಂದ್ರವನ್ನು ಸ್ಥಾಪನೆ ಮಾಡಿದರೆ, ಆ ಕೇಂದ್ರದಲ್ಲಿ ರೇಷ್ಮೆ ಆಗುವ ಗೂಡನ್ನು ನಮ್ಮ ಮೈಸೂರು ದೇಶದ ಎಲ್ಲಾ ಕಡೆಗೂ ಬಿತ್ತನೆಗೆ ಒದಗಿಸಲು ಅನುಕೂಲವಾಗುತ್ತದೆ. ಅಂತಹ ಕಡೆ ರೇಷ್ಮೆ ಗೂಡಿನ ಕೇಂದ್ರವನ್ನು ಸ್ಥಾಪನೆ ಮಾಡುವುದು ಒಳ್ಳೆಯದು ಎಂಬುದಾಗಿ ನಾನು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ—ಅನುಸೂಚಿತ ಜಾತಿಗಳು).—ಇಪ್ಪತ್ತಾರು ಮತ್ತು ನಲವತ್ತೊಂದನೇ ಡಿಮ್ಯಾಂಡಿನ ಮನವಿಗಳನ್ನು ಸ್ವಾಗತಿಸುತ್ತೇನೆ.

ಈಗ ನಮ್ಮ ಸರ್ಕಾರ ಸುಮಾರು ಹತ್ತು ಕೋಟಿಗೆ ಮೇಲ್ಪಟ್ಟು ಕೈಗಾರಿಕೆಗೆ ಹಣ ಖರ್ಚುಮಾಡಲು ಯೋಚಿಸಿದೆ. ಈಗ ನಾವು ಆ ಹಣಕ್ಕೆ ಮಂಜೂರಾತಿ ಕೊಡಬೇಕಾಗಿದೆ. ಬಡ್ಜೆಟ್ ಸೆಷನಲ್ಲಿ ನಮ್ಮ ಪ್ರಾಂತ್ಯಕ್ಕೆ ಏನಾದರೂ ಮಂಜೂರು ಮಾಡುತ್ತಾರೆಯೇ? ನಮ್ಮ ಡಿಸ್ಟ್ರಿಕ್ಟಿಗೆ, ನಮ್ಮ ತಾಲ್ಲೂಕಿಗೆ ಏನು ಕೊಡುತ್ತಾರೆ? ಇಷ್ಟು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾ ಇರುವಾಗ ನಮ್ಮ ಚಿಕ್ಕಮಗಳೂರು ತಾಲ್ಲೂಕಿಗೆ ಎಷ್ಟು ಹಣ ಖರ್ಚುಮಾಡುತ್ತಾರೆ? ಎಂದು ಜನರು ಕೇಳುತ್ತಾರೆ. ಈಗ ದೇಶದ ವರಮಾನ ನೋಡಿದರೆ, ಕೈಗಾರಿಕೆಗಳಿಂದ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಬರುತ್ತದೆ. ಖರ್ಚುಮಾಡುವುದನ್ನು ನೋಡಿದರೆ ಹತ್ತು ಕೋಟಿಗೆ ಮೇಲ್ಪಟ್ಟು ಆಗುತ್ತದೆ. ಇಷ್ಟು ಭಾರಿ ಹಣವನ್ನು ಖಾಸಗೀಯವರು ಖರ್ಚು ಮಾಡಿದರೆ, ಇಷ್ಟು ಹಣ ಉತ್ಪತ್ತಿ ಬಂದರೆ, ಸುಮ್ಮನೆ ಇರುತ್ತಾರೆಯೇ? ಎಷ್ಟು ಹಣ ಖರ್ಚು ಮಾಡುತ್ತಾರೋ, ಎಷ್ಟು ನಿರೀಕ್ಷಿಸುತ್ತಾರೋ ಅದರ ಅರ್ಧದಷ್ಟಾದರೂ ಉತ್ಪತ್ತಿ ಬರಬಾರದೇ? ಅದಕ್ಕೆ ಕಾರಣವೇನು? ದೇಶದಲ್ಲಿ ಕೈಗಾರಿಕೆಯೆಲ್ಲಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಥವಾ ಯಾರ ಪ್ರಭಾವ ಜಾಸ್ತಿ ಇರುತ್ತದೋ ಅಂತಹ ಪ್ರಭಾವಕ್ಕೆ ಒಳಪಟ್ಟು, ಅಂತಹ ಸ್ಥಳಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ ಎಂದು ಜನರು ಹೇಳುತ್ತಾರೆ; ಆದರೆ ಕಚ್ಚಾ ಮಾಲುಗಳು ಎಲ್ಲಿ ಜಾಸ್ತಿಯಾಗಿ ಸಿಕ್ಕುತ್ತವೆ, ಯಾವ ಕೈಗಾರಿಕೆಯನ್ನು ಯಾವ ಸ್ಥಳದಲ್ಲಿ ಸ್ಥಾಪನೆಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ, ಲಾಭ ಬರುತ್ತದೆ, ಜನಗಳಿಗೆ ಅನುಕೂಲವಾಗುತ್ತದೆ, ದೇಶಾಭಿವೃದ್ಧಿಯಾಗುತ್ತದೆ ಎನ್ನುವ ತತ್ವದೃಷ್ಟಿಯಿಂದ ಸ್ಥಾಪನೆ ಮಾಡಿದ್ದಾರೆಯೇ? ಉತ್ಪತ್ತಿ ಎಷ್ಟು ನಿರೀಕ್ಷಣೆ ಮಾಡುತ್ತೇವೋ ಅಷ್ಟು ಬಾರದೇ ಇರುವುದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಬೇಕು. ಈಗಾಗಲೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನೂ ಕೂಡ ಹಿಂದಿನ ಅನೇಕ ಅಧಿವೇಶನದಲ್ಲಿ ಚಿಕ್ಕಮಗಳೂರಿನಲ್ಲಿ ನೀರಿದೆ, ಬೊಂಬು ಇದೆ, ಬೇಕಾದಷ್ಟು ಬಿದಿರು ಬೆಳೆಯುತ್ತದೆ, ಬಾಳೆಹೊನ್ನೂರಿನಲ್ಲಿ ಕಾಗದದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು ಎಂದು ಸಲಹೆ ಮಾಡಿದ್ದೇನೆ. ಶಿವಮೊಗ್ಗಾದಲ್ಲಿರುವ ಕಾಗದದ ಕಾರ್ಖಾನೆಗೆ ನಮ್ಮ ಚಿಕ್ಕಮಗಳೂರಿನಿಂದ ಬೊಂಬು ಹೋಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಿಂದ ಕೆಮ್ಮಣ್ಣುಗುಂಡಿಯಿಂದ ಕಬ್ಬಿಣದ ಕಾರ್ಖಾನೆಗೆ ಕಬ್ಬಿಣದ ಅದುರು ಹೋಗುತ್ತದೆ. ಚಿಕ್ಕಮಗಳೂರಿನಲ್ಲಿ ದೈವಿಕ ಸಂಪತ್ತು ಇದೆ. ಇಷ್ಟಾದರೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕೆಯನ್ನು ಏತಕ್ಕೆ ಸ್ಥಾಪಿಸಲಿಲ್ಲವೋ ನಾನು ಬೇರೆ ಕಾಣೆ. ಅದು ಚಿಕ್ಕಮಗಳೂರಿನ ದುರದೃಷ್ಟವೋ ಏನೋ. ಚಿಕ್ಕಮಗಳೂರಿನ ಕಿತ್ತಲೆಹಣ್ಣಿನ ಮಾರ್ಕೆಟ್ ಇಂಡಿಯಾ ದೇಶಕ್ಕೆ ಎರಡನೆಯದು. ಒಂದನೆಯದು ನಾಗಪುರ. ಮಲೆನಾಡಿನಲ್ಲಿ ಹೆಚ್ಚು ಹಣ್ಣು ಬೆಳೆಯುವುದು ಗೊತ್ತಿದೆ. ಚಿಕ್ಕಮಗಳೂರಿನಲ್ಲಿ ಅನಾನೋಸ್, ಕಿತ್ತಲೆಹಣ್ಣು, ಮಾವಿನಹಣ್ಣು ವಗೈರೆ ಹಣ್ಣುಗಳನ್ನು ಬೆಳೆಯುತ್ತಾರೆ. ಆದ್ದರಿಂದ ಫ್ರೂಟ್ ಕ್ಯಾನಿಂಗ್ ಅಂಡ್ ಪ್ರಿಸರ್ವೇಷನ್ ಫ್ಯಾಕ್ಟರಿಯನ್ನು ಮೂಡಿಗೆರೆಯಲ್ಲಿ ಸ್ಥಾಪನೆ ಮಾಡಬೇಕು ಎಂದು ಅನೇಕ ರೈತರ ಸಮ್ಮೇಳನದಲ್ಲಿ ತೀರ್ಮಾನಮಾಡಿ, ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿದ್ದಾರೆ. ಮಾನ್ಯ ಕೇಂದ್ರ ಮಂತ್ರಿ ಶ್ರೀ ದೇಶ್‌ಮುಖ್ ಅವರು ಚಿಕ್ಕಮಗಳೂರಿಗೆ ಬಂದಾಗ, ಚಿಕ್ಕಮಗಳೂರು ಮುನಿಸಿಪಾಲಿಟಿಯವರೂ, ಮೂಡಿಗೆರೆ ಮುನಿಸಿಪಾಲಿಟಿಯವರೂ ಒಂದು ಬಿನ್ನವತ್ತಳೆಯನ್ನು ಕೊಟ್ಟು ಫ್ರೂಟ್ ಕ್ಯಾನಿಂಗ್ ಮತ್ತು ಪ್ರಿಸರ್ವೇಷನ್ ಫ್ಯಾಕ್ಟರಿಯನ್ನು ಅಲ್ಲಿ ಸ್ಥಾಪನೆ ಮಾಡಬೇ

ಕೆಂದು ಹೇಳಿದರು. ಅಲ್ಲದೆ ಸಿಮೆಂಟ್ ಕಾರ್ಖಾನೆಯನ್ನು ಬೀರೂರಿನಲ್ಲಿ ಮಾಡಬೇಕು, ಅಲ್ಲಿ ಕಚ್ಚಾ ಮಾಲು ಸಿಕ್ಕುತ್ತದೆ, ಹೀಗೆ ಅಲ್ಲಿ ಎಲ್ಲ ಸೌಕರ್ಯಗಳೂ ಇವೆ ಎಂದು ಹೇಳಿದರು. ಚಿಕ್ಕಮಗಳೂರು ಜಿಲ್ಲೆಗೆ—ಯಾವ ಒಂದು ಕಾರ್ಖಾನೆ ಮಾಡಬೇಕೆಂದು ಕೇಳಿದರೂಕೂಡ ಸರ್ಕಾರ ಉದಾಸೀನ ಮಾಡುತ್ತಾ ಬಂದಿದೆ. ಈಗ ಮಾನ್ಯ ಶ್ರೀ ಟಿ. ಹನುಮಯ್ಯನವರು ಕೋಟಿಗಟ್ಟಲೆ ಚರ್ಮದ ಸಾಮಾನುಗಳನ್ನು ಪರದೇಶದಿಂದ ಬರಮಾಡಿಕೊಳ್ಳುತ್ತಾರೆ ಎಂದು ಹೇಳಿದರು. ಮಲೆನಾಡಾದ ಚಿಕ್ಕಮಗಳೂರಿನಲ್ಲಿ ಚರ್ಮ ಹದ ಮಾಡುವ ಮತ್ತು ಚರ್ಮದ ಸಾಮಾನುಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಮಲೆನಾಡು ಅಭಿವೃದ್ಧಿಯಾಗುತ್ತದೆ. ದೇಶಾಭಿವೃದ್ಧಿಯಾಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೈಗಾರಿಕೆ ಹೆಚ್ಚಾಗಿ ಸ್ಥಾಪನೆ ಮಾಡಬಾರದು. ಇಂತಹ ಕೈಗಾರಿಕೆಗಳನ್ನು ಮಲೆನಾಡಿನಲ್ಲಿ ಹೆಚ್ಚು ಹೆಚ್ಚು ಸ್ಥಾಪನೆ ಮಾಡಬೇಕು. ಚಿಕ್ಕಮಗಳೂರಿನಲ್ಲಿ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಒಂದನ್ನು ಸ್ಥಾಪನೆ ಮಾಡಬೇಕು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಸರ್ಕಾರದವರು ಸ್ಥಾಪನೆ ಮಾಡಿದ ಕೆಲವು ಕೈಗಾರಿಕೆಗಳಿವೆ. ಆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ ಕಾಲದಲ್ಲಿ ಹಾಕಿದ ಕೆಲವು ಹಿಂದಿನ ಕಾಲದ ಯಂತ್ರಗಳನ್ನೇ ಇಂದಿಗೂ ಇಟ್ಟುಕೊಂಡು ಕೆಲಸಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ ಟ್ಯಾನಿಂಗ್ ಫ್ಯಾಕ್ಟರಿ, ಪೋರ್ಸೆಲೀನ್ ಫ್ಯಾಕ್ಟರಿ ಕಾರ್ಖಾನೆಗಳನ್ನು ತೆಗೆದುಕೊಂಡರೆ, ಅವುಗಳು ಪ್ರಾರಂಭವಾದಾಗ ಯಾವ ಯಂತ್ರೋಪಕರಣಗಳನ್ನು ತಂದುಹಾಕಿದ್ದಾರೋ ಅವೇ ಯಂತ್ರಗಳನ್ನೇ ಇಂದಿಗೂ ಉಪಯೋಗಿಸುತ್ತಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಯಂತ್ರಗಳನ್ನು ತರುತ್ತಾರೆಂದು ಭಾವಿಸಿದ್ದೆವು. ಆದರೆ ಹಾಗೆ ಮಾಡಲಿಲ್ಲ. ಯಾವುದನ್ನೂ ಬದಲಾಯಿಸದೆ ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದಾರೆ. ಗಂಧದ ಎಣ್ಣೆ ಕಾರ್ಖಾನೆ ಮೈಸೂರಿನಲ್ಲೊಂದಿದೆ, ಶಿವಮೊಗ್ಗದಲ್ಲೊಂದಿದೆ. ಮೈಸೂರಿನ ಕಾಖಾನೆಯೇನೋ ಚೆನ್ನಾಗಿದೆ. ಶಿವಮೊಗ್ಗದಲ್ಲಿ ಏಕೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆಂದರೆ, ಅಲ್ಲಿ ಗಂಧದಮರ ಹೆಚ್ಚು ಸಿಕ್ಕುತ್ತದೆ, ಅಲ್ಲಿಂದ ಬೇರೆಕಡೆ ಸಾಗಿಸುವುದರ ಖರ್ಚು ಕಡಿಮೆಯಾಗಲಿ ಎಂದು ಮಾಡಿದರು ಪೂರ್ತಿ ಅಗತ್ಯವಾದ ಯಂತ್ರಗಳನ್ನು ಹಾಕಿ ಸ್ಥಾಪನೆ ಮಾಡಲಿಲ್ಲ. ಮೈಸೂರಿನಲ್ಲೇ ಸರಿಯಾದ ಆಧುನಿಕ ಯಂತ್ರಗಳನ್ನಿಟ್ಟು ಕಾರ್ಖಾನೆಯನ್ನು ನಡೆಸಬೇಕು. ಇಲ್ಲದಿದ್ದರೆ ಶಿವಮೊಗ್ಗಕ್ಕೆ ಸಾಗಿಸಬೇಕು. ಹಾಗೆ ಮಾಡದೆ ಕಾರ್ಖಾನೆಯನ್ನು ಪ್ರಾರಂಭಮಾಡಿದಾಗ ಯಾವ ಯಂತ್ರಗಳನ್ನು ಹಾಕಿದರೋ ಅವನ್ನೇ ಇಟ್ಟುಕೊಂಡು ಈಗಲೂ ಕೆಲಸ ಮಾಡುತ್ತಿದ್ದಾರೆ. ಚೆನ್ನಾಗಿ ಕೆಲಸ ಮಾಡುವ ಆಧುನಿಕ ಯಂತ್ರಗಳನ್ನು ತಂದು ಶಿವಮೊಗ್ಗ ಅಥವಾ ಮೈಸೂರು ಯಾವುದಾದರೂ ಒಂದು ಕಡೆ ಸರಿಯಾಗಿ ನಡೆಸಬೇಕು. ಈಗಿರತಕ್ಕ ಯಂತ್ರೋಪಕರಣಗಳನ್ನೇ ಇಟ್ಟು ನಡೆಸಬೇಕೆಂದರೆ, ಮೈಸೂರಿನಲ್ಲೇ ಮಾಡಬೇಕೆಂದು ಕಾಣುತ್ತದೆ. ಹೊಸ ಯಂತ್ರಗಳನ್ನು ತಂದರೆ, ಗಂಧದಮರ ಹೆಚ್ಚು ಸಿಕ್ಕುವುದರಿಂದ ಶಿವಮೊಗ್ಗದಲ್ಲೇ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಅಂತೂ ಯಾವುದಾದರೂ ಒಂದು ಕಡೆಯಲ್ಲಿ ಸರಿಯಾದ ರೀತಿಯಲ್ಲಿ ಮಾಡುವುದೊಳ್ಳೆಯದು.

ನಮ್ಮ ದೇಶದಲ್ಲಿ ಇನ್ನೊಂದು ಸಿಮೆಂಟ್ ಕಾರ್ಖಾನೆಯನ್ನು ತೆರೆಯುವುದಕ್ಕವಕಾಶವಿದೆ. ಇಂಡಿಯಾ ಸರ್ಕಾರದವರೂ ಹೀಗೆ ತೆರೆಯಬಹುದೆಂದು ಸೂಚನೆ ಕೊಟ್ಟಿದ್ದಾರೆ. ಇದುವರೆಗೆ ನಡೆದಿರುವ ಸರ್ವೆ ಪರಿಶೀಲನೆಯಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಸಿಮೆಂಟ್ ಕಾರ್ಖಾನೆಗೆ ಬೇಕಾದ ಎಲ್ಲ ಅನುಕೂಲಗಳೂ ಇವೆ, ಆದರೆ ನೀರಿನ ಕೊರತೆಯಿದೆ ಎಂಬ ಅಭಿಪ್ರಾಯ ಬಂದಿರುವಂತೆ ಕಾಣುತ್ತದೆ. ಅಲ್ಲಿ ನೀರು ಸರಬರಾಜು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಹಾಗೆ ಮಾಡಿಕೊಂಡು ಮಾಡಬಹುದು. ಚಿಕ್ಕನಾಯಕನಹಳ್ಳಿಯಲ್ಲಿರುವ ಅನುಕೂಲ ಸಿಮೆಂಟ್ ಕಾರ್ಖಾನೆಯನ್ನು ತೆರೆಯುವುದಕ್ಕೆ ಇನ್ನೆಲ್ಲೂ ಇಲ್ಲ. ಆದುದರಿಂದ ಸರ್ಕಾರದವರು ಅಲ್ಲಿ ತೆರೆಯಲು ಏರ್ಪಾಡು ಮಾಡಬೇಕು.

ಕುಣಿಗಲು ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಬಹುದಿವಸಗಳಿಂದ ಜನರು ಒತ್ತಾಯಮಾಡುತ್ತಿದ್ದಾರೆ. ಆದರೆ ಕಬ್ಬಿನ ವ್ಯವಸಾಯ ಮಾಡಲು ಯಾವಾಗಲೂ ಸಾಕಾದಷ್ಟು ನೀರು ಸಿಕ್ಕುವುದಿಲ್ಲವೆಂದು ಅಭಿಪ್ರಾಯ ಬಂತು. ಅಲ್ಲಿ ಜಲಾಶಯ ಮತ್ತು ದೊಡ್ಡ ದೊಡ್ಡ ಕೆರೆಗಳಿದ್ದು ಯಾವಾಗಲೂ ನೀರಿನ ಹೆಚ್ಚು ಸೌಲಭ್ಯಕ್ಕೆ ಅವಕಾಶವಿದೆ. ಅಲ್ಲದೆ ಇಪ್ಪತ್ತು-ಇಪ್ಪತ್ತೈದು ಸಾವಿರ ಎಕರೆ ಜಮೀನು ಒಂದೇ ಪ್ರದೇಶದಲ್ಲಿರುವುದರಿಂದ, ಇದಕ್ಕೆ ಅಗತ್ಯವಾದ ಯಾವ ಏರ್ಪಾಡನ್ನು ಬೇಕಾದರೂ ಮಾಡಿಕೊಳ್ಳಬಹುದು. ಸರ್ವೆ ನಡೆಸಿ, ಕುಣಿಗಲು ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಏರ್ಪಾಡು ಮಾಡಬೇಕು. ಸಣ್ಣ ಪುಟ್ಟ ಅಡಚಣೆಗಳಿವೆಯೆಂದು ಅಧಿಕಾರಿಗಳೂ ಇಲಾಖೆಯವರೂ ಹೇಳಿದರೂ ಜನರ ಅಭಿಪ್ರಾಯವನ್ನ ತೆಗೆದುಕೊಳ್ಳಬೇಕು. ಈ ಎರಡನ್ನೂ ತೆಗೆದುಕೊಂಡು ಕೊನೆಯ ತೀರ್ಮಾನಕ್ಕೆ ಬರಬೇಕೆಂದು ಸಲಹೆ ಮಾಡುತ್ತೇನೆ.

ಗ್ರಾಮ ಕೈಗಾರಿಕೆ ಯೋಜನೆಯನ್ನು ನೋಡಿದರೆ, ಈ ಇಲಾಖೆಯಿಂದ ಅನುಕೂಲವಾಗಬಹುದೆಂಬ ಏನೋ ಒಂದು ದೊಡ್ಡ ಆಶೆ ಕಾಣುತ್ತದೆ. ನಮ್ಮ ಹಳ್ಳಿಗಳಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಹೆಚ್ಚು ಅನುಕೂಲಗಳು ಇವೆಯೆಂದು ಕಾಣುತ್ತದೆ. ಆದರೆ ಈ ಇಲಾಖೆಯ ಸಿಬ್ಬಂದಿಯ ಕೆಲಸ ಕಾರ್ಯಗಳನ್ನು ನೋಡಿದರೆ, ಇವರ ಕೆಲಸ ಬರಿಯ ಸಾಲವನ್ನು ಕೊಡುವುದಷ್ಟೇ ಎಂದು ಕಾಣುತ್ತದೆ. ಸಾಲ ಕೊಡುವುದಕ್ಕೆ ಇಷ್ಟೊಂದು ಸಿಬ್ಬಂದಿ ಇಟ್ಟುಕೊಂಡರೆ, ಇದರಿಂದ ಪ್ರಯೋಜನವಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಇಷ್ಟರಿಂದಲೇ ಗ್ರಾಮ ಕೈಗಾರಿಕೆಯು ಅಭಿವೃದ್ಧಿಯಾಗುತ್ತದೆಯೆಂದರೆ, ಇದು ಸಾಧ್ಯವಿಲ್ಲ. ಸಾಲ ಕೊಡುವುದಕ್ಕೆ ಸಿವಿಲಿಯನ್ ಅಧಿಕಾರಿಗಳನ್ನು ಹಾಕಿದ್ದಾರೆ. ಇದಕ್ಕೆ ಬದಲು, ಕೈಗಾರಿಕಾತಜ್ಞರನ್ನು ಹಾಕಿ, ಯಾರಿಗೆ ಸಾಲ ಕೊಟ್ಟಿದ್ದೇವೆ, ಏನು ಕೈಗಾರಿಕೆ ಮಾಡುತ್ತಾರೆ, ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆಯೆ ಎಂಬುದನ್ನು ಪರಿಶೀಲನೆಮಾಡಬೇಕು. ಹೀಗೆ ಕೈಗಾರಿಕಾತಜ್ಞರನ್ನು ಹಾಕದೆ ಬರಿಯ ಸಾಲ ಕೊಡುವುದಕ್ಕೆ ಸಿವಿಲಿಯನ್ ಅಧಿಕಾರಿಗಳನ್ನು ಹಾಕುತ್ತಿರುವುದು ಸರಿಯಲ್ಲ ಹಿತ್ತಾಳೆ ಕೈಗಾರಿಕೆಯಿದೆ, ಖಾದಿ ಕೈಗಾರಿಕೆ ಇದೆ. ಇಂಥ ಗೃಹಕೈಗಾರಿಕೆಗಳು ಬಹಳ ವರ್ಷಗಳಿಂದ ಬೆಳೆದು ಬಂದಿವೆ. ಆದರೆ ಇತ್ತೀಚೆಗೆ ಈ ಕೆಲವು ಕೈಗಾರಿಕೆಗಳು ನಶಿಸಿಹೋಗಿವೆ. ಇವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಬರಿಯ ಸಾಲ ಕೊಡುವುದೇ ಮುಖ್ಯವಲ್ಲ. ಈ ಕೈಗಾರಿಕೆಗಳನ್ನು ನಡೆಸುವವರಿಗೆ ಸರಿ

(ಶ್ರೀ ಟಿ. ಎಚ್. ಮೂಡಲಗಿರಿಗೌಡ)

ಯಾದ ಸಲಹೆಗಳನ್ನು ಕೊಡಲು ಕೈಗಾರಿಕಾ ತಜ್ಞರನ್ನು ಹಾಕಬೇಕ` ಎಂದು ಸಲಹೆಮಾಡುತ್ತೇನೆ.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಮಿಸಲೇನಿಯಸ್ ಬೇಡಿಕೆಗಳ ಸಂಬಂಧದ ಚರ್ಚೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ; ಆದರೆ ಅವಕಾಶವಾಗಲಿಲ್ಲ. ಈ ಸಂದರ್ಭದಲ್ಲಿ ಸಭೆಯ ಮುಂದಿರುವುದೂ ಕೈಗಾರಿಕೆಗಳ ಸುಲಲಿತ ಆಡಳಿತಕ್ಕೆ ಸಂಬಂಧಪಟ್ಟ ವಿಷಯವೇ ಆಗಿರುವುದರಿಂದ ಆ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿಚ್ಛಿಸುತ್ತೇನೆ. ಮುಖ್ಯ ಮಂತ್ರಿಗಳು ಆಯವ್ಯಯದ ಅಂದಾಜನ್ನು ಮಂಡಿಸುವ ಸಮಯದಲ್ಲಿ ಒಂದು ಘೋಷಣೆಯನ್ನು ಮಾಡಿದರು. ಅದೇನೆಂದರೆ, ಕೈಗಾರಿಕೆಗಳ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಅವಕಾಶವನ್ನು ಕಲ್ಪಿಸುತ್ತೇವೆಂದು ಹೇಳಿದರು. ಇದು ಘೋಷಣೆ ಮಾಡುವಷ್ಟು ಕಾರ್ಯಗತ ಮಾಡುವುದು ಸುಲಭ ಕಾರ್ಯವಲ್ಲ. ಕಾರ್ಮಿಕರ ಕಾನೂನು ಲೋಕ ಸಭೆಯಿಂದ ತಿದ್ದುಪಡಿಯಾಗಬೇಕು. ಇದಾದ ಹೊರತು ಸಂಸ್ಥಾನಗಳಲ್ಲಿ ಈ ಉದ್ದೇಶವನ್ನು ಜಾರಿಗೆ ತರುವುದು ಕಷ್ಟ. ಆದರೂ ಸರ್ಕಾರದವರು ತಮ್ಮ ಆಡಳಿತಕ್ಕೊಳಪಟ್ಟ ಕೈಗಾರಿಕೆಗಳಲ್ಲಿ ಈ ಪ್ರಯೋಗವನ್ನು ಮೊದಲುಮಾಡಬಹುದೆಂದು ಸೂಚಿಸುತ್ತೇನೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವ ಪದ್ಧತಿ, ಸಮತಾವಾದಿ ಸಮಾಜದ ತತ್ವಗಳ ಕಲ್ಪನಗಳನ್ನು ನಾವು ಅಂಗೀಕರಿಸುವುದಕ್ಕೆ ಮುಂಚೆ, ಬಂಡವಾಳ ಮತ್ತು ಯಂತ್ರೋಪಕರಣಗಳೇ ಯಾವ ಒಂದು ಕಾರ್ಖಾನೆಯ ಅಭಿವೃದ್ಧಿಗೆ ಕಾರಣವಾಗಿರುವ ಮುಖ್ಯ ಘಟಕಗಳು ಎಂಬ ಭಾವನೆಯಿತ್ತು. ಆದರೆ ಈ ಕಾರ್ಖಾನೆಗಳ ಕೆಲಸದಲ್ಲಿ ನಿರತರಾಗಿ ಬೆವರು ಸುರಿಸಿ ಕೆಲಸ ಮಾಡುವ ಕೆಲಸಗಾರರೂ ಪ್ರಾಮುಖ್ಯವಾದ ಅಂಗ, ಅವರು ಚೆನ್ನಾಗಿ ಕೆಲಸ ಮಾಡಬೇಕು, ತೃಪ್ತಿಯಿಂದಿರಬೇಕು, ಹೀಗಾಗಬೇಕಾದರೆ ಅವರಿಗೆ ಕೆಲವು ಹಕ್ಕುಗಳನ್ನು ಕೊಡಬೇಕು ಮತ್ತು ಕರ್ತವ್ಯ ಜ್ಞಾನವನ್ನು ಅವರಲ್ಲಿ ಮೂಡಿಸಬೇಕು. ಹೀಗಾದರೆ, ಪರಸ್ಪರ ಎಲ್ಲ ವರ್ಗಗಳೂ ಅಭಿವೃದ್ಧಿಯಾಗುವುದಕ್ಕೂ ಸರ್ವ ಸಂಪತ್ತನ್ನೂ ಹೆಚ್ಚಿಸುವುದಕ್ಕೂ ಸಾಧ್ಯ. ಈ ಅಭಿಪ್ರಾಯ ಬಂದ ಮೇಲೆ ಈ ಪ್ರಯೋಗಗಳನ್ನು ಮಾಡುವುದಕ್ಕೆ ಪ್ರಾರಂಭವಾಯಿತು. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಈ ಪ್ರಯೋಗ ಪ್ರಾರಂಭವಾಗಿದೆ. ಹಾಗೂ ಕೇಂದ್ರ ಕಾರ್ಮಿಕ ಸಚಿವ ಶಾಖೆಯಲ್ಲಿ ಈ ಪ್ರಯೋಗವನ್ನು ದೇಶಾದ್ಯಂತ ಜಾರಿಗೆ ತರಬೇಕೆಂದಿರುವುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇದು ಅತ್ಯಂತ ಒಳ್ಳೆಯ ಪ್ರಯೋಗ. ಇದು ಯಶಸ್ವಿಯಾಗಬೇಕಾದರೆ, ಸರ್ಕಾರದವರು ಪ್ರತಿ ಹೆಜ್ಜೆಗೂ ಸಂಬಂಧಪಟ್ಟ ಕಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳ ಸಲಹೆ ಸಹಕಾರಗಳನ್ನು ತೆಗೆದುಕೊಂಡು

2-30 P.M.

ಮಾಡಬೇಕಾಗಿದೆ. ಕಾರ್ಖಾನೆಗಳಲ್ಲಿರತಕ್ಕ ಕಾರ್ಮಿಕ ಸಂಘಗಳ ಅಧ್ಯಕ್ಷರನ್ನು ಕಾರ್ಯದರ್ಶಿಗಳನ್ನು ಆಡಳಿತದಲ್ಲಿ ಭಾಗವಹಿಸಲು ಸೀದಾ ನೇಮಕ ಮಾಡುವುದಕ್ಕಿಂತ ಆ ಸಂಘಗಳ ಸಲಹೆಯನ್ನು ತಾವು ಕೇಳಬೇಕು. ನಿಮ್ಮ ಪರವಾಗಿ, ನಿಮ್ಮ ಪ್ರತಿನಿಧಿಯಾಗಿ ಈ ಆಡಳಿತ ಮಂಡಳಿಯಲ್ಲಿ ಭಾಗವಹಿಸಲು ಯಾರನ್ನು ಸೂಚಿಸುತ್ತೀರಿ ಎಂದು ಆಯಾ ಸಂಘಗಳನ್ನು ಕೇಳಿ ಅವರ ಸಲಹೆಯಂತೆ ತಾವು ನಡೆಯಬೇಕು. ಹೀಗೆ ಸರ್ಕಾರದವರು ಕಾರ್ಮಿಕರ ಸಂಘಗಳ ಸಲಹೆಗಳನ್ನು ಪಡೆದು ಆಡಳಿತ ವರ್ಗದಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕೊಟ್ಟರೆ ಕಾರ್ಮಿಕರಿಗೆ ಆಡಳಿತದಲ್ಲಿ ಕೂಡ ಎಷ್ಟು ಕಷ್ಟಗಳಿವೆ, ಆಡಳಿತ ವರ್ಗದಲ್ಲಿ ಎಷ್ಟೊಂದು ಅಡ್ಡಿ ಆತಂಕಗಳಿರುತ್ತವೆ ಎನ್ನುವುದರ ಪರಿಚಯ ಉಂಟಾಗಿ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶವಾಗಿ ಒಬ್ಬರು ಮತ್ತೊಬ್ಬರನ್ನು ಚೆನ್ನಾಗಿ ಅರಿಯುತ್ತಾರೆ. ಇಬ್ಬರ ಧ್ಯೇಯವೂ ಒಂದೇ ಎಂದು ತಿಳಿಯುತ್ತಾರೆ. ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವುದು ಮತ್ತು ನ್ಯಾಯವಾದ ರೀತಿಯಲ್ಲಿ ಅನುಕೂಲತೆಗಳನ್ನು ಹೆಚ್ಚಿಗೆ ಕಲ್ಪಿಸಿಕೊಳ್ಳುವುದು ಎಂಬುದನ್ನು ಪರಸ್ಪರ ತಿಳಿದುಕೊಂಡು ಗಾಡಿಯ ಎರಡು ಚಕ್ರ ದೋಪಾದಿಯಲ್ಲಿ ಕೆಲಸ ಮಾಡಿಕೊಂಡು ಹೋಗಬೇಕು ಎನ್ನುವ ಭಾವನೆಯನ್ನು ರೂಪಿಸಿ ಕೊಳ್ಳುವುದಕ್ಕೆ ಬಹಳ ಸಹಾಯವಾಗಿ ಪರಿಣಮಿಸೀತು. ಈ ಸಮಯದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರು ಬಹಳ ರಾಷ್ಟ್ರ ಪ್ರೇಮದಿಂದ ಕೆಲಸಮಾಡುತ್ತಿದ್ದಾರೆ. ಸಂಸ್ಥಾನದಲ್ಲಿ ಎಲ್ಲಿಯೂ ಇಲ್ಲದೆ ಇರತಕ್ಕಂಥ ಒಂದು ಒಪ್ಪಂದವನ್ನು ಮೂರು ವರ್ಷಗಳಿಗೆ ಮಾಡಿದರು. ಇನ್ನು ಎರಡ ಮೂರು ತಿಂಗಳಲ್ಲಿ ಆ ಒಪ್ಪಂದದ ಅವಧಿ ಮುಗಿಯುತ್ತದೆ. ಒಪ್ಪಂದದ ಅವಧಿಯಲ್ಲಿ ಅವರು ಯಾವ ಹೊಸ ಬೇಡಿಕೆಗಳನ್ನೂ ಮುಂದೊಡ್ಡದೆ ಬಹಳ ಚೆನ್ನಾಗಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಬಂದು, ಹೆಚ್ಚಿನ ಉತ್ಪತ್ತಿಯನ್ನು ಕೂಡ ತೋರಿಸಿ ಕಾರ್ಖಾನೆಗೆ ಲಾಭವನ್ನು ಕೂಡ ಗಳಿಸಿ ಕೊಟ್ಟಿದ್ದಾರೆ. ಇಷ್ಟಾದರೂ ಇವರ ಕನಿಷ್ಠ ವೇತನ ದಿನ ಒಂದಕ್ಕೆ ಹತ್ತು ಆಣೆಗಳು ಮಾತ್ರ ಇತರ ಕಾರ್ಖಾನೆಗಳಲ್ಲಿ ಕನಿಷ್ಠ ವೇತನವನ್ನು ಹದಿನಾಲ್ಕಾಣೆ, ಒಂದು ರೂಪಾಯಿ ಈ ರೀತಿಯಾಗಿ ಏರಿಸಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಕೊಡತಕ್ಕ ವೇತನ ಬಹಳ ಕಡಿಮೆ; ಇದನ್ನು ಹೆಚ್ಚಿಸಬೇಕು ಎಂಬ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಆಮೇಲೆ ಬೇಡಿಕೆಯನ್ನು ಇಡುತ್ತಾರೆ. ಆಮೇಲೂ ಸರ್ಕಾರದವರು ಇವರ ಬೇಡಿಕೆಗಳನ್ನು ಈಡೇರಿಸದೆ ಹೋದರೆ ಕಾನೂನು ಪ್ರಕಾರವಿರತಕ್ಕ ಕೆಲಸಗಳನ್ನು ಮಾಡುವುದಕ್ಕೆ ಹೋಗಬಹುದು. ಕಾರ್ಮಿಕರು ಅಲ್ಲಿಯವರೆಗೂ ಹೋಗುವುದಕ್ಕೆ ಅವಕಾಶ ಕೊಡದೆ, ಈ ಸಮಸ್ಯೆಯನ್ನು ಪರಿಹರಿಸಲು ಒಂದು Wage Board ರಚನೆ ಮಾಡಬೇಕು ಅಥವಾ ಸರ್ಕಾರದವರೇ ನೇರವಾಗಿ ಸಂಧಾನ ನಡೆಸಿ ಕನಿಷ್ಠ ವೇತನವನ್ನು ದೇಶ, ಕಾಲ, ವಿದ್ಯಮಾನಗಳಿಗನುಗುಣವಾಗಿ ಎಷ್ಟು ಹೆಚ್ಚಿಸಬಹುದೋ ಅಷ್ಟನ್ನು ಹೆಚ್ಚಿಸುವುದಕ್ಕೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

ಕೈಗಾರಿಕಾ ಸಚಿವರು ಭದ್ರಾವತಿ ಮತ್ತು ತರೀಕೆರೆ ತಾಲ್ಲೂಕುಗಳಲ್ಲಿರತಕ್ಕ ರೈತರ ಬೇಡಿಕೆಗಳನ್ನು ಅಂಗೀಕರಿಸಿ ಒಂದು ಸಕ್ಕರೆ ಕಾರ್ಖಾನೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಸೇರಿಸಿರುವುದಕ್ಕಾಗಿ ಆ ಪ್ರದೇಶದ ಜನರ ಪರವಾಗಿ ಕೃತಜ್ಞತೆಗಳನ್ನು ಸೂಚಿಸದಿರಲಾರೆ. ಆದರೆ ಇಷ್ಟು ಮಾತ್ರ ಮಾಡಿದ್ದು ಸಾಲದು. ಇದನ್ನು ಕೂಡಲೇ ಪ್ರಾರಂಭ ಮಾಡಬೇಕು. ಹಾಗಿಲ್ಲದೆ ನಿಧಾನ ಮಾಡಿದಷ್ಟೂ ನಮಗೆ ಕೈಗೆ ಬಂದದ್ದು ಬಾಯಿಗೆ ಬಾರದೆ ಹೋದೀತು. ಕೇಂದ್ರ ಸರ್ಕಾರದವರ ಮೇಲೆ ಎಷ್ಟೋ ಪ್ರಭಾವಗಳು ಬೀಳುತ್ತಿವೆ, ಒತ್ತಾಯಗಳು ಬೀಳುತ್ತಿವೆ ಎಂದು ಕೇಳಿದ್ದೇನೆ. ಇದರಲ್ಲಿ ಎಷ್ಟು ನಿಜಾಂಶವಿದೆಯೋ ನನಗೆ ಗೊತ್ತಿಲ್ಲ. ದೇಶದಲ್ಲಿ ಸಕ್ಕರೆ ಉತ್ಪತ್ತಿ ಜಾಸ್ತಿ

ಯಾಗುತ್ತಿರುವುದರಿಂದ ಹೊಸದಾಗಿ ಲೈಸೆನ್ಸ್ ಕೊಡಕೂಡದು ಎಂಬ ಒತ್ತಾಯ ಸಹ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಆಂಧ್ರ ಸರ್ಕಾರದವರು ಸುಮಾರು 14 ಲೈಸೆನ್ಸ್ ಅರ್ಜಿಗಳನ್ನು ಹಾಕಿದ್ದಾರೆಂದು ಕೇಳಿದ್ದೇನೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡು ಆದಷ್ಟು ಬೇಗ ಈ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿ ಭದ್ರಾವತಿ ಮತ್ತು ತರೀಕೆರೆ ತಾಲ್ಲೂಕಿನ ಜನರಿಗೆ ಇದರ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ಕೈಗಾರಿಕೆಗಳ ಅಭಿವೃದ್ಧಿ ವಿಚಾರದಲ್ಲಿ ಯಾವ ನೀತಿಯನ್ನನುಸರಿಸುತ್ತಿದ್ದಾರೆಂದು ಈಗಾಗಲೇ ಹಲವು ಮಹನೀಯರು ಹೇಳಿದ್ದಾರೆ. ಈಗ ಕೈಗಾರಿಕೆಯ ವಿಚಾರದಲ್ಲಿ ಮೂರು ನಾಲ್ಕು ವಿಷಯಗಳಿಗೆ ಸರ್ಕಾರದವರು ಗಮನ ಕೊಟ್ಟರೆ ಹೆಚ್ಚಿನ ಉಪಕಾರ ದೇಶಕ್ಕೆ ಆಗಬಹುದು ಎಂಬ ಇಚ್ಛೆಯಿಂದ ಕೆಲವಾರು ವಿಚಾರಗಳನ್ನು ತಿಳಿಸುತ್ತೇನೆ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಈಗ ಎಲ್ಲೆಲ್ಲಿ ಸ್ಥಾಪನೆಯಾಗಬೇಕು ಎಂಬ ಬಗ್ಗೆ ಜಿಲ್ಲಾವಾರು ತಾಲ್ಲೂಕುವಾರು ಪಟ್ಟಿಯನ್ನು ತಯಾರಿಸಿ, ಇವುಗಳನ್ನು ಪ್ರಾರಂಭಮಾಡಲು ಎಲ್ಲೆಲ್ಲಿ ಅನುಕೂಲಗಳಿವೆ, ಎಲ್ಲೆಲ್ಲಿ ಕಚ್ಚಾ ಪದಾರ್ಥಗಳು ದೊರೆಯುತ್ತವೆ, ಇವುಗಳನ್ನೆಲ್ಲ ಪರಿಶೀಲನೆ ಮಾಡಿ, ಎಲ್ಲೆಲ್ಲಿ ಯಾವಯಾವ ಕಚ್ಚಾ ಮಾಲು ದೊರೆಯುತ್ತದೆಯೋ ಅಲ್ಲಿ ಅದಕ್ಕೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಹೀಗೆ ಮಾಡುವುದಕ್ಕೆ ಮುಂಚೆ ತಜ್ಞರ ಸಲಹೆಗಳನ್ನು ಪಡೆದು ಯಾವ ಯಾವ ಕೈಗಾರಿಕೆಗಳನ್ನು ಎಲ್ಲೆಲ್ಲಿ ಪ್ರಾರಂಭ ಮಾಡಿದರೆ ಚೆನ್ನಾಗಿ ನಡೆಯುತ್ತವೆ ಎಂದು ಪರಿಶೀಲನೆ ಮಾಡಿ ಎಷ್ಟು ಬೇಗ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರೆ ಅಷ್ಟು ಒಳ್ಳೆಯದೆಂದು ಹೇಳುತ್ತೇನೆ.

ವಿಕೇಂದ್ರೀಕರಣ ನೀತಿಯ ವಿಚಾರದಲ್ಲಿ ಮಹಾತ್ಮ ಗಾಂಧಿಯವರ ಹೆಸರನ್ನುಪಯೋಗಿಸಿ ಕೊಂಡು, ಅನೇಕರು ಅನೇಕ ವಿಧವಾಗಿ ಹೇಳಿಕೊಂಡು ಬಂದಿದ್ದಾರೆ. ಸರ್ಕಾರದವರೂ ಸಹ ಇದನ್ನೇ ಹೇಳಿದ್ದಾರೆ. ಬೆಂಗಳೂರಿನಲ್ಲಿ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಜಪಾನಿನಿಂದ ಒಬ್ಬರು ಬಂದರೆ ಅವರಿಗೆ ಕೊಡಲು ಸ್ಥಳವಿದೆ, ವಿದ್ಯುಚ್ಛಕ್ತಿ ಇದೆ ಎಂದು ಎಲ್ಲ ಸಹಾಯವನ್ನೂ ಕೊಡುತ್ತೀರಿ. ಪೋರ್ಸ್‌ಲೇನ್ ಫ್ಯಾಕ್ಟರಿಗೆ ಒಬ್ಬ ಎಕ್ಸ್‌ಪರ್ಟ್ ಬರುತ್ತಾರೆಂದರೆ ಅವರಿಗೆ ಸಹಾಯವನ್ನು ಕೊಡುತ್ತೀರಿ. ಸುದ್ದೆಮಣ್ಣು ದೊರೆಯುವ ಕಡೆ ಒಂದು ಕಾರ್ಖಾನೆ ಸ್ಥಾಪನೆ ಮಾಡಬೇಕೆಂದರೆ ಅದಕ್ಕೆ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುವುದಿಲ್ಲ. ಬೆಂಗಳೂರು ಪಟ್ಟಣ ಆಕರ್ಷಣೀಯವಾಗಿದೆ. ಅಲ್ಲದೆ ಎಲ್ಲ ಜನರೂ ಬರುತ್ತಾರೆ. ಬೆಂಗಳೂರು ನಗರದ ಸುತ್ತಮುತ್ತಲೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಲ್ಲಿ ಆಸಕ್ತಿ ತೋರಿಸುತ್ತ ಬಂದಿದ್ದಾರೆಯೇ ಹೊರತು ಬೆಂಗಳೂರನ್ನು ಬಿಟ್ಟು ಇತರ ಕಡೆಗಳಲ್ಲಿ ಸ್ಥಾಪಿಸುವ ಮನಸ್ಸು ಇದ್ದಂತೆ ನನಗೆ ತೋರಲಿಲ್ಲ. ಕೈಗಾರಿಕೆಗಳು ಒಂದೆಡೆಯಲ್ಲಿಯೇ ಕೇಂದ್ರೀಕೃತವಾಗದೆ ವಿಕೇಂದ್ರೀಕೃತವಾಗಬೇಕೆಂಬುದು ನನ್ನ ಅಭಿಪ್ರಾಯ. ನಮ್ಮ ನೆಲಮಂಗಲ ತಾಲ್ಲೂಕಿನ ಹೊನ್ನಸಂದ್ರ ಗ್ರಾಮದ ಬಳಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಮದರಾಸಿನ ಒಬ್ಬರನ್ನು ಹಿಡಿದು persuade ಮಾಡಿದೆ. ಅವರು ತಮಗೆ ಬೇಕಾದಷ್ಟು ಜಮೀನನ್ನು ಅಕ್ವೈರ್ ಮಾಡಿಸಿಕೊಟ್ಟಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಾಗಿ ತಿಳಿಸಿ ಇಲ್ಲಿಗೆ ಬಂದರು. ಸರ್ಕಾರದವರು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ವರ್ಷಾನುಗಟ್ಟಲೆ ಹಿಡಿಯಿತು. ಅಷ್ಟು ಹೊತ್ತಿಗೆ ಮಾರ್ಕೆಟ್ ರೇಟ್‌ನಲ್ಲಿ ಹೆಚ್ಚು ಕಡಮೆಯಾಗಿತ್ತು. ಅವರು ಕೈಗಾರಿಕೆಯನ್ನೇ ಸ್ಥಾಪನೆ ಮಾಡದೆ ಇರಬೇಕಾದ ಪರಿಸ್ಥಿತಿ ಬಂತು. ಡೀಸೆಂಟ್ರಲೈಸೇಷನ್ ಆಫ್ ಇಂಡಸ್ಟ್ರೀಸ್ ಎಂಬ ನೀತಿಯನ್ನು ಸರ್ಕಾರದವರು ಒಪ್ಪಿಕೊಂಡ ಮೇಲೆ ಇತರ ಕಡೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ, ಜಮೀನು ಅಕ್ವೈರ್ ಮಾಡಿಕೊಡಿ, ಇತರ ಸಹಾಯಗಳನ್ನು ಕೊಡಿ, ಎಂದು ಕೇಳಿದಾಗ ಈ ರೀತಿ ಕಾಗದ ಪತ್ರಗಳನ್ನು ನಿಧಾನ ಮಾಡಿದರೆ ಸರ್ಕಾರದವರು ಎಷ್ಟು ಮಾತ್ರ ಇವರಿಗೆ ಉತ್ತೇಜನ ಕೊಟ್ಟಂತಾಗುತ್ತದೆ? ಇನ್ನು ಮುಂದಾದರೂ ಈ ರೀತಿ ಮಾಡದೆ, ಇತರ ಹೊಸ ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಾಗ ಹಳ್ಳಿಗಳಲ್ಲಿ ಮಾಡಬೇಕೇ ಹೊರತು ಈಗಿನಂತೆ ಒಂದೇ ಕಡೆ ಕೇಂದ್ರೀಕೃತ ಮಾಡಬಾರದೆಂದು ಹೇಳುತ್ತೇನೆ.

ಅರಣ್ಯ ಇಲಾಖೆಯ ಸಂಬಂಧದಲ್ಲಿ ಮಾತನಾಡುವಾಗ ಅರಣ್ಯರೋದನವಾಗಿದೆ ಎಂದು ಕೆಲವು ಸದಸ್ಯರು ಹೇಳಿದ್ದು ಖಾದಿ ಕೈಗಾರಿಕೆ ವಿಚಾರದಲ್ಲಿ ಸ್ವಲ್ಪ ಹಾಗೆಯೇ ಆಗಿದೆ ಎಂದು ಹೇಳಬಹುದು. ಖಾದಿ ವಿಷಯವನ್ನು ಇವೊತ್ತಿನ ದಿವಸ ನೋಡಿದರೆ, ಡೆಕ್ಕನ್ ಖಾದಿ, ಹೈದರಾಬಾದ್ ಖಾದಿ, ಟಾಂಜೂರ್ ಖಾದಿ, ತಮಿಳ್ನಾಡು ಖಾದಿ ಹೀಗೆ ಎಷ್ಟೋ ಪ್ರದೇಶಗಳಲ್ಲಿ ತಯಾರಾಗುವ ಖಾದಿಗೆ ಮೈಸೂರಿನಲ್ಲಿ ಬೇಕಾದಷ್ಟು ಮಾರ್ಕೆಟ್ ಇದೆ. ಆದರೆ ನಮ್ಮಲ್ಲಿ ತಯಾರಾಗುತ್ತಿರುವ ಖಾದಿ ಸರಿಯಾಗಿ ಮಾರಾಟವಾಗುತ್ತಿಲ್ಲ. ಅವರು ಬೆಂಗಳೂರಿನಲ್ಲಿ ಹೇಗೋ ಮಾಡಿ ಅಂಗಡಿಯನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರದವರಲ್ಲಿ ಅನುಮತಿ ಪಡೆದು ಸಹಕಾರ ಸಂಘಗಳ ಮೂಲಕ ಮುಂದುವರಿಯುತ್ತಾರೆ. ಈ ಜನವಿಟ್ಟಿರುವ ಅಂಗಡಿಗಳಲ್ಲಿ ಆಯಾ ಪ್ರಾಂತದ ಖಾದಿ ವಿಶೇಷವಾಗಿ ಮಾರಾಟವಾಗುತ್ತಿರುವಾಗ ನಮ್ಮ ಬದನವಾಳ ಖಾದಿ ವಿಷಯದಲ್ಲಿಯೂ ಹಾಗೇಕೆ ಆಗಿಲ್ಲವೆಂದು ಕೇಳುತ್ತಲೇ ಇದ್ದೇವೆ. ಖಾದಿ ಬಟ್ಟೆಯನ್ನು ಉಪಯೋಗಿಸುವ ಜನ ಮೈಸೂರಿನಲ್ಲಿದ್ದಾರೆ. ಆದರೆ ಅವರು ಖಾದಿಯನ್ನು ಕೊಂಡುಕೊಳ್ಳಬೇಕೆಂದರೆ ಮೈಸೂರು ಖಾದಿ ಡಿಪೋಗಳಿಲ್ಲ; ಖಾದಿ ಕೇಂದ್ರಗಳಿಲ್ಲ. ಈ ಕೈಗಾರಿಕೆಯನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ನಮ್ಮ ದೇಶದ ಖಾದಿಯನ್ನು ಮಾರಾಟ ಮಾಡಲು ಒಂದು ಅಂಗಡಿಯನ್ನು ತೆರೆದಿಲ್ಲ. ಒಂದು ಅಂಗಡಿಯನ್ನು ತೆರೆಯಬೇಕಾದರೆ ಸಿಬ್ಬಂದಿ ಖರ್ಚು ಜಾಸ್ತಿ, ನಮಗೆ ಗಿಟ್ಟುವುದಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಹೊರಗಿನ ಪ್ರಾಂತಗಳವರಿಗೆ ಗಿಟ್ಟುವುದೇನು, ನಮಗೆ ಗಿಟ್ಟದೆ ಇರುವುದೇನು? ಆದಕಾರಣ ಈ ವಿಷಯವನ್ನು ಸ್ವಲ್ಪ ತೀವ್ರವಾಗಿ ಆಗಿ ತೆಗೆದುಕೊಂಡು ಮೈಸೂರು ದೇಶದಲ್ಲಿ ತಯಾರಾಗುವ ಖಾದಿಗೂ ಉತ್ತೇಜನ ದೊರೆಯುವಂತಾಗಬೇಕೆಂದು ಹೇಳುತ್ತೇನೆ.

ಕೈಗಾರಿಕಾ ಸಹಕಾರ ಸಂಸ್ಥೆಗಳಿಗೆ ಸಹಾಯ ಮಾಡುವುದಕ್ಕೆ ಬೀರಪ್ಪನವರ ಇಲಾಖೆಯಲ್ಲಿ ಇಂಡಿಯಾ ಸರ್ಕಾರದವರ ದುಡ್ಡಿದೆ ಎಂದು ತಿಳಿದು ಬಾಯಲ್ಲಿ ನೀರೂರಿತು. ಆದರೆ ಅಲ್ಲಿಯೂ ರೆಡ್‌ಟೇಪಿಸಂ ಕಡಿಮೆಯಾಗಿಲ್ಲ. ವಿವಿಧೋದ್ದೇಶ ಸಹಕಾರ ಸಂಘಗಳಿದ್ದರೂ

(ಶ್ರೀ ಕೆ. ಪ್ರಭಾಕರ್).

ಕೂಡ ಅದರ ಮೂಲಕ ಹೆಚ್ಚು ಉಪಕಾರವಾಗಿಲ್ಲ. ಸಂಪೂರ್ಣವಾದ ನಂಬಿಕೆಯನ್ನಿಟ್ಟು ಇವನ್ನೂ ಅಭಿವೃದ್ಧಿಮಾಡಿಲ್ಲ. ಕೈಗಾರಿಕಾಸೊಸೈಟಿಗಳನ್ನು ಮಾಡುವಾಗ ಅವನ್ನು ವಿಶ್ವೇಶ್ವರಯ್ಯ ಸ್ಕೀಂ ಪ್ರಕಾರ ಮಾಡಿದರೂ ಅಲ್ಲಿ ಒಂದು ರೀತಿಯ ಅಪಾಯವಿದೆ ಎಂದು ನಾನು ಭಾವಿಸುತ್ತೇನೆ. ಐವತ್ತು ಹಳ್ಳಿಗಳನ್ನು ಒಂದು ಕೇಂದ್ರವಾಗಿ ತೆಗೆದುಕೊಂಡು ಅಲ್ಲಿ ಒಂದು ಕೈಗಾರಿಕಾ ಸ್ಕೀಂ ಹಾಕುತ್ತಾರೆ. ಒಂದೇ ಗುಂಪಿನ ಸೊಸೈಟಿಗಳಿಗೆ ಬೆಂಬಲ ಕೊಡುತ್ತಾರೆ. ಅದಕ್ಕೆ ಬದಲು ಒಂದು ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಒಂದು ಸೊಸೈಟಿ ಒಂದು ಪ್ರದೇಶದಲ್ಲಿ ಸ್ಥಾಪನೆ ಮಾಡುವವರೆಗೂ ಅದು ಅಭಿವೃದ್ಧಿಯಾಗುವುದಕ್ಕೆ ಇದರಲ್ಲಿ ತೊಂದರೆಗಳಿವೆ. ಒಂದು ನೇಗೇಕಾರರ ಕೈಗಾರಿಕೆಗಾಗಿ ಇರುವ ಸೊಸೈಟಿ ಎಲ್ಲಿಯೂ ಕೂಡ ಮಾಡಿಲ್ಲ. ಅದನ್ನು ಮೈಸೂರಿನಲ್ಲಿ ಮೊದಲು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಕೈಗಾರಿಕೆ ನಡೆಸಲು ಹಣ ಕೊಡುತ್ತಿದ್ದೇವೆ, ಆದರೆ ಒದಗಿಸಿದ ಹಣ ಖರ್ಚು ಮಾಡದಿದ್ದರೆ ನಾವೇನು ಮಾಡೋಣ ಎಂದು ಹೇಳುತ್ತಿದ್ದಾರೆ. ಹಣವನ್ನೇನೋ ಒದಗಿಸುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ತಯಾರಾಗುವ ವಸ್ತುಗಳು ಇಂಟರ್‌ನ್ಯಾಷನಲ್ ಮಾರ್ಕೆಟ್ಟಿನಲ್ಲಿ ಖರ್ಚಾಗುವುದಿಲ್ಲ, ಮಾಡಿ ಏನು ಮಾಡಬೇಕೋ ಗೊತ್ತಿಲ್ಲ ಎಂದು ನಮ್ಮ ಜನರು ಹೇಳುತ್ತಿದ್ದಾರೆ. ಇದು ಬ್ರೇಕ್‌ಡೌನ್ ಪಾಲಿಸಿ. ಇದಕ್ಕೆ ಸಲಹೆ ಮಾಡುವುದು ವೇರ್ ಹೌಸ್ ಸಿಸ್ಟಂ ಜಾರಿಗೆ ತಂದು ನಮ್ಮ ದೇಶದಲ್ಲಿ ತಯಾರಾಗುವ ಪದಾರ್ಥಗಳಿಗೆ ರೆಗ್ಯುಲರ್ ಮಾರ್ಕೆಟ್ ಇರುವಂತೆ ವ್ಯವಸ್ಥೆ ಮಾಡಬೇಕು. ಹಾಗೆ ಮಾಡುವವರೆಗೂ ನಮ್ಮ ಕೈಗಾರಿಕೆಗಳು ಪರಿಣಾಮಕಾರಿಯಾಗಿ ಮುಂದುವರಿಯುವುದಿಲ್ಲ. ಈ ಬಗ್ಗೆ ಕೂಡಲೆ ಗಮನಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕೈಗಾರಿಕಾ ನೀತಿಯೇನಿದೆಯೆಂಬುದನ್ನು ಆಗಾಗ್ಗೆ ಜನಗಳಿಗೆ ನಾನಾ ರೀತಿಯಲ್ಲಿ ಸರ್ಕಾರದವರು ತಿಳಿಸುತ್ತಾಬಂದಿದ್ದಾರೆ. ಶ್ರೀ ಮ್ಯಾಸ್ಕರನ್‌ಹ್ಯಾಸ್ ಅವರು ಹೇಳಿದ ಹಾಗೆ 20-25 ವರ್ಷಗಳಿಂದ ಸರ್ಕಾರದವರು ನೇರವಾಗಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರು. ಅದರ ಜೊತೆಗೆ ಸಾರ್ವಜನಿಕರಿಗೂ ಸಹಾಯ ಮಾಡಿದರು. ಇಂಥ ಕೆಲವು ಮಾರ್ಗಗಳನ್ನು ಅನುಸರಿಸಿದ್ದರ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಕಾರ್ಖಾನೆಗಳು ಇತರ ಸಂಸ್ಥಾನಗಳಿಗಿಂತ ಉತ್ತಮ ರೀತಿಯಲ್ಲಿ ನಡೆಯುತ್ತಿರುವುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಈಕಾರ್ಖಾನೆಗಳು ಸಮರ್ಪಕವಾಗಿ ನಡೆಯಬೇಕು, ನಮ್ಮ ಬಂಡವಾಳಕ್ಕೆ ತಕ್ಕ ಉತ್ಪತ್ತಿ ಬರಬೇಕು ಮತ್ತು ಬಹಳ ದಕ್ಷತೆಯಿಂದ, ಆಧುನಿಕ ರೀತಿಯಲ್ಲಿ ಕೈಗಾರಿಕೆಗಳು ನಡೆಯಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಯಾವಯಾವ ಕೈಗಾರಿಕೆ ಯಾವ ಯಾವ ಕಾರಣದಿಂದ ಕುಗ್ಗಿಹೋಗಿದೆಯೆಂಬುದನ್ನು ಪರಿಶೀಲನೆ ಮಾಡಿ ಅದಕ್ಕೆ ತಕ್ಕ ವ್ಯವಸ್ಥೆಮಾಡಿ ಮುಂದುವರಿಸಿಕೊಂಡು ಹೋಗಬೇಕಾದ್ದು ನಮ್ಮ ಕರ್ತವ್ಯವಾಗಿದೆ.

ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಮಾತನಾಡುತ್ತಾ ಪೋರ್ಸಿಲೇನ್ ಫ್ಯಾಕ್ಟರಿಯ ಕೆಲಸ ನಿಧಾನವಾಗಿರುವುದನ್ನು ಹೇಳಿದರು; ಅದು ನಿಜ. ಹೋದ ಡಿಸೆಂಬರ್ ತಿಂಗಳಲ್ಲಿ ಅದು ಉತ್ಪತ್ತಿಮಾಡಲು ಪ್ರಾರಂಭಿಸಿತು. 63 ಲಕ್ಷ ಇದ್ದಕಡೆ ಈಗ 84 ಲಕ್ಷ ಅಂದಾಜಾಗಿದೆ. ಇದಕ್ಕೆ ಕಾರಣವೇನು ಎಂದು ಇನ್ನೊಂದು ಪ್ರಶ್ನೆ ಹಾಕಿದ್ದಾರೆ. ಪೋರ್ಸಿಲೇನ್ ಫ್ಯಾಕ್ಟರಿ ಕಟ್ಟಡ ಕೆಲವು ಕಾರಣಗಳಿಂದ ನಿಧಾನವಾಗಿದೆ. ಇದಕ್ಕೆ ಮುಖ್ಯವಾಗಿ ಅಗತ್ಯವಾದ ಕಬ್ಬಿಣ ಮುಂತಾದ ಸಾಮಾನು ಕಾಲಕ್ಕೆ ಸರಿಯಾಗಿ ಸರಬರಾಯಾಗದೆ ಕೆಲವು ತಿಂಗಳು ನಿಧಾನ ಮಾಡಬೇಕಾಗಿ ಬಂತು. ಈಗ ಈ ಕೆಲಸ ಬಹಳ ವೇಗವಾಗಿ ನಡೆಯುತ್ತಿದೆಯೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಸಂತೋಷಪಡುತ್ತೇನೆ. ಈಗ ದಿವಸಕ್ಕೆ ಇಷ್ಟು ಪ್ರೋಗ್ರೆಸ್ ಆಗಬೇಕೆಂದು ನಿರ್ಧಾರ ಮಾಡಿದೆಯೋ ಅದರಂತೆ ಕೆಲಸವಾಗುತ್ತಿದೆ. ಈಗಾಗಲೆ ಹಲವು ಹೊಸ ಮೆಷೀನ್ ಹಾಕಿ ಪ್ರೊಡಕ್ಷನ್ ಷುರುವಾಗಿದೆ. ಇನ್ನು ಸುಮಾರು ಒಂದೆರಡು ತಿಂಗಳಲ್ಲೇ ಕಟ್ಟಡದ ಕೆಲಸವನ್ನು ಸಂಪೂರ್ಣವಾಗಿ ಪೂರೈಸಬೇಕೆಂದಿದೆ. ನಾನು 26ನೆಯ ತಾರೀಖಿನ ದಿವಸ ತಮ್ಮೆಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಪ್ರೋಗ್ರಾಂ ಹಾಕಿದ್ದೆ. ಆದರೆ ಡಿಮ್ಯಾಂಡುಗಳ ಮೇಲಿನ ಚರ್ಚೆ ನಡೆಯುತ್ತಿದ್ದುದರಿಂದ ತಮಗೆ ಅವಕಾಶವಿಲ್ಲದೆ ನಿಧಾನವಾಯಿತು. ಅಂತೂ ಈ ಕಾರ್ಖಾನೆಯ ಕೆಲಸ ಬೇಗ ಪೂರೈಸಬೇಕು, ಇದರಿಂದ ಸರಿಯಾದ ಉತ್ಪತ್ತಿ ಬರುವ ಹಾಗೆ ಮಾಡಬೇಕೆಂದಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಆಶೆಪಡುತ್ತೇನೆ. 63 ಲಕ್ಷ ರೂಪಾಯಿ ಇದ್ದುದು 84 ಲಕ್ಷ ರೂಪಾಯಿಗಳಿಗೆ ಏರಿತು ಎಂದು ಪ್ರಶ್ನೆ ಮಾಡಿದರು. ಏರಿರುವುದು ನಿಜ. 60 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಿದಾಗ ಭಾರತದಲ್ಲಿ ಕೊಂಡುಕೊಳ್ಳುವ ಮೆಷೀನರಿಯನ್ನು ಅದರಲ್ಲಿ ಸೇರಿಸಿರಲಿಲ್ಲ. ಎನ್. ಜಿ. ಕೆ. ಕಂಪೆನಿಯೊಡನೆ ಒಪ್ಪಂದ ಮಾಡಿಕೊಳ್ಳುವಾಗ ಅಂದಾಜಿನಲ್ಲಿ ಅವರಿಂದ ಸರಬರಾಯಾಗುವ ಮೆಷೀನರಿಯನ್ನು ಮಾತ್ರ ಸೇರಿಸಿತ್ತು. ಆಮೇಲೆ ಭಾರತದಲ್ಲಿ ಕೊಂಡುಕೊಳ್ಳುವ ಪ್ರಮೇಯ ಬಂತು. ಆದಕಾರಣ 84 ಲಕ್ಷ ರೂಪಾಯಿಗಳಿಗೇರಿದೆಯೇ ವಿನಾ ಮತ್ತೆ ಬೇರೆ ಇಲ್ಲ. ಮತ್ತು N.G.K. ಇಂಜನಿಯರು ಗಳು ಬಹಳ ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು; ಅದು ಸರಿಯಲ್ಲ. ಯಾವ ದಿವಸದಿಂದ ಅವರು ಕೆಲಸ ಮಾಡಬೇಕಂದು ವಿಧಾಯಕವಾಗಿದೆಯೋ ಆ ದಿವಸದಿಂದ ಮಾತ್ರ ಅವರು ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಎಷ್ಟು ಖರ್ಚಾಗಬೇಕಾಗಿತ್ತೋ ಅಷ್ಟು ಮಾತ್ರ ಖರ್ಚಾಗಿದೆ.

ಪ್ಲಾಸ್ಟಿಕ್ ಸೆಕ್ಷನ್ ವಿಷಯವನ್ನು ಶ್ರೀ ಶ್ರೀನಿವಾಸಯ್ಯಂಗಾರ್‌ಅವರು ಪ್ರಸ್ತಾಪ ಮಾಡಿದರು. ಈ ವಿಷಯದಲ್ಲಿ ಒಂದು ಪ್ರೈವೇಟ್ ಕಂಪನಿಗೆ, ರೆಂಕೋ ಕಂಪೆನಿಗೆ ಜವಾಬ್ದಾರಿ ವಹಿಸಿದೆ. ಈ ಬಗ್ಗೆ ಆಡಿಟರ್ ಜನರಲ್ ಅವರ ಅಬ್ಜೆಕ್ಷನ್ ಇದೆಯೆಂದು ಹೇಳಿದರು. ರೆಂಕೋ ಕಂಪೆನಿಯಲ್ಲಿ ಸರ್ಕಾರ ಬಹುಭಾಗದ ಹಣ ಹಾಕಿದೆ. ಇದರ ಮೇಲೆ ಹತ್ತುಕೋಟಿ ಕೂಡ ಬಹುಮಟ್ಟಿಗೆ ಗಿದೆ. ಈ ವಿಷಯದಲ್ಲಿ ಒಂದು ಆಖೈರು ತೀರ್ಮಾನ ತೆಗೆದುಕೊಳ್ಳಬೇಕೆಂಬುದು ಸರ್ಕಾರದ ತೀವ್ರ ಪ್ರರ್ಯಾಲೋಚನೆಯಲ್ಲಿದೆ. ತಕ್ಷಣ ಆಖೈರು ತೀರ್ಮಾನಕ್ಕೆ ಬರುತ್ತೇವೆ.

ಸಿಮೆಂಟ್ ಮತ್ತು ಸಲ್ಫೈಡ್ ಓರ್ಸ್ ವಿಷಯವನ್ನು ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಪ್ರಸ್ತಾಪ ಮಾಡಿದರು. ಇಂಗಳದಾಳಿನಲ್ಲಿ ಈ ಓರ್ ಬೇಕಾದಷ್ಟಿದೆ, ಸಲ್ಫರ್ ಉತ್ಪನ್ನ ಮಾಡಿ ಸಲ್ಫ್ಯೂರಿಕ್ ಆಸಿಡ್ ತಯಾರು ಮಾಡುವುದಕ್ಕೆ ಏರ್ಪಾಡು ಮಾಡಬೇಕು ಎಂಬ ಆಶೆ ಸರ್ಕಾರಕ್ಕಿದೆ ಎಂದು ಹಿಂದೆ ಜಿಯಲಾಜಿಕಲ್ ಇಲಾಖೆ ಡಿಮ್ಯಾಂಡ್ ಬಂದಾಗ ಹೇಳಿದೆ. ಈಗ ಕಾರ್ಯ ಕ್ರಮ

ನಡೆಯುತ್ತಿವೆ, ಸಲ್ಫ್ಯೈಡ್ ಓರ್‌ನ ಪ್ರಾಸ್ಪೆಕ್ಟಿಂಗ್ ವರ್ಕ್ ಬಹು ವೇಗವಾಗಿ ಆಗುತ್ತಿದೆ. ಸದಸ್ಯರು ಬಂದರೆ ತೋರಿಸಬಹುದು; ತೋರಿಸಿದರೆ ಚೆನ್ನಾಗಿ ಗೊತ್ತಾಗುತ್ತದೆ. ಆದಷ್ಟು ಬೇಗ ಪ್ರಾಸ್ಪೆಕ್ಟಿಂಗ್ ವರ್ಕ್ ಮುಗಿಸಿ ಭೂಗರ್ಭದಲ್ಲಿರುವ ಗಂಧಕದ ಅದುರನ್ನು ಸದ್ವಿನಿಯೋಗ ಮಾಡಬೇಕೆಂಬ ಬಗ್ಗೆ ಸರ್ಕಾರಕ್ಕೆ ತೀವ್ರಾಸಕ್ತಿಯಿದೆ. ಇದಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಕಷ್ಟು ಹಣ ಒದಗಿಸಿದ್ದೇವೆ.

ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಡೈಕ್ರೋಮೇಟ್ ಫ್ಯಾಕ್ಟರಿ, ಬೆಳ್ಳಾರದ ಚಿನ್ನದಗಣಿ ಇವುಗಳ ವಿಷಯದಲ್ಲಿ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಟೀಕೆ ಮಾಡಿದರು. ಬೆಳ್ಳಾರದ ಚಿನ್ನದ ಗಣಿಯಲ್ಲಿ ಬಹುಶಃ ಸಾಕಷ್ಟು ಚಿನ್ನ ಸಿಕ್ಕಬಹುದೆಂಬ ಆಶೆಯಿತ್ತು. ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ಭೂಗರ್ಭದಲ್ಲಿ ನೋಡಿ ಪ್ರಾಸ್ಪೆಕ್ಟ್ ಮಾಡುವುದಕ್ಕೆ ಖರ್ಚು ಕಡಮೆಯಾಗುವುದಿಲ್ಲ, ಎಷ್ಟು ಅನುಕೂಲವಾಗಬಹುದೆಂಬುದನ್ನು ತಿಳಿಯಲು ಹಣ ಹೇರಳವಾಗಿ ಖರ್ಚು ಮಾಡಬೇಕಾಯಿತು. ಎಲ್ಲಿ ಏನಿದೆಯೆಂಬುದನ್ನು ತಿಳಿಯಲು ಆಧುನಿಕ ಯಂತ್ರಗಳಿಂದ ಶೋಧನೆ ಮಾಡಲು ಹಣ ಉಪಯೋಗಿಸಿದೆವೇ ವಿನಾ ಮತ್ತೆ ಬೇರೆ ಉದ್ದೇಶವಿಲ್ಲ. ಈ ಬಗ್ಗೆ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವುದು ನಿಜ. ಅಲ್ಲಿ ಚಿನ್ನ ಸಿಕ್ಕಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬ ಆಶೆಯಿಂದ ಈ ಕೆಲಸ ಕೈಕೊಂಡೆವು. ತಮಾಷೆಗಾಗಲಿ ಅಥವಾ ಹುಡುಗಾಟಕ್ಕಾಗಲಿ ಈ ಕೆಲಸ ಮಾಡಲಿಲ್ಲವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಚೆಗೆ ಬೆಳ್ಳಾರದ ಚಿನ್ನದ ಗಣಿಯಲ್ಲಿ ಎಕನಾಮಿಕ್ಕಾಗಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಪರಿಣತರಿಂದ ಅಭಿಪ್ರಾಯ ಬಂದಿರುವುದರಿಂದ ಮತ್ತು ಚಿನ್ನ ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುವುದಿಲ್ಲವೆಂದು ತಿಳಿದುಬಂದಿರುವುದರಿಂದ ಈ ಕೆಲಸವನ್ನು ನಿಲ್ಲಿಸಬೇಕಾಯಿತು.

ಇನ್ನು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಮತ್ತು ಡೈಕ್ರೋಮೇಟ್ ಫ್ಯಾಕ್ಟರಿ ವಿಚಾರ ತೆಗೆದುಕೊಳ್ಳೋಣ. ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಯುದ್ಧ ನಡೆಯುತ್ತಿದ್ದಾಗ ಹೇರಳವಾಗಿ ಕೆಲಸ ನಡೆಯಿತು, ಬೇಕಾದಷ್ಟು ಸಾಮಾನುಗಳು ತಯಾರಾದುವು, ಈ ವಿಷಯ ಗೊತ್ತಿರಬಹುದು. ಆಗ ಒಳ್ಳೆಯ ಆದಾಯ ಬಂತು, ಉತ್ಪತ್ತಿಯ ಖರ್ಚೂ ಹೆಚ್ಚಾಯಿತು. ಯುದ್ಧ ನಿಂತ ಮೇಲೆ ಅಲ್ಲಿ ತಯಾರಾದ ಇಂಪ್ಲಿಮೆಂಟ್ ಮಾರಾಟ ಮಾಡುವುದು ಕಷ್ಟವಾಯಿತು. ಈಗ ಈ ಕಾರ್ಖಾನೆ ಲಾಭದಾಯಕವಾಗಿ ಕೆಲಸ ಮಾಡುತ್ತಿದೆ. ಅಲ್ಲಿ ಹಿಂದಿದ್ದ ಪರಿಣತರನ್ನು ಕರೆಸಿ ಅವರ ಸೇವೆಯನ್ನು ಉಪಯೋಗಿಸಿಕೊಂಡು ಕಾರ್ಖಾನೆ ಕೆಲಸ ಚೆನ್ನಾಗಿ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂಬ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಡೈಕ್ರೋಮೇಟ್ ಫ್ಯಾಕ್ಟರಿಯಲ್ಲಿ ಅನೇಕ ವರ್ಷಗಳಿಂದ ನಷ್ಟವಾಗುತ್ತಿರುವುದರಿಂದ ನಾನಾ ಕಾರಣದಿಂದ ಅದನ್ನು ಮುಂದುವರಿಸುವುದು ಸರಿಯಲ್ಲವೆಂದು ನಿಲ್ಲಿಸಿದ್ದು ತಪ್ಪಲ್ಲವೆಂದು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆ. ಮತ್ತೆ ಈ ಸಿಲ್ಕ್ ಇಂಡಸ್ಟ್ರೀ ವಿಚಾರವಾಗಿ ಬಹಳ ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ಮೈಸೂರು ಸಿಲ್ಕ್ ಫಿಲೇಚರ್ ಇಂಡಸ್ಟ್ರೀ ವಿಚಾರದಲ್ಲಿ ಅಲ್ಲಿಯ ಜನರಿಗೆ ತುಂಬ ತೊಂದರೆಯಾಗಿದೆ ಎನ್ನತಕ್ಕ ವಿಚಾರ ಸರ್ಕಾರದವರ ಗಮನಕ್ಕೂ ಬಂದಿದೆ. ಆದರೆ ಟಿ. ನರಸೀಪುರದ ರೇಷ್ಮೆ ಕೈಗಾರಿಕೆಯ ವಿಚಾರದಲ್ಲಿ ಏನಾದರೂ ಮಾಡಿ ಅದಕ್ಕೆ ಉತ್ತೇಜನ ಕೊಟ್ಟು ಅದರಿಂದ ದೇಶಕ್ಕೆ ಒಂದು ಅನುಕೂಲವಾಗುವ ಹಾಗೆ ಮಾಡಬೇಕೆಂದು ತಿಳಿಸಿದ್ದವು. ಆದರೆ ಈ ವಿಚಾರದಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ಕೈಗೊಂಡಿರುತ್ತಾರೆಂಬ ಅಂಶವು ಮಾನ್ಯ ಸದಸ್ಯರಾರಿಗೂ ಗೊತ್ತಿಲ್ಲವೆಂಬುದಾಗಿ ಹೇಳಿದ್ದಾರೆ. ಆದುದರಿಂದ ನಾನು ಮೊದಲನೆಯದಾಗಿ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಮಾನ್ಯ ಸದಸ್ಯರುಗಳ ಅವಗಾಹನೆಗೆ ತರಲು ಆಶಿಸುತ್ತೇನೆ—ಟಿ. ನರಸೀಪುರದಲ್ಲಿರತಕ್ಕ "ಮೈಸೂರು ಸಿಲ್ಕ್ ಫಿಲೇಚರ್" ಕಂಪೆನಿಗೆ 17,13,200 ರೂಪಾಯಿಗಳ ಸಾಲವಿದೆ. ಬಹುಶಃ ಈ ಕಂಪೆನಿಯ ಬಂಡವಾಳವೂ ಕೂಡ ಹೆಚ್ಚು ಕಡಮೆ ಅಷ್ಟೇ ಇರಬಹುದು. ಅಂತೂ ಈ ಸ್ಥಿತಿಗೆ ಬಂದಿದೆ ಆ ಕಂಪೆನಿ. ಇದಕ್ಕೆ ನಾನಾ ಕಾರಣಗಳಿವೆ. ನಾವು ಎಲ್ಲ ಅಂಶಗಳನ್ನೂ ಪರಿಶೀಲನೆ ಮಾಡಿದ್ದೇವೆ. ಆದರೆ ಈ ಕೈಗಾರಿಕೆಯು ಸಮರ್ಪಕವಾದ ರೀತಿಯಲ್ಲಿ ಮುಂದುವರಿಯುತ್ತಿಲ್ಲ ಎನ್ನುವ ವಿಚಾರದಲ್ಲಿ ಮಾನ್ಯ ಸದಸ್ಯರಾದ ತಮಗೆಲ್ಲರಿಗೂ ಮನಸ್ಸಿಗೆ ಎಷ್ಟು ಬಾಧೆಯಾಗುತ್ತಿದೆಯೋ ಸರ್ಕಾರದವರಿಗೂ ಆ ವಿಚಾರದಲ್ಲಿ ಅಷ್ಟೇ ಬಾಧೆಯಾಗುತ್ತಿದೆ. ಈ ಕಂಪೆನಿಯಲ್ಲಿ 45 ಸಾವಿರ ರೂಪಾಯಿಗಳು ಷೇರ್ ರೂಪದಲ್ಲಿ ಖಾಸಗೀ ಜನರ ಬಂಡವಾಳವಿರುತ್ತದೆ. ಆದರೆ ಈ ದಿವಸ ಈ ಕಂಪೆನಿಯಿಂದ ಬರತಕ್ಕಂಥ ವರಮಾನದ ಬಗ್ಗೆ ಅನುಮಾನವಿರುವಾಗ ಈಗ ಹಾಕಿರತಕ್ಕ ಭಾರಿ ಮೊಬಲಗಿನ ಮೇಲೆ ಪುನಃ ಮತ್ತಷ್ಟು ಹಣವನ್ನು ಹಾಕತಕ್ಕದ್ದು ಯುಕ್ತವೇ ಮತ್ತು ಇಂಥ ಕೈಗಾರಿಕೆಗಳನ್ನು ಸರ್ಕಾರದವರು ಕೈಗೊಳ್ಳುವುದು ಸೂಕ್ತವೇ ಎಂಬುದನ್ನು ಬಹಳ ತೀವ್ರವಾಗಿ ನಾವೆಲ್ಲರೂ ಪರಿಶೀಲನೆ ಮಾಡಬೇಕಾಗಿದೆ. ಆದರೆ ಇದೇ ಸಂದರ್ಭದಲ್ಲಿ ಇದು ಲಕ್ಷಾಂತರ ಜನರು ಜೀವನ ನಡೆಸಿಕೊಳ್ಳುವಂಥ ಒಂದು ಕೈಗಾರಿಕೆಯಾಗಿರುವುದರಿಂದ ಇದನ್ನು ಉತ್ತಮಪಡಿಸಬೇಕು ಎನ್ನತಕ್ಕದ್ದು ಇನ್ನೊಂದು ಪ್ರಶ್ನೆ ಬೇರೆ ಇದೆ. ಆದರೆ ಈ ಕಾರ್ಖಾನೆಯನ್ನು ಎರಡು-ಮೂರು ರೀತಿಗಳಲ್ಲಿ ಉತ್ತಮಪಡಿಸಲು ಅವಕಾಶವಿದೆಯೆಂದು ಕಾಣುತ್ತಿದೆ, ಈ ಕಂಪೆನಿಯ ಷೇರುದಾರರುಗಳೇ ವಾಲಂಟಿಯರ್ ಆಗಿ ಮುಂದೆ ಬಂದು ಅದನ್ನು ಲಿಕ್ವಿಡೇಟ್ ಆಗುವಂತೆ ಮಾಡತಕ್ಕದ್ದು ಒಂದು ದಾರಿ. ಇಲ್ಲವೇ ನಾವೇ ಈ ಕಾರ್ಖಾನೆಯನ್ನು ತೆಗೆದುಕೊಳ್ಳಬೇಕು. ಇನ್ನು ಮೂರನೆಯದಾಗಿ ಆ ಕಂಪೆನಿಯ ಷೇರುಗಳನ್ನು ಈಗಿನ ಮಾರ್ಕೆಟ್ ಬೆಲೆಗೆ ಇಳಿಸಿ ಒಂದು ಲಿಮಿಟೆಡ್ ಕಂಪೆನಿಯನ್ನಾಗಿ ಮಾಡುವುದು. ಆದರೆ ಈ ಎಲ್ಲ ವಿಚಾರಗಳಲ್ಲೂ ಸರ್ಕಾರಕ್ಕೆ ಬಹಳ ಕಷ್ಟವಿದೆ. ಆದಾಗ್ಯೂ ಸರ್ಕಾರದವರು ಈ ವಿಚಾರವಾಗಿ ಬಹಳ ತೀವ್ರಾಸಕ್ತಿಯಿಂದ ಆಲೋಚನೆ ಮಾಡುತ್ತಿದ್ದೇವೆ. ಆದರೆ ಈ ದಿವಸ ಈ ಕಂಪೆನಿಯನ್ನು ಸರ್ಕಾರದವರೇ ತೆಗೆದುಕೊಂಡು ಇದನ್ನು ಸಮರ್ಪಕವಾದ ರೀತಿಯಲ್ಲಿ ನಡೆಸಿಕೊಂಡು ಬರಲು ಸಾಧ್ಯವಿದೆಯೋ ಎನ್ನುವುದನ್ನು ಆಲೋಚನೆ ಮಾಡುತ್ತಿದ್ದೇವೆ, ಈ ರೀತಿ ಇದರಲ್ಲಿರತಕ್ಕ ನಾನಾ ರೀತಿಯ ಸಾಧಕ ಬಾಧಕಗಳೇನೆಂಬುದನ್ನು ಪರಿಶೀಲಿಸಿ ನೋಡಬೇಕಾಗಿದೆ. ಈ ದಿವಸ ಆ ಕಂಪೆನಿಯವರು ಬಂಡವಾಳವಿಲ್ಲದೆ ಬಹಳ ತೊಂದರೆಪಡುತ್ತಿದ್ದಾರೆ. ಆದರೆ ನಾವು ಈಗಾಗಲೇ ಬೇಕಾದಷ್ಟು ಹಣವನ್ನು ಅದಕ್ಕೆ ಕೊಟ್ಟಿದ್ದೇವೆ. ಈಗಲೂ ಕೂಡ ನಾವು ಇನ್ನೂ ಅಷ್ಟು ದುಡ್ಡನ್ನು ಕೊಟ್ಟೆವೆಂದೇ ಇಟ್ಟುಕೊಳ್ಳೋಣ. ಆಗಲೂ ಕೂಡ ಒಂದು ವೇಳೆ ಈ ಕಾರ್ಯ ಅವರಿಂದ ಸಾಧ್ಯವಾಗಲಿಲ್ಲ ಎಂದು ಕಂಡುಬಂದರೆ, ಇನ್ನು ಉಳಿದಿರತಕ್ಕದ್ದು ಅದನ್ನು ಸರ್ಕಾರವೇ ಕೈಗೊಳ್ಳಬೇಕು. ಹಾಗೆ ಸರ್ಕಾರದವರು ಕೈಗೊಂಡರೆ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಇನ್ನೂ ಅದನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗುತ್ತದೆಯೋ. . . .

ಶ್ರೀ ಬಿ. ರಾಚಯ್ಯ (ಎಳಂದೂರು-ಅನುಸೂಚಿತ ಜಾತಿಗಳು).—ಆ ಕನಕಪುರ ಫ್ಯಾಕ್ಟರಿಯಲ್ಲಿ ತಯಾರಾಗುತ್ತಿರುವ ಸಿಲ್ಕು ನೂಲನ್ನು ಅಲ್ಲಿಗೆ ರವಾನೆ ಮಾಡಿ ಅವರು ಅಲ್ಲಿ ಸಾಮಾನುಗಳನ್ನು ತಯಾರಿಸುವಂತೆ ಏಕೆ ಮಾಡಬಾರದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಈ ಸಿಲ್ಕ್ ಫ್ಯಾಕ್ಟರಿಗಳಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಸಾಕಷ್ಟು ಗಿರಾಕಿಗಳಿಲ್ಲ. ಮಾರ್ಕೆಟ್ಟಿನಲ್ಲಿ ನಮ್ಮ ರೇಷ್ಮೆಯ ಮಾರಾಟಕ್ಕೆ ಬಹಳ ಕಷ್ಟ ಬಂದಿದೆ. ಈ ದಿವಸ ನಮ್ಮ ಮಾರ್ಕೆಟ್ಟಿಗೆ ನಾನಾ ಕಡೆಯಿಂದ ಮಾಲು ಬರುತ್ತಿದೆ. ಯುದ್ಧ ಕಾಲದಲ್ಲಿ ವಿಶೇಷವಾಗಿ ತಯಾರಿಸಲ್ಪಟ್ಟಂಥ ಸಾಮಾನುಗಳು ಈ ದಿವಸ ವಿಶೇಷವಾಗಿ ಸ್ಟಾಕ್ ನಿಂತುಹೋಗಿವೆ. ಈ ದಿವಸ ಆ ಸಾಮಾನುಗಳ ಮಾರಾಟಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಿದರೆ ಸಾಕಾಗಿದೆ. ಆದುದರಿಂದ ಈಗ ನಾವು ಈ ನಾನಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಈ ರೇಷ್ಮೆ ಕೈಗಾರಿಕೆಯನ್ನು ಇನ್ನೂ ಉತ್ತಮ ಪಡಿಸಬೇಕೆಂಬ ಆಸೆ ಸರ್ಕಾರಕ್ಕಿದೆ.

Sri L. SIDDAPPA (Channagiri).—He is repeating the same thing for the past five years.

Sri H. M. CHANNABASAPPA.—I am stating that the Government are not the only party concerned here. After all, we owned only one-tenth of the shares. Supposing we want to purchase all the shares at the market rate, is every shareholder prepared to sell his share at the market rate to-day? That is a point in which hundreds and hundreds of people are concerned.

Sri L. SIDDAPPA.—You force them to liquidate.

Sri H. M. CHANNABASAPPA.—That is a matter in which the share-holders also have got to play their part.

Sri S. SRINIVASA IYENGAR.—Will the Minister consider another alternative also, that is, to finance the Factory to see that the Factory has full production and can compete with the market and pay back their loan.

Sri H. M. CHANNABASAPPA.—Heavy amounts have got to be invested. We have already invested Rs. 17-18 lakhs. I have heard many an Hon'ble Member say on the floor of this House that the Government must be very careful in sinking State funds in losing concerns, in concerns of doubtful return. Therefore, that is a point for serious consideration, whether to invest funds in addition to the heavy amounts already invested, in concerns of doubtful return. (*Interuption*). If Government do not do it, who else. That is also a point for consideration. They have got to apply to the Corporation and the Corporation will look into the assets and liabilities; they have got to consider various aspects.

Sri S. SRINIVASA IYENGAR.—By providing produce loan you can make any factory work. At the same time Government should stand as a surety.

Sri T. MARIAPPA.—Much headway is made in foreign countries on account of scientific advancement. The whole thing has to be re-built and modernised and foreign trained technical personnel should be employed.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಪಾವಗಡ ತಾಲ್ಲೂಕಿನಲ್ಲಿ 26 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಚರ್ಮ ಹದಮಾಡುವ ಕಾರ್ಖಾನೆಯನ್ನು ಸ್ಥಾಪಿಸುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಹಾಗೆ ಅದನ್ನು ಈವರೆಗೂ ಮಾಡದೆ ಇರಲು ಕಾರಣವೇನು?

Sri H. M. CHANNABASAPPA.—I should like to assure the House that the Government will come to a decision on this matter very early.

Sri T. MARIAPPA.—We are only anxious that the wheel should be rehabilitated. It can never be abandoned because it is a vital industry. Therefore, they must come to quick decision. The Government must rehabilitate, modernise and place it on a safe footing.

ಶ್ರೀ ಕೆ. ಪುಟ್ಟಸ್ವಾಮಿ.—ಈ ರೀತಿಯಾಗಿ ಉತ್ತರ ಕೊಡುವುದನ್ನು ತಾವು ನಿಲ್ಲಿಸುವುದು ಯಾವಾಗ?

Sri H. M. CHANNABASAPPA.—With the minimum possible delay, we will finalise it.

ಇನ್ನು ಅನಂತರ ಈ ಸ್ಪನ್ ಸಿಲ್ಕ್ ವಿಚಾರ ಬೇರೆ ಪ್ರಸ್ತಾಪಮಾಡಿದ್ದಾರೆ. ಇದು ಆ ಚರಕಾ ಸಿಲ್ಕ್ ಇಂಡಸ್ಟ್ರೀಸಿಗೆ ಬಹಳ ಆಧಾರವಾದದ್ದು. ಇದಕ್ಕೂ ಬಹಳ ತೊಂದರೆಯಿದೆ. ಇದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಈ ಕೈಗಾರಿಕೆಯನ್ನು ಸರ್ಕಾರದವರೇ ತೆಗೆದುಕೊಂಡು ಇದಕ್ಕೆ ಇನ್ನೂ ಉತ್ತಮ ರೀತಿಯ ಮೆಷಿನರಿಗಳನ್ನು ತರಿಸಿ ಇದನ್ನು ಉತ್ತಮಪಡಿಸಬೇಕೆಂಬುದು ಒಂದು ಯೋಚನೆ. ಎರಡನೆಯದಾಗಿ ಕೊಯಮತ್ತೂರಿನ ಕೈಗಾರಿಕೆಯವರನ್ನು ಜೊತೆಗೆ ಪಾಲುದಾರರನ್ನಾಗಿ ತೆಗೆದುಕೊಂಡು ಐದುವರ್ಷಗಳ ಒಂದು ಒಪ್ಪಂದ ಮಾಡಿಕೊಂಡು ಆ ಒಪ್ಪಂದದ ಪ್ರಕಾರ ಅವರೊಂದಿಗೆ ಹೊಂದಾವಣಿಕೆಯಿಂದ ಇದನ್ನು ರೀಹ್ಯಾಬಿಲಿಟೇಷನ್

ಮಾಡಬೇಕಾಗುತ್ತದೆ. ಇನ್ನು ಈಗಾಗಲೆ ಇದು ಮಾಡಿಕೊಂಡಿರತಕ್ಕಂಥ ಸಾಲ-ಸೋಲಗಳನ್ನು ತೀರಿಸಬೇಕು ಎನ್ನುವ ಅಂಶವನ್ನೂ ಕೂಡ ನಾವೀಗ ಆಲೋಚನೆ ಮಾಡಬೇಕಾಗಿದೆ.

3 P.M.

ಇನ್ನೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇವೆಲ್ಲವನ್ನೂ ಬೋರ್ಡ್ ಆಫ್ ಡೈರೆಕ್ಟರ್ಸ್ ಯೋಚನೆ ಮಾಡುತ್ತಾ ಇದ್ದಾರೆ. ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವನ್ನೂ ಕೂಡ ಕೇಳಿದ್ದಾರೆ. ತಕ್ಷಣದಲ್ಲೇ ಒಂದಲ್ಲ ಒಂದು ರೀತಿಯಲ್ಲಿ ವ್ಯವಸ್ಥೆಯಾಗುತ್ತದೆ ಎಂಬ ನಂಬಿಕೆ ಇದೆ. Fruit canning industry ವಿಚಾರವಾಗಿ ಮಾತನಾಡುತ್ತಾ ಈ ದೊಡ್ಡ ದೊಡ್ಡ ಕೈಗಾರಿಕೆಗಳನ್ನೆಲ್ಲಾ ಬೆಂಗಳೂರಿನ ಸುತ್ತಮುತ್ತ ಕೇಂದ್ರೀಕರಿಸುತ್ತಾ ಇದ್ದೀರಿ ಎಂದು ಮಾನ್ಯ ಸದಸ್ಯರನೇಕರು ಹೇಳಿದರು. ಕೈಗಾರಿಕೆಗಳನ್ನೆಲ್ಲಾ ಬೆಂಗಳೂರಿನಲ್ಲೇ ಹಾಕಬಾರದು, ವಿಕೇಂದ್ರೀಕರಣ ಮಾಡಬೇಕು ಎಂಬುದು ಒಂದು ಬಹಳ ಒಳ್ಳೆಯ ನೀತಿ, ಅದು ಒಂದು accepted policy ಎಂದು ನಾನು ತಿಳಿದುಕೊಂಡಿದ್ದೇನೆ. ಈ fruit canning industryಯನ್ನು ಎಲ್ಲಿ ಹಾಕಬೇಕೆಂಬ ವಿಷಯ ಪರ್ಯಾಲೋಚನೆಗೆ ಬಂದು ಬೆಂಗಳೂರಿನಲ್ಲಿ ಹಾಕಬೇಕೇ, ಮೈಸೂರಿನಲ್ಲಿ ಹಾಕಬೇಕೇ ಕೋಲಾರದಲ್ಲಿ ಹಾಕಬೇಕೇ ಚಿಕ್ಕಮಗಳೂರಿನಲ್ಲಿ ಹಾಕಬೇಕೇ ಎಂದು ಯೋಚನೆಮಾಡಿ, ಮೈಸೂರಿನಲ್ಲಿ ಹಾಕಬೇಕೆಂದು ಮಾಡಿದ್ದೇವೆ. ಮತ್ತು ಕೋಲಾರ, ಬೆಂಗಳೂರು, ಹಾಸನ ಮತ್ತು ಚಿಕ್ಕಮಗಳೂರು ಈ ನಾಲ್ಕು ಸ್ಥಳದಲ್ಲಿ ಹತ್ತು ಲಕ್ಷ ರೂಪಾಯಿಗಳ ಬಂಡವಾಳದಲ್ಲಿ fruit preserving centres ಮಾಡಬೇಕೆಂದು ಅದಕ್ಕೂ ಕೂಡ ವ್ಯವಸ್ಥೆ ಮಾಡಿದೆ. ಈ ನಾಲ್ಕು ಸ್ಥಳಗಳಲ್ಲೂ ಕೂಡ ಅಲ್ಲಿ ಬೆಳೆಯುತಕ್ಕ ಹಣ್ಣುಗಳನ್ನು ಉಪಯೋಗಿಸಿಕೊಂಡು ಫ್ರೂಟ್‌ಕ್ಯಾನ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

Sri U. M. MADAPPA.—Please say whether the import of artificial silk depends upon local production.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆರ್ಟಿಫಿಷಿಯಲ್ ಸಿಲ್ಕ್ ಇಂಪೋರ್ಟ್ ಮಾಡಿಕೊಳ್ಳುವುದು ಬಿಡುವುದು ನೇರವಾಗಿ ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಸಾಧ್ಯವಾದಮಟ್ಟಿಗೂ ಪ್ರಯತ್ನಮಾಡಿ ನಮ್ಮ ದೇಶಕ್ಕೆ ಧಕ್ಕೆ ಬಾರದಂತೆ ಸರ್ಕಾರದ ನೀತಿಯನ್ನು ಹಾಕಬೇಕೆಂದು ಪದೇ ಪದೇ ಕೇಂದ್ರ ಸರ್ಕಾರದವರಿಗೆ ಒತ್ತಾಯ ಪಡಿಸುತ್ತಾ ಇದ್ದೇವೆ. The State Government has always something to do with the Central Government and they will do their best, they will do their part with the best of intentions. ಇದಕ್ಕೇ ಒಬ್ಬ ಸ್ಪೆಷಲ್ ಆಫೀಷರನ್ನು ನೇಮಕ ಮಾಡಬೇಕು, ಅವರು ಈ ಕೆಲಸ ಕಾರ್ಯಗಳನ್ನೆಲ್ಲಾ ನೋಡಿಕೊಳ್ಳುತ್ತಾರೆ ಎಂಬ ಅಂಶವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರು. ಈ ಮಾನ್ಯ ಸಭೆಗೆ ಒಂದು ಅಂಶವನ್ನು ತಿಳಿಸಬೇಕೆಂದು ಆಶಿಸುತ್ತೇನೆ. ಈಗ ಒಬ್ಬ ಸ್ಪೆಷಲ್ ಆಫೀಸರು ನೇಮಕ ಆಗಬೇಕೆಂದರೆ, ಅವರಿಗೆ ಬೇಕಾದ ಸಿಬ್ಬಂದಿ ಆಗಬೇಕು, ಪ್ಲ್ಯಾನ್ ಆಗಬೇಕು. ಇದಕ್ಕೆಲ್ಲಾ ಖರ್ಚು ಒಂದಕ್ಕೆ ನಾಲ್ಕರಷ್ಟು ಆಗುತ್ತದೆ. ಇದಕ್ಕೆಲ್ಲಾ ಹಣವನ್ನು ಒದಗಿಸಿ ಮಂಜೂರಾತಿ ಕೊಡಬೇಕೆಂದು ಇಂಡಿಯಾ ಸರ್ಕಾರದವರನ್ನು ಕೇಳಿದ್ದೇವೆ. ತಕ್ಷಣದಲ್ಲೇ ಆಗುತ್ತದೆ ಎಂಬ ನಂಬಿಕೆ ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಈ fruit canning industryಗೆ ಮೈಸೂರು suitable place ಅಲ್ಲ ಎಂಬುದಾಗಿ technical opinion ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಂಗಳೂರಿನಲ್ಲಿ ಎಷ್ಟು ಸೌಕರ್ಯವಿದೆಯೋ, ಮೈಸೂರಿನಲ್ಲೂ ಅಷ್ಟೇ ಸೌಕರ್ಯ ಇದೆ. ಬಾಗೇಶಪುರದಲ್ಲಿರತಕ್ಕ ಮಣ್ಣನ್ನು ಉಪಯೋಗಿಸಿಕೊಂಡು ಅಲ್ಲ ಒಂದು ಪಿಂಗಾಣಿ ಕೈಗಾರಿಕೆಯನ್ನು ಹಾಕಬೇಕೆಂದು ಹೇಳಿದರು. ಅಲ್ಲಿ ಸ್ವಲ್ಪ ತೊಂದರೆ ಇದೆ. ಅಲ್ಲಿ ಸಿಕ್ಕತಕ್ಕ ಬಳಪದ ಕಲ್ಲಿನಿಂದ ಸಣ್ಣಪುಟ್ಟ ಪದಾರ್ಥಗಳನ್ನು ಮಾಡುವ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡಿದೆ. ಅದಕ್ಕೆ ಬೇಕಾಗತಕ್ಕ ವಿದ್ಯುಚ್ಛಕ್ತಿ ಅಲ್ಲಿಗೆ ಹೋದ ಕೂಡಲೇ ಆ ವ್ಯವಸ್ಥೆ ಮಾಡುತ್ತೇವೆ.

ಮಂಡ್ಯದ ಸಕ್ಕರೆ ಕಾರ್ಖಾನೆಯ ವಿಷಯವಾಗಿ ಮಾತನಾಡುತ್ತಾ ಕಬ್ಬನ್ನು ಹಿಂಡತಕ್ಕ ಯಂತ್ರೋಪಕರಣದ ಶಕ್ತಿಯನ್ನು (capacity) ಹೆಚ್ಚು ಮಾಡಬೇಕೆಂದು ಹೇಳಿದರು. ಈಗಾಗಲೇ ಪಾಂಡವಪುರದಲ್ಲಿ ಹೊಸ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ವ್ಯವಸ್ಥೆ ಆಗಿದೆ. ನೀರಿನ ಅನುಕೂಲ ಜಾಸ್ತಿಯಾಗಿ ಹೆಚ್ಚಿಗೆ ಕಬ್ಬಿನ ಬೆಳೆ ಆದಾಗ, ಅದನ್ನು ಮುಂದೆ ಯೋಚನೆ ಮಾಡಬಹುದು

ಶ್ರೀ ಹನುಮಯ್ಯನವರು ಚರ್ಮ ಹದ ಮಾಡುವ ಕೈಗಾರಿಕೆಯ ವಿಷಯದಲ್ಲಿ ಪ್ರಸ್ತಾಪ ಮಾಡಿದರು. ಈ ಬಗ್ಗೆ ಕೇಂದ್ರ ಸರ್ಕಾರದವರು ಬಹಳ ಆಸಕ್ತಿಯುಳ್ಳವರಾಗಿದ್ದಾರೆ. ಈ ಕೈಗಾರಿಕೆ ಸಹಕಾರ ತತ್ವದ ಮೇಲೆ ನಡೆಯಬೇಕು, ಆ ರೀತಿ ನಡೆಯುವುದಾದರೆ ಕೇಂದ್ರ ಸರ್ಕಾರದವರು ಶೇಕಡ 75ರಷ್ಟು ಬಂಡವಾಳದ ಹಣವನ್ನು ಕೊಡುತ್ತಾರೆ. ವೈಯಕ್ತಿಕವಾಗಿ ಯಾರಿಗೂ ಕೊಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು ಮತ್ತು ಅಭಿವೃದ್ಧಿ ಪಡಿಸಬೇಕು ಎಂದು ಹೇಳಿ ಆಸಕ್ತಿ ಇರುವವರೆಲ್ಲರೂ ಕೂಡ ಆಯಾ ಸ್ಥಳದಲ್ಲಿ ಕೂಡಲೇ ಕೋ-ಆಪರೇಟಿವ್ ಸೊಸೈಟಿ ಮಾಡಿಕೊಂಡು ತನ್ಮೂಲಕ ಸರ್ಕಾರದ ಸಹಾಯವನ್ನು ಅಪೇಕ್ಷೆ ಮಾಡಿದರೆ ಜಾಗ್ರತೆಯಾಗಿ ಸಹಾಯವನ್ನು ಒದಗಿಸಲಿಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಲಿಕ್ಕೆ ಆಶಿಸುತ್ತೇನೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಗ್ಗೆ ಬೇಕಾದಷ್ಟು ಹಣ ಒದಗಿಸಿದ್ದಾರೆ. ಯಾವ ತೊಂದರೆಯೂ ಆಗುವುದಿಲ್ಲ.

ಶ್ರೀ ಮೂಡಲಗಿರಿಗೌಡರು ಸ್ಯಾಂಡಲ್‌ವುಡ್ ಫ್ಯಾಕ್ಟರಿಯ ವಿಷಯದಲ್ಲಿ ಶಿವಮೊಗ್ಗದಲ್ಲಿ ಒಂದು, ಮೈಸೂರಿನಲ್ಲಿ ಇನ್ನೊಂದು ಇರುವುದೇಕೆ ಎಂದು ಕೇಳಿದರು. ಇವೆರಡನ್ನೂ ಒಂದು ಮಾಡುವುದು ಸೂಕ್ತವಲ್ಲವೇ ಎಂದು ಅವರು ಸೂಚಿಸಿದರು. ಇವೆರಡೂ ಬಹಳ ಕಾಲದಿಂದಲೂ ಇವೆ. ಶಿವಮೊಗ್ಗದಲ್ಲಿ ಹೇರಳವಾಗಿ ಮರವಿರುವುದರಿಂದ ಅಲ್ಲೊಂದು ಫ್ಯಾಕ್ಟರಿಯನ್ನು ಸ್ಥಾಪನೆಮಾಡಿದೆ. ಅಲ್ಲಿ ಎಣ್ಣೆಯನ್ನು ಒಂದು ಮಟ್ಟದಲ್ಲಿ ತಯಾರು ಮಾಡುತ್ತಾರೆ. ಈ crude oilನ್ನು ಶುದ್ಧಗೊಳಿಸುವುದು ಮೈಸೂರಿನಲ್ಲಿ. ಈ ಕಾರ್ಯಕ್ಕಾಗಿ ಶಿವಮೊಗ್ಗದಿಂದ ಮೈಸೂರಿಗೇ ಮರವನ್ನು ಸಾಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಹಾಗಿಲ್ಲದೆ, ಎರಡು ಕಡೆಯೂ ಕಾರ್ಖಾನೆಯನ್ನು ಹಾಕಬೇಕೆಂದರೆ ಅದೂ ಬಹಳ ಖರ್ಚಿಗೇ ಕಾರಣವಾಗುತ್ತದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಈ ಕಾರಣದಿಂದ ಈಗಿರುವ ಏರ್ಪಾಡು ಸಮರ್ಪಕವಾಗಿದೆಯೆಂದು ನಾನು ಹೇಳುತ್ತೇನೆ.

ಸಿಮೆಂಟ್ ಕಾರ್ಖಾನೆಯ ವಿಚಾರದಲ್ಲಿ ಒಂದು ಕಮಿಟಿಯನ್ನು ಮಾಡಿದೆ. ಚಿಕ್ಕನಾಯಕನಹಳ್ಳಿಯಲ್ಲಿಯೋ ಅಥವಾ ಹೊಸದುರ್ಗದಲ್ಲಿಯೋ ಏರ್ಪಡಿಸಬೇಕೆಂದು ಕಮಿಟಿಯವರು ಯೋಚನೆ ಮಾಡುತ್ತಿದ್ದಾರೆ. ಕಮಿಟಿಯವರು ಒಂದು ತೀರ್ಮಾನಕ್ಕೆ ಬಂದಂತಿದೆ. ಇಂದೋ ನಾಳೆಯೋ ರಿಪೋರ್ಟ್ ಬರುತ್ತದೆ. ಆ ವರದಿ ಬಂದ ಕೂಡಲೆ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ದೇಶದಲ್ಲಿ ಸಿಮೆಂಟಿನ ಅಭಾವ ಹೆಚ್ಚಾಗಿದೆ. ಒಂದಲ್ಲದಿದ್ದರೆ ಎರಡು ಮಾಡಿದರೂ, ಸಿಮೆಂಟಿನ ಅವಶ್ಯಕತೆ ಹೆಚ್ಚಾಗಿರುವುದರಿಂದ, ಅವಕಾಶವಿದೆ. ಸದ್ಯಕ್ಕೆ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಕಾರ್ಯ ಕ್ರಮವನ್ನು ಕೈಕೊಳ್ಳುತ್ತೇವೆ.

ಶ್ರೀಮಾನ್ ಮಾಧವಾಚಾರ್‌ಅವರು ಮ್ಯಾನೇಜ್‌ಮೆಂಟ್ ಜೊತೆಗೆ ಲೇಬರ್ ಪಾರ್ಟಿಸಿಪೇಷನ್ ಇರಬೇಕೆಂಬ ವಿಷಯವನ್ನು ಬಹಳ ಸ್ವಾರಸ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಲೇಬರ್ ಪಾರ್ಟಿಸಿಪೇಷನ್ ತತ್ವವನ್ನು ಮುಖ್ಯ ಮಂತ್ರಿಗಳೇ ತಮ್ಮ ಬಡ್ಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಸಾಧ್ಯವಾದಷ್ಟು ಬೇಗ ಬಹುಶಃ ಒಂದೆರಡು ತಿಂಗಳಲ್ಲಿ ಒಂದು ಕಾನ್ಫರೆನ್ಸ್ ಕರೆದು ಯಾವ ರೀತಿ ಕಾರ್ಯರೂಪಕ್ಕೆ ತರಬೇಕೆಂಬ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಅವರು ತೃಪ್ತರಾಗಬಹುದು. ಆದರೆ ಇದರ ವಿಚಾರದಲ್ಲಿ ಜಾಗರೂಕತೆಯಿಂದ ಹೋಗಬೇಕು. ಇಂಗ್ಲೆಂಡಿನಲ್ಲಿ, ಅಮೆರಿಕಾದಲ್ಲಿ, ರಷ್ಯಾದಲ್ಲಿರತಕ್ಕ ಪರಿಸ್ಥಿತಿ ಇಂಡಿಯಾದಲ್ಲಿಲ್ಲ. ಆದ್ದರಿಂದ ಅಲ್ಲಿನ ಪ್ಲಾನ್‌ಗಳನ್ನೂ, ಯೋಜನೆಗಳನ್ನೂ ಮೈಸೂರಿಗೆ ಅನ್ವಯಿಸಬೇಕಾದರೆ ಅವುಗಳನ್ನು ಇಲ್ಲಿನ ಪರಿಸ್ಥಿತಿಗೆ ತಕ್ಕಂತೆ ಅಳವಡಿಸಿಕೊಳ್ಳಬೇಕು. ಇಲ್ಲಿನ ವಾತಾವರಣಕ್ಕೆ ಅನುಕೂಲವಾಗಿರಬೇಕು. ಇಂಥ ಕಾಲದಲ್ಲಿ ಶ್ರೀಮಾನ್ ಮಾಧವಾಚಾರ್‌ಅವರು ಉತ್ತಮ ಸಲಹೆಗಳನ್ನು ಕೊಟ್ಟು ಸರಿಯಾದ ರೀತಿಯ ಏರ್ಪಾಡುಗಳನ್ನು ಮಾಡುವುದಕ್ಕೆ ಸಹಾಯ ಮಾಡುತ್ತಾರೆಂದು ನಂಬಿದ್ದೇನೆ.

ಕನಿಷ್ಠ ವೇತನದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕನಿಷ್ಠ ವೇತನವನ್ನು ಪ್ರಸ್ತಾಪ ಮಾಡುವಾಗ ಬರೀ ಕಾರ್ಖಾನೆಯ ಕೆಲಸಗಾರರ ದೃಷ್ಟಿಯಿಂದ ಸಾಲದು. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವ ನೌಕರರ ದೃಷ್ಟಿಯಿಂದ ಸಮಗ್ರವಾದ ರೀತಿಯಲ್ಲಿ ಆಲೋಚನೆ ಮಾಡಬೇಕಾಗಿರುತ್ತದೆ. ಆದರೆ, ಮನೆಗಳ ವಿಚಾರ ಹೇಳುತ್ತಾ, ಸರ್ಕಾರದವರು ಮಾಡದೆ ಇದ್ದರೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಕಾನೂನೆಂಬುದು ಎಲ್ಲರನ್ನೂ ಬಂಧಿಸುತ್ತದೆ. ನಾವು ಒಂದು ನೀತಿಯನ್ನು ಅನುಸರಿಸಿ ಕೆಲಸ ಮಾಡುತ್ತಿದ್ದೇವೆ. ಸರ್ಕಾರದವರು ಏನೇನು ಕೆಲಸ ಮಾಡಬೇಕೆಂಬ ವಿಷಯದಲ್ಲಿ ಎಲ್ಲರ ಹಿತದೃಷ್ಟಿಯೂ ಸೇರಿದೆ. ಆದ್ದರಿಂದ ಸರ್ಕಾರದವರಿಗೆ ಜನರ ಸಹಕಾರವೂ ಅವಶ್ಯಕ. ಆದ್ದರಿಂದ ಈ ವಿಷಯದಲ್ಲಿ ಮಾನ್ಯ ಸದಸ್ಯರೂ ತಮ್ಮ ಸಹಕಾರವನ್ನು ನೀಡಲು ಸಿದ್ಧವಾಗಿರುವರೆಂದು ನಂಬಿದ್ದೇನೆ.

ಕುಣಿಗಲ್ ಸಕ್ಕರೆಯ ಕಾರ್ಖಾನೆಯ ವಿಷಯ ಪ್ರಸ್ತಾಪಕ್ಕೆ ಬಂತು. ಕುಣಿಗಲ್‌ನಲ್ಲಿ ಮಾಡಬೇಕಾದರೆ ಪವರ್ ಅನುಕೂಲಬೇಕು, ಅದು Rail head ಆಗಿರಬೇಕು. ಇವೆರಡರ ಜೊತೆಗೆ ಮುಖ್ಯವಾಗಿ ಸಾಕಷ್ಟು ಜಮೀನಿದ್ದು 12 ತಿಂಗಳೂ ನೀರಿನ ಒದಗಾಣಿಕೆಯಿರಬೇಕು. ಸುಮಾರು 15,000 ಎಕರೆಗಳಾದರೂ ಇರಬೇಕಾಗುತ್ತದೆ. ಇಂಥ ಅನುಕೂಲಗಳು ಕುಣಿಗಲ್‌ನಲ್ಲಿ ದೊರಕಿದ ಪಕ್ಷದಲ್ಲಿ ಖಂಡಿತವಾಗಿ ಅಲ್ಲೊಂದು ಸಕ್ಕರೆಯ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಸಾಧ್ಯ. ಇದನ್ನೆಲ್ಲಾ ಪರಿಶೀಲನೆ ಮಾಡಲಾಗಿ ಕುಣಿಗಲ್‌ನಲ್ಲಿ ಒಂದು economic unit ಆದ 800—900 ಟನ್ ಅರೆಯುವ ಕಾರ್ಖಾನೆಯನ್ನು ಹಾಕುವುದಕ್ಕೆ ಅನುಕೂಲತೆಗಳು ಇಲ್ಲವೆಂದು ತೀರ್ಮಾನಿಸಲಾಯಿತು. ಒಂದು ವೇಳೆ Irrigation Project ಗಳು ಉತ್ತಮಗೊಂಡು ಮುಂದೆ ತಕ್ಕ ಅನುಕೂಲತೆಗಳು ದೊರೆತರೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದನ್ನು ಯೋಚನೆ ಮಾಡೋಣ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೈ ಪವರ್ ಡೈರೆಕ್ಟ್ರೇಟ್ ಮಾಡುತ್ತೇವೆಂದು ಹೇಳಿದರು. ನಾನದನ್ನು ಪ್ರಸ್ತಾಪ ಮಾಡಿದೆ. ಅದರ ವಿಚಾರ ಏನೂ ಹೇಳಲಿಲ್ಲವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಮೇಲೆ, ಒಂದು ವಿಷಯವನ್ನು ಎಲ್ಲರೂ ನನ್ನ ಗಮನಕ್ಕೆ ತಂದರು ನಮ್ಮ ಕೈಗಾರಿಕೆಗಳಲ್ಲಿ technical men ಇಲ್ಲವೆಂದು ಹೇಳಿದರು. ಇದು ನಿಜ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆಯಬೇಕಾದರೆ ಸರಿಯಾದ ಜನರನ್ನು ತರಪೇತು ಮಾಡುವುದು ಅತ್ಯಾವಶ್ಯಕ. ಈ ಬಗ್ಗೆ ಸರ್ಕಾರದವರು ಯೋಚನೆಮಾಡಿ ನಮ್ಮಲ್ಲಿ ಸರಿಯಾದ Industrial Advisers ಇಲ್ಲದಿದ್ದರೆ ಯಾವ ಕೈಗಾರಿಕೆಯನ್ನು ಸ್ಥಾಪಿಸುವುದೂ ಕಷ್ಟವಾಗುತ್ತದೆ, ಹೊಸ ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕಾದರೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹೇಗೆ ತಿಳಿದುಕೊಳ್ಳಬೇಕು, ಸಲಕರಣೆಗಳನ್ನು ಎಲ್ಲೆಲ್ಲಿಂದ ತರಿಸಬೇಕು ಎಂಬ ಬಗ್ಗೆ ಸಲಹೆ ಕೊಡುವ Industrial Adviser ಒಬ್ಬರು ಇಲ್ಲದಿದ್ದರೆ ನಾವು ಕೈಗಾರಿಕೆಗಳನ್ನು ಸ್ಥಾಪಿಸುವುದು ಕಷ್ಟವೆಂಬುದನ್ನು ಮನಗಂಡಿದ್ದೇವೆ. ಜೊತೆಗೆ trained men ಇರಬೇಕು. ಹಿಂದೆ ಈ ವಿಷಯಕ್ಕೆ ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ಆದ್ದರಿಂದ ಕೈಗಾರಿಕೆಯ ಮೂಲಕ ನಮ್ಮ ದೇಶವನ್ನು ಅಭಿವೃದ್ಧಿ ಮಾಡಬೇಕಾದರೆ ಇದಕ್ಕಾಗಿ ಎಷ್ಟು ಹಣವನ್ನು ಖರ್ಚುಮಾಡಿದರೂ ಸಾಲದು. Technical know-how ಗೆ ಎಷ್ಟೋವೇಳೆ ಲಕ್ಷಾಂತರ ರೂಪಾಯಿಗಳನ್ನು ಪರದೇಶಗಳಿಗೆ ಕೊಡಬೇಕಾದ ಪರಿಸ್ಥಿತಿಯಿದೆ. ಇದನ್ನು ಮನಗಂಡು ಜಪಾನ್, ಇಂಗ್ಲೆಂಡ್, ಅಮೆರಿಕಾ ಮುಂತಾದ ದೇಶಗಳಿಗೆ ಹೋಗಿ ಅಲ್ಲಿನ ಕಾರ್ಖಾನೆಗಳಲ್ಲಿ ನಮ್ಮ ಯುವಕರು ತರಪೇತು ಹೊಂದಿ ಬರುವ ವಿಷಯಕ್ಕೆ ನಮ್ಮ ಸರ್ಕಾರದವರು ಹೆಚ್ಚು ಗಮನ ಕೊಡುವವರಾಗಿದ್ದಾರೆಂದು ಮಾನ್ಯ ಸದಸ್ಯರಿಗೆ ನಾನು ತಿಳಿಸಲಪೇಕ್ಷಿಸುತ್ತೇನೆ.

ಕೆಲವು ಕಾರ್ಖಾನೆಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆಯೆಂದು ಮಾನ್ಯ ಸದಸ್ಯರು ಹೇಳಿದರು. ಅಂಥವು ಒಂದೂ ಇಲ್ಲ. ಒಂದೆರಡು ಕಾರ್ಖಾನೆಗಳನ್ನು ಬಿಟ್ಟರೆ ಉಳಿದ ಎಲ್ಲಾ ಕಾರ್ಖಾನೆಗಳೂ ಲಾಭದಾಯಕವಾಗಿವೆ. ಪೋರ್ಸಿಲೇನ್ ಕಾರ್ಖಾನೆಯನ್ನು ಶುರು ಮಾಡಿದಲಾಗಾಯಿತಿನಿಂದಲೂ ಹೆಚ್ಚು ಲಾಭವನ್ನು ಕೊಡುತ್ತಿದೆಯೆಂದು ಹೇಳಬಹುದು. ಸ್ಪನ್ ಸಿಲ್ಕ್ ಕಾರ್ಖಾನೆ, ಎಲೆಕ್ಟ್ರಿಕ್ ಕಾರ್ಖಾನೆ ಮುಂತಾ

ದುಪ್ಪ ವಿಶೇಷ ಲಾಭ ಕೊಡುವಂತಹವು. ಖಾದಿ ಕೈಗಾರಿಕೆಗೆ ಈಗ ಹೆಚ್ಚಿನ ಉತ್ತೇಜನ ಕೊಡುತ್ತಿದ್ದೇವೆ. ಅಂಕಿ ಅಂಶಗಳನ್ನು ಕೊಟ್ಟು ತೋರಿಸಬಲ್ಲೆ. ಖಾದಿ ಎಷ್ಟು ಉತ್ಪನ್ನವಾಗುತ್ತಿದೆಯೆಂದು ಹೇಳಿದರೆ ಬಹುಶಃ ತಮಗೆ ಈ ಅಂಶ ಮನದಟ್ಟಾಗಬಹುದು. ಹಿಂದೆ ಒಂದು ಲಕ್ಷದ ಇಪ್ಪತ್ತು ಸಾವಿರ ಗಜ ತಯಾರಾಗುತ್ತಿದ್ದುದು ಈಗ 1954-55 ರಲ್ಲಿ ಮೂರು ಲಕ್ಷದ 68 ಸಾವಿರದ 900 ಗಜದಷ್ಟು ತಯಾರಾಗಿದೆ. ಬಡ್ಜೆಟ್ಟಿನಲ್ಲಿಯೂ ಈ ಬಗ್ಗೆ ವಿಶೇಷವಾಗಿ ಹಣವನ್ನೊದಗಿಸಿದ್ದೇವೆ. ಅಂಬರ ಚರಕದ ಬಗ್ಗೆ Experimentation ನ್ನನ್ನು ನಡೆಸಲು ಅನೇಕಲ್ಲಿನಲ್ಲಿ ವ್ಯವಸ್ಥೆ ಮಾಡಿದ್ದೇವೆ. ಅದರಿಂದ ಪ್ರಯೋಜನವಾಗುತ್ತದೆಂದು ಗೊತ್ತಾದರೆ, ದೇಶಾದ್ಯಂತ introduce ಮಾಡಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಈಗಾಗಲೆ ಕೃಷ್ಣರಾಜಪುರದಲ್ಲಿ ಒಂದು ಕಾರ್ಖಾನೆಯನ್ನು ಏರ್ಪಾಡು ಮಾಡಿ ಸಾವಿರಾರು ಅಂಬರ್ ಚರಕಗಳನ್ನು ತಯಾರು ಮಾಡುವುದಕ್ಕೆ ಇಂಡಿಯಾ ಸರ್ಕಾರದವರು ಏರ್ಪಾಡು ಮಾಡಿಕೊಂಡಿದ್ದಾರೆ. ಭಾರತ ಸರ್ಕಾರದವರು 200 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಸಿದ್ಧವಾಗಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಆಮೇಲೆ ಕೈಮಗ್ಗದ ಕೈಗಾರಿಕೆಗೆ ಈಗ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿದೆ. ಆದರೂ, ಮಾಡತಕ್ಕ ಕೆಲಸವೆಲ್ಲವನ್ನೂ ಮಾಡಿದಂತಾಗಿಲ್ಲ, ಇನ್ನೂ ಮಾಡಬೇಕಾದ್ದಿದೆ. ಸಾಕಷ್ಟು ಕೆಲಸ ಮಾಡಿದ ಪಕ್ಷದಲ್ಲಿ ಅತ್ಯಲ್ಪ ಕಾಲದಲ್ಲಿ ಈ ಸಣ್ಣ ಕೈಗಾರಿಕೆಯನ್ನು ಉತ್ತಮಪಡಿಸುವುದಕ್ಕೆ ಅವಕಾಶವಾಗುತ್ತದೆ.

ರೂರಲ್ ಇಂಡಸ್ಟ್ರೀಸ್ ವಿಷಯದಲ್ಲಿ ಸಾಲ ಕೊಡುವುದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಹಳ ಹೆಚ್ಚು ಹಣವನ್ನು ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದಾರೆಂದು ಹೇಳಿದರು. ನಮ್ಮಲ್ಲಿ trained men ಇಲ್ಲದಿರುವಾಗ ಪ್ರಾರಂಭದಲ್ಲಿ ಕಲಿತು ಕೊಂಡು ಪ್ರಾರಂಭ ಮಾಡಬೇಕಾಗುತ್ತದೆ. . . .

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾವು ಭಾಷಣ ಮಾಡುವಾಗ ಕಾಲಾವಕಾಶ ಇಲ್ಲವೆಂದು ಆಕ್ಷೇಪಿಸಿದಿರಿ. ಅವರು ಮಾತ್ರ ಮೂರು ಮೂರು ಘಂಟೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೀರಲ್ಲಾ! ಇದು ಸರಿಯೇ?

Sri H. M. CHANNABASAPPA.—These are all points raised by the Hon'ble Members and the Government have a duty to answer them.

ಶ್ರೀ ಎಸ್. ಗೋಪಾಲಗೌಡ.—ಭಾಷಣ ಪ್ರಾರಂಭ ಮಾಡಿ ಈಗಾಗಲೇ ಒಂದು ಗಂಟೆಯಾಯಿತು.

Sri H. M. CHANNABASAPPA.—I am sorry. There is the Chair to do that. The Government has a duty cast on it to reply to the points raised by the Hon'ble Members. One Hon'ble Member definitely raised the point that we are putting non-technical men in all industries. That is a moot point. ಆದುದರಿಂದ Technical personnel ಇಲ್ಲದೇ ಇರುವುದರಿಂದ Technical personnelನ್ನು ಒದಗಿಸುವವರೆಗೆ ನಾವು non-technical personnelನ್ನು ಹಾಕಿ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ technical personnelನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಇಷ್ಟು ಹೇಳಿ, ಈ ಡಿಮ್ಯಾಂಡಿಗೆ ತಮ್ಮ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is:

"That a sum not exceeding Rs. 8,26,80,300 be granted to the Government to defray the charges which will come in course of payment during the year ending 31st day of March 1957, in respect of 'Industries and Supplies'."

The motion was adopted.

DEMAND No. 41—INDUSTRIAL DEVELOPMENT.

72. Capital Outlay on Industrial Development.

Mr. SPEAKER.—The question is:

"That a sum not exceeding Rs. 2,16,73,000 be granted to the Government to defray the charges which will come in course of payment during the year ending 31st day of March 1957, in respect of 'Capital Outlay on Industrial Development'."

The motion was adopted.

Mr. SPEAKER.—Now the House will rise for lunch and meet at 3-50 P.M.

The House adjourned for Lunch at Twenty Minutes past Three of the Clock and reassembled at Fifty Minutes past Three of the Clock.

[Mr. Speaker in the Chair.]

Mr. SPEAKER.—Before taking up the discussion on demands, I want to announce that there will be a morning session tomorrow from 8-30 A.M. to 12-30 P.M.

DEMAND No. 38—WORKING EXPENSES—ELECTRICITY SCHEMES.

XLI. RECEIPTS FROM ELECTRICITY SCHEMES—WORKING EXPENSES.

Mr. SPEAKER.—Motion moved :

"That a sum not exceeding Rs. 1,84,45,000 be granted to the Government to defray the charges which will come in course of payment during the year ending 31st day of March 1957, in respect of 'Receipts from Electricity Schemes—Working Expenses'."

Discussion may also take place on Demand No. 42.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ ತಾಲ್ಲೂಕು—ಅನುಸೂಚಿತ ಜಾತಿಗಳು).—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬಹಳ ಜನಗಳು ಪಂಪು ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ. ಆರು ವರ್ಷಗಳಿಂದಲೂ ಪಂಪು ಸೆಟ್ಟುಗಳನ್ನು ಇನ್ನೂ ಹೆಚ್ಚಾಗಿ ಹಾಕಿಕೊಳ್ಳಲು ಸಂಬಂಧಪಟ್ಟ ಇಲಾಖೆಗೆ ಅರ್ಜಿಕೊಟ್ಟು ಕೊಟ್ಟು ಜನರು ಓಡಾಡಿ ಅವರು ವೆಚ್ಚ ಮಾಡಿದ ಹಣ ಪಂಪುಸೆಟ್ಟಿಗಿಂತಲೂ ಹೆಚ್ಚಾಗಿದೆ. ಇನ್ನೂ ವಿದ್ಯುಚ್ಛಕ್ತಿಯನ್ನು ಕೊಡಲಿಲ್ಲ. ಎರಡು ವರ್ಷಗಳಿಂದ ಹೀಗೆಯೇ ಆಗಿದೆ. ಬೆಳೆ ಒಣಗಿ ಹೋಗುತ್ತಿದೆ. ಬಾವಿಯಲ್ಲಿ ನೀರು ಇದ್ದರೂ, ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಪ್ಲೈ ಮಾಡದೆ ಜನಗಳು ಬಹಳ ತೊಂದರೆ ಪಡುತ್ತಿದ್ದಾರೆ. ಇಲಾಖೆಯವರು ಈ ತೊಂದರೆಗಳನ್ನು ನಿವಾರಿಸುವುದಕ್ಕೋಸ್ಕರ ಪ್ರಯತ್ನ ಮಾಡಬೇಕು. ಆರ್ಡರ್ ಕೊಟ್ಟಿದ್ದೇವೆ, ತಾಮ್ರದ ತಂತಿ ಬಂದಿಲ್ಲ, ಕಂಬಿಗಳು ಬರಬೇಕು ಎಂದು ಹೇಳುತ್ತಿದ್ದಾರೆ. ಯಾವಯಾವ ಕಂಪೆನಿಗಳಿ ಆರ್ಡರ್ ಕೊಟ್ಟಿದ್ದಾರೆ, ಎಷ್ಟು ತಿಂಗಳುಗಳಲ್ಲಿ ಬರಬಹುದು ಎಂಬುದನ್ನು ಲೆಖ್ಖ ಮಾಡಿದ್ದಾರೆಯೇ ಮತ್ತು ಆ ರೀತಿ ಕಂಬಗಳನ್ನು ತರಿಸಿಕೊಂಡಿದ್ದಾರೆಯೇ ಗೊತ್ತಿಲ್ಲ. ಹಾಗೆ ತಂದಿದ್ದರೆ ಮೆಚ್ಚಿಗೆಯಾಗುವ ಹಾಗೆ ಮಂತ್ರಿಗಳು ಹೇಳುತ್ತಿದ್ದರು. ನಮಗೆ ಆಗಬೇಕಾದುದು ಕೆಲಸ. ಆರು ವರ್ಷಗಳಿಂದ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಇದನ್ನು ಕೇಳುತ್ತಲೇ ಇದ್ದಾರೆ. ಅದಕ್ಕೋಸ್ಕರ ಮಂತ್ರಿಗಳು ವೈಯಕ್ತಿಕವಾಗಿ ಆಸಕ್ತಿವಹಿಸಿ ಜಾಗ್ರತೆ ತಾಮ್ರದ ತಂತಿಗಳನ್ನೂ, ಕಂಬಗಳನ್ನೂ, ಮೆಷಿನರಿಗಳನ್ನೂ ತರಿಸಿ, ಎಲ್ಲೆಲ್ಲಿ ಹಾಕಬೇಕೋ ಅಲ್ಲಲ್ಲಿ ಉಪಯೋಗಿಸಿ ಪವರ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜಾಜಿ ನಗರದಲ್ಲಿ ಬೇಕಾದಷ್ಟು ಕಾರ್ಖಾನೆಗಳು ಸ್ಥಾಪಿಸಲ್ಪಡುತ್ತಿವೆ. ಅದಕ್ಕೋಸ್ಕರ ವಿದ್ಯುಚ್ಛಕ್ತಿ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಜೋಗ್‌ನಿಂದ ಬೆಂಗಳೂರಿಗೆ ಎರಡನೇ ಮೆಯಿನ್ ಲೈನನ್ನು ಎಳೆಯಬೇಕು. ಅದು war effort ಆಗಿ ಭಾವಿಸಿ ಸಾವಿರಾರು ಜನ ಕೂಲಿಗಾರರನ್ನು ನೇಮಿಸಿಕೊಂಡು ಮೂರು-ನಾಲ್ಕು ತಿಂಗಳಲ್ಲಿ ಆ ಕೆಲಸವನ್ನು ಮುಗಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಎಲೆಕ್ಟ್ರಿಕಲ್ ಇಲಾಖೆಗೆ ಸಂಬಂಧಪಟ್ಟಂತೆ ಮುಖ್ಯವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್ ಬಹಳ ಪಕ್ಷಪಾತ ಮಾಡುತ್ತಿದೆ. ಈಗ ಬಂದಿರತಕ್ಕ ಮಂತ್ರಿಗಳು ಬಹಳ ಚೆನ್ನಾಗಿ ಕೆಲಸ ಮಾಡಿದರೂ ಕೂಡ ನಮ್ಮ ಮೇಲೆ ಬಹಳ ಉದಾಸೀನವಾದಹಾಗೆ ಕಾಣುತ್ತದೆ. ಎಲೆಕ್ಟ್ರಿಸಿಟಿ ವಿಚಾರದಲ್ಲಿ ನಾನು ಒಂದು ಪ್ರಶ್ನೆ ಕೊಟ್ಟಿದ್ದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 300 ಗ್ರಾಮಗಳ ಪೈಕಿ 11 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಿದ್ದಾರೆ. ಸುಮಾರು 20-25 ಗ್ರಾಮಗಳಿಗೆ ಹಾಗೆಯೇ ಸರ್ವೆ ಮಾಡಿಸಿ ಇಲಾಖೆಯಲ್ಲೆಲ್ಲಾ statement ಮಾಡಿಸಿದ್ದೇ. ಆದರೂ ಕೂಡ, ಸರ್ಕಾರದವರು ಹೆಚ್ಚು ನಿಗಾ ತೆಗೆದುಕೊಳ್ಳಲಿಲ್ಲ. ಬಾಕಿ applications ಏನಾಯಿತು? ಆರು ತಿಂಗಳುಗಳ ಹಿಂದೆ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಸರ್ವೆ ಮಾಡಿದ applications ಇವತ್ತು ಸರ್ಕಾರಕ್ಕೆ ಬಾರದೇ ಇರುವುದಕ್ಕೆ ಕಾರಣವೇನು? ಕೆಲವು ಗ್ರಾಮಗಳಲ್ಲಿ ಒಂದು ತಿಂಗಳು, ಮೂರು-ನಾಲ್ಕು ತಿಂಗಳುಗಳಲ್ಲೇ ಕೊಟ್ಟಿರುತ್ತಾರೆ. ಚನ್ನಗಿರಿ ತಾಲ್ಲೂಕಿನ ತಾವರೇಕೆರೆ ಗ್ರಾಮ ಮಲೆನಾಡು ಗ್ರಾಮ. ಅದನ್ನು ಸರ್ವೆ ಮಾಡಿಸಬೇಕು. ಸಾಮಾನ್ಯವಾಗಿ ಶಿವಮೊಗ್ಗಾ ಜಿಲ್ಲೆಯೊಳಗೆ [illegible] ಮಳೆಯಾಗುತ್ತದೋ ಅದೇ ರೀತಿ ಹೆಚ್ಚು ಮಳೆ ಚೆನ್ನಗಿರಿಯಲ್ಲಿ ಆಗುತ್ತದೆ. ಬಯಲುಸೀಮೆ ಶೇಕಡ $7\frac{1}{2}$ ಎಂದು ತೀರ್ಮಾನ ಮಾಡಿದ್ದಾರೆ. ಮಳೆ ಚೆನ್ನಾಗಿ ಬಂದರೂ ಕೂಡ ಬಯಲುಸೀಮೆಯೆಂದು ಸರಕಾರದವರು ತಿಳಿದುಕೊಂಡಿದ್ದಾರೆ. ಮುಖ್ಯ ಮಂತ್ರಿಗಳು ಅದನ್ನು ಪುನರ್ವಿಮರ್ಶೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಧಿಕಾರ ವರ್ಗದವರೂಕೂಡ ಅದನ್ನು ಒಪ್ಪಿಕೊಂಡಿದ್ದಾರೆ. ಅನೇಕ ಗ್ರಾಮಗಳಲ್ಲಿ ಶೇಕಡ 5 ರಿಂದ ಶೇಕಡ $7\frac{1}{2}$ ವರೆಗೆ ಅಂದಾಜು ಮಾಡಿದ್ದಾರೆ. ಕಡಿಮೆ ಮಾಡಿ ಎಂದು ಹೇಳುವುದಿಲ್ಲ. ನಮ್ಮ ತಾಲ್ಲೂಕಿನ ಸುಮಾರು 300 ಗ್ರಾಮಗಳ ಪೈಕಿ 30 ಗ್ರಾಮಗಳಲ್ಲಿ ಸುಮಾರು ಎರಡು-ಮೂರು ಸಾವಿರ ಜನರಿದ್ದಾರೆ. ಐದು ಮೈಲಿ ಸುತ್ತಳತೆಗಳಿರುವ ಗ್ರಾಮಗಳನ್ನೂ ಕೂಡ ಹೇಳಿದ್ದೇನೆ. ಕಡೂರು ತಾಲ್ಲೂಕಿನ ಆಸಂದಿ, ಹಿರಿಯೂರು, ಕುಂಕನಾಡು, ಮರವಂಜಿ, ಸಿಂಗಟಿಕೆರೆ, ದೇವನೂರು, ನಿಡಘಟ್ಟ, ಕೂಲಿಕೆರೆ ಮತ್ತು ಪಿಲ್ಲೇನಹಳ್ಳಿ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದನ್ನು ಜಾಗ್ರತೆ ಮಂಜೂರು ಮಾಡಬೇಕು. ಆದರೆ ಈಗ ಎರಡು-ಮೂರು ಗ್ರಾಮಗಳಿಗೆ ಮಾತ್ರ ಸರ್ವೆ ಮಾಡಿದ್ದಾರೆ. ಇದು

4 P.M.

ಹೇಗಾಗುತ್ತಿದೆಯೋ ಗೊತ್ತಿಲ್ಲ. ಸರ್ಕಾರದವರೇ ಏನಾದರೂ ಈ ರೀತಿ ವಾಪಸು ಕಳುಹಿಸಿ ಎಂದು ಹೇಳಿದರೋ ಅಥವಾ ಅವರೇ ಉದಾಸೀನಮಾಡಿದರೋ ಗೊತ್ತಿಲ್ಲ. ಈಗಲಾದರೂ ನಮ್ಮ ತಾಲ್ಲೂಕಿನ ಗ್ರಾಮಗಳವರು ಕೇಳಿದರೆ, ಎರಡು ಮೈಲಿ, ಒಂದು ಮೈಲಿ, ಅರ್ಧ ಮೈಲಿ ದೂರದಲ್ಲಿರುವ ಹಳ್ಳಿಗಳಿಗೆ ಕೊಡಲು ಅಂದಾಜುಮಾಡಿ ಕಳುಹಿಸಿದರೆ, ಅದನ್ನು ವಾಪಸುಮಾಡಬಾರದು. ಒಂದು ಸಂದರ್ಭದಲ್ಲಿ ಮೂರುಸಾರಿ ವಾಪಸು ಕಳುಹಿಸಿದರು. ಅಲ್ಲಿರತಕ್ಕ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಹೀಗಾಗಲು ಅವಕಾಶ ಕೊಡಬಾರದು. ಆಗುವುದಿಲ್ಲವೆಂದು ಮೊದಲೇ ಹೇಳಬಹುದು. ಈ ಸಭೆಗೆ ನಾನು ಸದಸ್ಯನಾದ ಮೇಲೆ ನಾಲ್ಕು ವರ್ಷಗಳಲ್ಲಿ

ಮೂರು ನಾಲ್ಕು ಗ್ರಾಮಗಳಿಗೆ ಮಾತ್ರ ಕೊಟ್ಟಿದ್ದಾರೆ. ಹೀಗೆ ನಿಧಾನವಾಗಬಾರದು. ಸಂಬಂಧಪಟ್ಟ ಅಧಿಕಾರಿಗಳು ಒಂದು ತಿಂಗಳಲ್ಲಿ ಅಂದಾಜು ಮಾಡಬೇಕು. ಹೀಗೆ ಜಾಗ್ರತೆ ಅಂದಾಜುಮಾಡಿ ತ್ವರಿತವಾಗಿ ಕೆಲಸ ಮಾಡಬೇಕೆಂದು ಪ್ರಾರ್ಥನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ದೀಪವನ್ನು ನೋಡದೇಯಿರುವ ಜನ ನೂರಕ್ಕೆ ತೊಂಬತ್ತರಷ್ಟಿದ್ದಾರೆ. ವಿದ್ಯುಚ್ಛಕ್ತಿ ದೀಪವನ್ನು ನೋಡಿ ಆಶ್ಚರ್ಯ ಪಡುವವರು ಈಗಲೂ ಇದ್ದಾರೆ. ಭಾನುವಾರ ಅರಸೀಕೆರೆಗೆ ಬಂದಾಗ ವಿದ್ಯುಚ್ಛಕ್ತಿ ದೀಪಗಳನ್ನು ನೋಡಿ ಆಶ್ಚರ್ಯ ಪಡುತ್ತಾರೆ. ಈ ತಾಲ್ಲೂಕಿನಲ್ಲಿ ನಾಲ್ಕು ಗ್ರಾಮಗಳು ವಿನಾ ಇನ್ನಾವ ಗ್ರಾಮಕ್ಕೂ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ನಮ್ಮ ಜಾವಗಲ್ ಹೋಬಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಮನವಿಯನ್ನು ನಾನೇ ತೆಗೆದುಕೊಂಡು ಹೋಗಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಈಗಾಗಲೇ ಆರು ತಿಂಗಳಾಯಿತು. ಅದೇನಾಯಿತೋ ಗೊತ್ತಿಲ್ಲ. ನಮ್ಮ ಕಡೆ ವಿದ್ಯುಚ್ಛಕ್ತಿಯನ್ನುಪಯೋಗಿಸಿ ಜಮೀನಿನ ವ್ಯವಸಾಯಮಾಡಿ ಭತ್ತ, ರಾಗಿ ಮೊದಲಾದ ಆಹಾರ ಧಾನ್ಯಗಳನ್ನು ಬೆಳೆಯುವ ಒಂದು ಬಾವಿಯನ್ನೂ ನೋಡಿಲ್ಲ. ನಮ್ಮ ಅರಸೀಕೆರೆ ತಾಲ್ಲೂಕಿಗೆ ಈ ಇಲಾಖೆಯಿಂದ ಆಗಿರುವಷ್ಟು ಅನ್ಯಾಯ ಇನ್ಯಾವುದಕ್ಕೂ ಆಗಿಲ್ಲ. ಈಗಲಾದರೂ ಯಾವ ಯಾವ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಸರ್ವೆ ಆಗಿದೆಯೋ ಆ ಗ್ರಾಮಗಳಿಗೆ ಕೂಡಲೇ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಇತ್ತೀಚೆಗೆ ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕೂ, ದೀಪಗಳಿಗೂ, ಕೈಗಾರಿಕೆಗಳಿಗೂ ಒದಗಿಸಬೇಕೆಂದು ಸಂಸ್ಥಾನಾ ಮಳೆ ಬೇಡಿಕೆಗಳು ಬಹಳವಾಗಿ ಬರುತ್ತಿವೆ. ಜೊತೆಗೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಕೈಗಾರಿಕಾಭಿವೃದ್ಧಿಯನ್ನು ಮಾಡಬೇಕೆಂದಿರುವಾಗ ವಿದ್ಯುಚ್ಛಕ್ತಿಯನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿ ಮಾಡಬೇಕೆಂಬುದರ ಆವಶ್ಯಕತೆ ಸಂಪೂರ್ಣವಾಗಿದೆ. ಸರ್ಕಾರದವರು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊನ್ನೇಮರಡು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಕಾರ್ಯಕ್ರಮ ಕೈಗೊಂಡಿದ್ದಾರೆ. ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆಗೆ ಸರ್ಕಾರದಿಂದ ಬಂದ ಉತ್ತರದ ಪ್ರಕಾರ ಈ ಯೋಜನೆಯ ಮೊದಲನೆಯ ಹಂತದ ಕಾರ್ಯ ಮುಗಿಯಬೇಕಾದರೆ ಐದು ವರ್ಷಗಳಾದರೂ ಬೇಕಾಗುತ್ತದೆಂದು ಹೇಳಿದ್ದಾರೆ. ಈಗ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಬೇಕೆಂಬ ಬೇಡಿಕೆಗಳು ಹೆಚ್ಚುತ್ತಿವೆ. ಇದಕ್ಕನುಸರಿಸಿ ಸರ್ಕಾರದವರು ಕೊಡುವುದಕ್ಕೆ ಇನ್ನುಮೇಲೆ ಸಾಧ್ಯವಾಗುವುದಿಲ್ಲವೆಂದು ಕಂಡು ಬರುತ್ತದೆ. ಈಗಾಗಲೇ ಸರ್ಕಾರದವರು ಕೆಲವು ಬಾಬುಗಳಿಗೆ ವಿನಾ ಬಾಕಿ ಬಾಬುಗಳಿಗೆ ವಿದ್ಯುಚ್ಛಕ್ತಿಗಾಗಿ ಬರುವ ಬೇಡಿಕೆಗಳನ್ನೆಲ್ಲಾ ಪೂರೈಸುವುದಕ್ಕೆ ಸಾಧ್ಯವಿಲ್ಲ, ವಿದ್ಯುಚ್ಛಕ್ತಿಯ ಪ್ರಮಾಣ ಸಾಕಷ್ಟಿಲ್ಲವೆಂದು ಉತ್ತರ ಕೂಡ ಕೊಡುತ್ತಿದ್ದಾರೆ. ಇದೆಲ್ಲವನ್ನೂ ನಾವು ಯೋಚನೆ ಮಾಡುವುದಾದರೆ, ತಕ್ಷಣದಲ್ಲಿ, ಬೇಗ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚುಮಾಡುವುದಕ್ಕೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಸೂಕ್ತವಾಗಿದೆ. ಈಗಾಗಲೇ ಶಿಂಷಾ ಯೋಜನೆಯ ವಿಚಾರವಾಗಿ ಚರ್ಚೆ ಬಂದು, ಇಂಡಿಯಾ ಸರ್ಕಾರದವರು ಇದಕ್ಕೆ ಹಣವನ್ನೊದಗಿಸಿದ್ದರೆಂತಲೂ ನಮ್ಮ ಸರ್ಕಾರದವರು ಅದನ್ನು ಬೇರೆ ಬಾಬುಗಳಿಗೆ ಖರ್ಚು ಮಾಡಿದರೆಂತಲೂ ಕೇಳಿದ್ದೇವೆ. ಎರಡನೆಯ ಯೋಜನೆಯಲ್ಲಿ ಶಿಂಷಾ ಯೋಜನೆಯನ್ನು ಅಭಿವೃದ್ಧಿಮಾಡತಕ್ಕ ಕ್ರಮ ಕಂಡು ಬರುತ್ತದೆ. ಶಿಂಷಾ ಯೋಜನೆಯನ್ನು ತೆಗೆದುಕೊಂಡರೂ ಸುಮಾರು 15-20 ತಿಂಗಳೊಳಗೆ ತಾತ್ಕಾಲಿಕವಾಗಿ ಯಾದರೂ ನಮ್ಮ ದೇಶಕ್ಕೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆಂದು ಕಂಡು ಬರುವುದರಿಂದ ಸರ್ಕಾರದವರು ಶಿಂಷಾ ಯೋಜನೆಯನ್ನು ಕೈಗೊಂಡು ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಇದನ್ನು alternative project ಎಂದು ತೆಗೆದುಕೊಳ್ಳುತ್ತಿಲ್ಲ. 'ಶಿವ' ದಲ್ಲಿರುವ ಜನರೇಟರುಗಳು ಇನ್ನೂ ಹತ್ತು ವರ್ಷದವರೆಗೆ ಉಪಯೋಗಕ್ಕೆ ಬರುತ್ತವೆ ಎಂದು ಒಂದು ಪ್ರಶ್ನೆಗೆ ಉತ್ತರವಾಗಿ ಮಂತ್ರಿಗಳು ಹೇಳಿದರು. ಇದನ್ನು alternative project ಆಗಿ ತೆಗೆದುಕೊಳ್ಳುವುದಕ್ಕೆ ಬದಲಾಗಿ ದೇಶಕ್ಕೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನೊದಗಿಸಲು ಏರ್ಪಾಡು ಮಾಡಬೇಕು. ಗ್ರಾಮಾಂತರದಿಂದ ವಿದ್ಯುಚ್ಛಕ್ತಿಗಾಗಿ ಅನೇಕ ಬೇಡಿಕೆಗಳು ಬರುತ್ತಿವೆ. Our people are becoming electricity minded. ವ್ಯವಸಾಯದ ಪಂಪುಗಳನ್ನು ಹಾಕಿಕೊಂಡು ಕೆಲಸಮಾಡುವುದಕ್ಕೆ ಗ್ರಾಮಾಂತರಗಳಿಂದ ಹೆಚ್ಚು ಬೇಡಿಕೆಗಳು ಬರುತ್ತಿರುವುದರಿಂದ ಸರ್ಕಾರದವರು ತೀವ್ರವಾಗಿ ಪರಿಶೀಲನೆಮಾಡಿ ಶಿಂಷಾ ಯೋಜನೆಯನ್ನು ಹೊನ್ನೇಮರಡು ಆಗುತ್ತಿದ್ದರೂ ಕೂಡ, ತಕ್ಷಣ ತೆಗೆದುಕೊಂಡು ತಾತ್ಕಾಲಿಕವಾಗಿ ಬೇಕಾದ ವಿದ್ಯುಚ್ಛಕ್ತಿಯ ಸರಬರಾಜನ್ನು ಈ ಮೂಲಕ ಮಾಡಬೇಕೆಂದು ಸಲಹೆ ಮಾಡುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮೊದಲನೆಯದಾಗಿ ವಿದ್ಯುಚ್ಛಕ್ತಿಯ ದರದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಒಂದು ಒಂದೂವರೆ ವರ್ಷದ ಹಿಂದೆ ಒಂದು ರೀತಿ ದರವನ್ನು ಗೊತ್ತು ಮಾಡಿದರು. ಆಹಾರ ಬೆಳೆಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಗೇ ಒಂದು ದರ, ಇತರ ಬೆಳೆಗಳಿಗೆ ಉಪಯೋಗಿಸುವುದಕ್ಕೇ ಒಂದು ದರ ಗೊತ್ತು ಮಾಡಿದರು. ಇದರಿಂದ ಕೆಲವು ತೊಡಕುಗಳುಂಟಾಗಿವೆ. ದರದಲ್ಲಿ ಈ ರೀತಿ ವ್ಯತ್ಯಾಸವಿರಬಾರದು. ವ್ಯವಸಾಯಕ್ಕೆ ಕೊಡುವ ವಿದ್ಯುಚ್ಛಕ್ತಿಗೆ ಒಂದೇ ದರ, ಎಂದರೆ ಯೂನಿಟ್ಟಿಗೆ ಆರು ಕಾಸು ಅಥವಾ ಒಂಭತ್ತು ಕಾಸಿರಬೇಕು.

ಎರಡನೆಯದಾಗಿ, 25 ಸೈಕಲ್ಸ್ ಇದ್ದುದನ್ನು ಬೆಂಗಳೂರಿನಲ್ಲಿ 50 ಸೈಕಲ್ಸ್ ಆಗಿ ಪರಿವರ್ತನೆ ಮಾಡಿದ್ದಾರೆ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರದಲ್ಲಿ ಇನ್ನೂ ಪರಿವರ್ತನೆ ಮಾಡಿಲ್ಲ. ಅಲ್ಲಿಯೂ ಜಾಗ್ರತೆ ಮಾಡುತ್ತಾರೆಂದು ತಿಳಿದು ಕೆಲವರು ಆತುರದಲ್ಲಿ 50 ಸೈಕಲ್ಸ್ ಮೋಟಾರುಗಳನ್ನು ಹಾಕಿಸಿಬಿಟ್ಟರು. 50 ಸೈಕಲ್ಸ್‌ಗೆ ವಿದ್ಯುಚ್ಛಕ್ತಿ ಬದಲಾವಣೆಯಾಗದೇ ಇರುವುದರಿಂದ ಅವರೆಲ್ಲರೂ ತೊಂದರೆ ಪಡುತ್ತಿದ್ದಾರೆ. ಅಲ್ಲಿ ಬೇಗ ಪರಿವರ್ತನೆ ಮಾಡದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ವಿದ್ಯುಚ್ಛಕ್ತಿಯನ್ನು ಕೊಡುವುದರಲ್ಲಿಯೂ ಬಹಳ ನಿಧಾನವಾಗುತ್ತಿದೆ. ಮೂರು ವರ್ಷಗಳಿಗೆ ಮುಂಚೆಯೇ ಹೊನ್ನೇಮರಡು ಯೋಜನೆಯನ್ನು ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು. ಈ ಮಾನ್ಯ ಸಭೆಯಲ್ಲಿ ಈ ಪ್ರಶ್ನೆ ಬರುತ್ತಲೇ ಇತ್ತು; ಆದರೂ ಸರ್ಕಾರ ಅದನ್ನು ತೆಗೆದುಕೊಳ್ಳಲಿಲ್ಲ. ದೇಶದಲ್ಲಿ

(ಶ್ರೀ ಕೆ. ವಿ. ಬೈರೇಗೌಡ).

ವಿದ್ಯುಚ್ಛಕ್ತಿಯ ಆವಶ್ಯಕತೆ ಹೆಚ್ಚಾಗುತ್ತದೆಂಬುದು ಗೊತ್ತಾಗಿತ್ತು. ಬೇಕೆಂದು ಕೇಳುವ ಜನರಿಗೆ ಕೊಡದೇ ಯಿದ್ದರೆ ಅನ್ಯಾಯವಾಗುತ್ತದೆ. ಪ್ರತಿ ಹಳ್ಳಿಯ ಲ್ಲಿಯೂ ವಿದ್ಯುಚ್ಛಕ್ತಿ ಯನ್ನು ಕೊಡುವ ಬಗ್ಗೆ ನಿಧಾನ ವಾಗುತ್ತಿದೆ. ಎಲ್ಲೆಲ್ಲಿ ಕೇಳಿದ್ದಾರೋ ಅಲ್ಲಿಗೆ ಬೇಗ ಕೊಟ್ಟು ಅನುಕೂಲ ಮಾಡಬೇಕೆಂದು ಪ್ರಾರ್ಥಿಸು ತ್ತೇನೆ. ಈ ಇಲಾಖೆಯಲ್ಲಿ ಕೆಲಸ ಮಾಡುವ ನೌಕರ ರಿಗೆ ಇಂಜಿನಿಯರಿಂಗ್ ಇಲಾಖೆಯಲ್ಲಿ ಏನು ವ್ಯವಸ್ಥೆ ಇಟ್ಟಿದ್ದಾರೋ ಅದೇ ವ್ಯವಸ್ಥೆಯನ್ನಿಟ್ಟು ಸಂಬಳ ಸಾರಿಗೆ ಕೊಡಬೇಕು. ಆ ರೀತಿ ಇಡದೇ ಹೋದರೆ ಇವರ ಮನಸ್ಸಿಗೆ ಬೇಸರವಾಗಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಅದು ಬಹಳ ಗ್ಲೇರಿಂಗ್ ಆಗಿ ಎದ್ದು ಕಾಣುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಲ್ಲಿರುವ ಇಂಜಿನಿಯರುಗಳಿಗೆ ಗ್ರೇಡುಗಳನ್ನು ಕೊಟ್ಟು ವಿದ್ಯುಚ್ಛಕ್ತಿ ಇಲಾಖೆಯಲ್ಲಿರುವ ಇಂಜಿನಿಯರುಗಳಿಗೆ ಕೊಡದೆ ಇರುವುದರಿಂದ ಅವರುಗಳಿಗೆ ಉತ್ಸಾಹ ಕಮ್ಮಿಯಾಗುತ್ತದೆ. ಜವಾಬ್ದಾರಿಯಿಂದ, ದಕ್ಷತೆ ಯಿಂದ ಕೆಲಸ ಮಾಡಬೇಕಾದ್ದರಿಂದ ಈ ರೀತಿ disparity ಇಟ್ಟಿರುವುದು ಸರಿಯಲ್ಲವೆಂದು ಕಾಣು ತ್ತದೆ. ಇದು Commercial department ಆಗಿ ರುವುದರಿಂದ commercial lines ಮೇಲೆ ಕೆಲಸ ಮತ್ತು ಸಂಬಳದ ಸ್ಕೇಲುಗಳನ್ನು ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸ ನಗರ).—ಸ್ವಾಮಿ, ಡಿಮ್ಯಾಂಡ್ ನಂಬರು 38 ಮತ್ತು 42, ಈ ಮನವಿಗಳ ಸಂಬಂಧದಲ್ಲಿ ಒಂದೆರಡು ವಿಷಯ ಗಳನ್ನು ಹೇಳಬೇಕೆಂದಿದ್ದೇನೆ. ಈಚೆಗೆ ಸರ್ಕಾರದ ವರು ವಿದ್ಯುಚ್ಛಕ್ತಿ ನೌಕರರ ಬೇಡಿಕೆಗಳ ಸಂಬಂಧದಲ್ಲಿ ರಚನೆಯಾಗಿದ್ದ ಸಮಿತಿಯವರ ಶಿಫಾರಸ್ಸುಗಳಲ್ಲಿ ಕೆಲ ವನ್ನು ಜಾರಿಗೆ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಕ್ಲೆರಿ ಕಲ್ ಅಂದರೆ ಗುಮಾಸ್ತರು ಯಾರಿದ್ದಾರೋ ಅವರಿಗೆ ಇದರಲ್ಲಿ ಸಂಬಂಧಪಟ್ಟ ಒಂದು ಬೇಡಿಕೆ ಅನ್ವಯಿಸದಿ ರುವ ರೀತಿಯಲ್ಲಿ ಅಧಿಕಾರಿಗಳು ಅದನ್ನು interpret ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳಿ ದ್ದೇನೆ. ಈ ಇಲಾಖೆಯನ್ನು 'essential department' ಎಂದು ತೀರ್ಮಾನ ಮಾಡಿದರಿ. ಅದರಲ್ಲಿ ಕೆಲವು ಕೆಲಸಗಾರರನ್ನು maintenance ಮತ್ತು executive ಇವರನ್ನು ಮಾತ್ರ essential ಎಂದು ಕರೆದು ಅದಕ್ಕೆ ಸಂಬಂಧಪಟ್ಟ ಗುಮಾಸ್ತ (clerical staff) ರನ್ನು ಬೇರ್ಪಡಿಸತಕ್ಕದ್ದು ಅಷ್ಟು ಒಳ್ಳೆಯ ನೀತಿಯಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳ ಬೇಕಾಗಿದೆ. ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು ಮೊನ್ನೆ ತಾನೆ ಅಪ್ಪಣೆ ಕೊಡಿಸಿದರು. ಏನೆಂದರೆ ಕೆಲಸ ಮಾಡದೆ ಇದ್ದವರಿಗೆ ಭತ್ಯಕೊಡುವುದಕ್ಕಾಗುವುದಿಲ್ಲ, ಮುಷ್ಕರ ಮಾಡಿದ ಕಾಲದ 19 ದಿವಸಗಳ ಕೂಲಿಯನ್ನು ಕೊಡು ವುದಿಲ್ಲವೆಂದು ಹೇಳಿದರು. ಬಹುಶಃ ಅವರಿಗೆ ಕಾನೂನು, ಕಾಯಿದೆ ಇಲ್ಲವೇ ಇಲ್ಲವೆಂದು ತಿಳಿದುಕೊಂಡಿ ದ್ದಾರೋ ಏನೋ. ಮುಷ್ಕರ ಮಾಡುವುದಕ್ಕೆ ನ್ಯಾಯ ಬದ್ಧ (legal) ವಾಗಿ ನೋಟೀಸ್ ಕೊಟ್ಟು ಮಾಡಿ ದ್ದಾರೆ. ಇದು ಕಾರ್ಮಿಕರಿಗಿರತಕ್ಕ ಒಂದು ಹಕ್ಕು. ಅದರ ಪ್ರಕಾರ ಹಿಂದೆಲ್ಲ ಎಷ್ಟೋ ಮುಷ್ಕರಗಳನ್ನು ಮಾಡಿರತಕ್ಕ ಕಾರ್ಮಿಕರಿಗೆ ಮುಷ್ಕರ ಕಾಲದ ಭತ್ಯ ವನ್ನು ಕೊಟ್ಟಿದ್ದಾರೆ. ರೈಲ್ವೆ ಕಾರ್ಮಿಕರಿಗೆ ಕೊಟ್ಟಿ ದ್ದಾರೆ. ವಿದ್ಯುಚ್ಛಕ್ತಿ ಕಾರ್ಖಾನೆ ಕಾರ್ಮಿಕರು ಸುಮಾರು ನಾಲ್ಕು ತಿಂಗಳ ಕಾಲ ಮುಷ್ಕರ ಮಾಡಿದಾಗ ಕೊಟ್ಟಿದ್ದಾರೆ. ಸಾಮಾನ್ಯವಾಗಿ ನೋಡುವುದಾದರೆ ಕೈಗಾರಿಕಾ ಕಾನೂನು ಪ್ರಕಾರ ನ್ಯಾಯಬದ್ಧ (legal) ವಾಗಿ ಮುಷ್ಕರ ಮಾಡತ್ತೇವೆಂದು ನೋಟೀಸ್ ಕೊಟ್ಟು ಮುಷ್ಕರ ನಡೆಸಿದಾಗ ಆ ಕಾಲದ ಭತ್ಯವನ್ನು ಅವರು ತೆಗೆದುಕೊಂಡೇ ತೆಗೆದುಕೊಳ್ಳು ತ್ತಾರೆ. ಅದು ಕಾರ್ಮಿಕರ ಅಜನ್ಮಸಿದ್ಧವಾದ ಹಕ್ಕು. ಕಾನೂನು ಪ್ರಕಾರ ಮುಷ್ಕರ ಕಾಲದ ಭತ್ಯ ವನ್ನು ಕೊಡಲೇಬೇಕು. ಆದುದರಿಂದ ಮಾನ್ಯ ಮಂತ್ರಿ ಗಳು ಯಾವ ಆಧಾರದ ಮೇಲೆ ಹೀಗೆ ಹೇಳಿದರೋ ಗೊತ್ತಿಲ್ಲ. ಕೋರ್ಟಿಗೆ ಬೇಕಾದರೆ ಹೋಗಿ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುವುದರಲ್ಲಿ ಅರ್ಥ ವಿಲ್ಲ. ಕೋರ್ಟಿಗೆ ಹೋಗತಕ್ಕದ್ದನ್ನು ಸಂಬಂಧಪಟ್ಟ ನ ಕರಸಂಘದವರು ಪರ್ಯಾಲೋಚನೆ ಮಾಡುತ್ತಿ ದ್ದಾರೆ. ಆ ಇಲಾಖೆಯ ಅಧಿಕಾರಿಗಳು ಮುಷ್ಕರ ಹೂಡಿದ್ದ ನೌಕರರ ವಿಚಾರದಲ್ಲಿ ಯಾವ ಮನೋಭಾವ ವನ್ನು ಹೊಂದಿದ್ದಾರೆಂಬುದು ನನ್ನ ಗಮನಕ್ಕೆ ಬಂದಿದೆ. ಮುಷ್ಕರ ನಡೆದು ಎಷ್ಟೋ ಕಾಲವಾಗಿ ದ್ದರೂ ಕೂಡ ಆ ಕಾಲದಲ್ಲಿ ನಡೆದಂಥ ವಿಷಯದ ಬಗ್ಗೆ ಈಗಲೂ ಕೂಡ ಕಾರ್ಮಿಕರನ್ನು ಕುರಿತು ನೀವು ಮುಷ್ಕರ ಕಾಲದಲ್ಲಿ ಬೇರೆಯವರನ್ನು ನಂಬಿದ್ದಿರಿ, ಈಗ ನಮ್ಮ ಹತ್ತಿರ ಬರುತ್ತೀರಿ ಎಂದು ಅವರನ್ನು ಒಂದು ರೀತಿಯಲ್ಲಿ ಮೂದಲಿಸಿ ಮಾತನಾಡ ತ್ತಾರೆ. ಯಾವಾಗಲೂ ಅವರನ್ನು ಚುಚ್ಚಿ ಮಾತನಾಡುವಂತೆ ಮಾತನಾಡಿಕೊಳ್ಳುವುದು, ಅವರ ಬಗ್ಗೆ ಒಂದು ರೀತಿಯ ವೈಮನಸ್ಯವನ್ನು ಇಟ್ಟು ಕೊಂಡೇ ಮುಂದು ವರಿಯುವದು, ಇವೆಲ್ಲ ಬಹಳ ಖಂಡನೀಯ ಮತ್ತು ವಿಷಾದನೀಯವಾದ ವಿಷಯ. ಇದು ಒಂದು ವರ್ಗದ ಹೋರಾಟ. ಕಾರ್ಮಿಕರು ತಮ್ಮೆಲ್ಲರ ಉತ್ತಮ ಕ್ಕಾಗಿ ಹೋರಾಟ ಮಾಡಿದರೇ ಹೊರತು ಒಬ್ಬನಿ ಗಾಗಿ, ಒಬ್ಬನ ಸ್ವಾರ್ಥಕ್ಕಾಗಿ ಯಾರೂ ಸಹ ಮುಷ್ಕರ ವನ್ನು ಮಾಡಲಿಲ್ಲವೆಂಬುದನ್ನು ಅಧಿಕಾರಿಗಳು ತಿಳಿಯ ಬೇಕು. ಅಲ್ಲದೆ ಅಧಿಕಾರಿಗಳು ಈ ರೀತಿ ವರ್ತಿಸಿದ್ದಾ ದರೆ, ಅದು ಸಂಪೂರ್ಣವಾಗಿ ಈ ಇಲಾಖೆಯ ದಕ್ಷತೆ ಯನ್ನು ಕಡಿಮೆ ಮಾಡಿದಂತಾಗುತ್ತದೆ. ಈಗ ಮುಷ್ಕರ ಮುಗಿದು ಹೋಗಿದೆ. ಇಲಾಖೆಯಲ್ಲಿ ನಿರ್ಮಲವಾಗಿರ ತಕ್ಕ, ಸಾಹಾರ್ದ ವಾತಾವರಣವನ್ನು ಕಲ್ಪಿಸುವುದಕ್ಕೆ ಅಧಿಕಾರಿಗಳು ಹೆಚ್ಚು ಪ್ರಯತ್ನ ಮಾಡಬೇಕು. ಆದರೆ ಅಧಿಕಾರಿಗಳು ಈ ವಿಷಯವನ್ನು ತಮ್ಮ ಗಮನಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ. ಈಗಲಾದರೂ ಕೂಡ ಅಧಿಕಾರಿಗಳು ತಮ್ಮ ಮನೋಭಾವವನ್ನು ಬದಲಾ ಯಿಸಿ, ನೌಕರರನ್ನು ಕೆರಳಿಸತಕ್ಕ, ಅವರಿಗೆ ಆತ್ಮಘಾತ ವಾಗತಕ್ಕ ರೀತಿಯಲ್ಲಿ ಮಾತನಾಡುವುದನ್ನು ಬಿಡಲು ತೊಡಗಿದರೆ ಸಂಸ್ಥಾನಕ್ಕೆ ಕ್ಷೇಮವೆಂದು ಭಾವಿಸು ತ್ತೇನೆ.

ಶರಾವತಿ ವ್ಯಾಲಿ ಪ್ರಾಜೆಕ್ಟ್ ವಿಷಯವಾಗಿ ಒಂದು ಮಾತು ಹೇಳುತ್ತೇನೆ. ಈಗ ಸಂಸ್ಥಾನದಲ್ಲಿ ವಿದ್ಯುಚ್ಛ ಕ್ತಿಯ ಅಭಾವವಿದೆ. ಶರಾವತಿವ್ಯಾಲಿಯಲ್ಲಿ ಮತ್ತು ಭದ್ರಪ್ರಾಜೆಕ್ಟ್‌ನಲ್ಲಿ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡದೆ ಹೋದರೆ ಈಗಿರತಕ್ಕ ಡಿಮ್ಯಾಂಡನ್ನು ನಾವು ಪೂರೈಸುವುದಕ್ಕಾಗುವುದಿಲ್ಲ ವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಸಂದರ್ಭದಲ್ಲಿ ನಾನು ಒಂದಂಶವನ್ನು ಸರ್ಕಾರದ ಮುಂದೆ ಇಡಬೇಕೆಂದಿದ್ದೇನೆ. ಕಾಂಪೆನ್ಸೇಷನ್ ವಿಚಾರ ದಲ್ಲಿ, ಮುಳುಗಡೆಯಾದ ಪ್ರದೇಶದವರಿಗೆ ಯಾವ ರೀತಿ ಪರಿಹಾರ ಕೊಡಬೇಕೆನ್ನುವುದಕ್ಕೆ ಶ್ರೀಮಾನ್ ಚನ್ನ

ಬಸಪ್ಪನವರು ಒಂದು ಅಭಿಪ್ರಾಯಪಟ್ಟರು. ಅದೇನೆಂದರೆ ಜಮೀನು ಮುಳುಗಡೆಯಾಗದೆ ಇರುವವರಿಗೆ ಯಾವ ಪರಿಹಾರವನ್ನೂ ಕೊಡುವುದಿಲ್ಲವೆಂದು. ಸಾಮಾನ್ಯವಾಗಿ ಆ ಭಾವನೆ, ಆ ರೀತಿಯ ಅಭಿಪ್ರಾಯ ಪಡಬಹುದು. ಆದರೆ ಒಂದು ಪ್ರದೇಶದಲ್ಲಿ ವಾಸಮಾಡತಕ್ಕ ಜನರ ಸುತ್ತಲೂ ನೀರನ್ನು ಬಿಟ್ಟರೆ, ಸಾಮಾನ್ಯವಾಗಿ ಅದು criminal action ಆಗುತ್ತದೆ. ಇದನ್ನು ದೇಶದ ಹಿತದೃಷ್ಟಿಯಿಂದ ಮಾಡುತ್ತೇವೆಂದು ಹೇಳಬಹುದು. ಆದರೆ ಆ ಪ್ರದೇಶಗಳಲ್ಲಿರತಕ್ಕವರನ್ನು ಅಲ್ಲಿಂದ ಹೊರಗೆ ಕರೆತಂದು ಅವರಿಗೆ ಒಂದು ರೀತಿಯ ಪುನರ್ವ್ಯವಸ್ಥೆಯನ್ನು ಕಲ್ಪಿಸಬೇಕು. ಇಡೀ ಊರನ್ನೇ ಹೊರಗೆ ತರಬೇಕು. ಹಿಂದೆ ಹಿರೇಭಾಸ್ಕರ ಜಲಾಶಯವನ್ನು ಕಟ್ಟಿದ್ದಾದಮೇಲೆ ಅಲ್ಲಿ ಕೆಲವು ಜನರು ವಾಸಿಸುತ್ತಿದ್ದ ಕಡೆ ದ್ವೀಪಪ್ರಾಯದಲ್ಲಿರುವ ಸ್ಥಳವಾಗಿ, ಅವರಿಗೆ ವಾಹನ ಸೌಕರ್ಯವಿಲ್ಲದೆ, ರಸ್ತೆಗಳಿಲ್ಲದೆ ಅನೇಕ ರೀತಿ ಕಷ್ಟಕ್ಕೊಳಗಾಗಿದ್ದಾರೆ. ಇಂಥವರನ್ನು ಯಾರು ವಿಚಾರಿಸಬೇಕು? ದೇಶದ ಹಿತದೃಷ್ಟಿಯಿಂದ ಜಲಾಶಯಗಳನ್ನು ನಿರ್ಮಿಸಿದರೂ ಕೆಲವು ಜನರಿಗೆ ಈ ರೀತಿಯಾದ ತೊಂದರೆಗಳೊದಗುವಂತೆ ಮಾಡುವುದು ಒಳ್ಳೆಯ ನೀತಿಯಾಗುವುದಿಲ್ಲ. ಆದುದರಿಂದ ಈ ಪ್ರದೇಶದಲ್ಲಿರುವವರಿಗೆಲ್ಲರಿಗೂ ಕೂಡ ಪುನರ್ವ್ಯವಸ್ಥೆಯನ್ನು ಕಲ್ಪಿಸಿಕೊಡುವುದು ಬಹಳ ಅಗತ್ಯವಾದ ಕೆಲಸ. ಶರಾವತಿ ವ್ಯಾಲಿ ಪ್ರಾಜೆಕ್ಟ್ ಕೆಲಸ stage by stage ನಡೆಯುತ್ತದೆಂದು ಹೇಳುತಾರೆ. ಮೊದಲನೆ ಸ್ಟೇಜ್‌ನಲ್ಲಿ ಹಿರೇಭಾಸ್ಕರ ಅಣೆಕಟ್ಟಿನ ವರೆಗೂ ನೀರು ನಿಲ್ಲುತ್ತದೆ. ಅನಂತರ ಹೆಚ್ಚು ಪ್ರದೇಶ ಮುಳುಗಡೆಗೆ ಬರುತ್ತದೆ. ಈ ರೀತಿ ಕ್ರಮಕ್ರಮವಾಗಿ ಕೆಲಸ ನಡೆಯುತ್ತದೆ. ಹೀಗೆ ಅವರು ಹತ್ತು ವರ್ಷಗಳವರೆಗೂ ಕಾಯಬೇಕು. ಮುಳುಗಡೆಯಾಗುವ ಪ್ರದೇಶ ಯಾವುದು ಎಂದು ಸರ್ವೆ ಮಾಡಿ ಗೊತ್ತುಮಾಡುತ್ತಾರೆ. ಆದುದರಿಂದ ಮುಳುಗಡೆ ಪ್ರದೇಶದಲ್ಲಿರುವವರಿಗೆ ಯಾರಾರಿಗೆ ಎಷ್ಟೆಷ್ಟು ಪರಿಹಾರ ಕೊಡಬೇಕೆಂದು ನೋಡಿ ಅವರಿಗೆಲ್ಲ ಈಗಲೇ ಪರಿಹಾರವನ್ನು ಕೊಟ್ಟು, ಅವರುಗಳು ಬೇರೆ ಕಡೆ ನೆಲಸುವುದಕ್ಕೆ ಪುನರ್ವ್ಯವಸ್ಥೆ ಕಾರ್ಯ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಚನ್ನಗಿರಿ ತಾಲ್ಲೂಕು ಲಿಂಗದಹಳ್ಳಿ ಎಲೆಕ್ಟ್ರಿಕ್ ಆಫೀಸಿನಲ್ಲಿರುವ ಸಿಬ್ಬಂದಿಗೆ ವಾಸಕ್ಕೆ ಕಟ್ಟಡಗಳಿಲ್ಲದೆ ಬಹಳ ತೊಂದರೆಯಾಗಿದೆ. ಸುಮಾರು ಏಳೆಂಟು ವರ್ಷಗಳಿಂದ ಟೆಂಡರುಗಳನ್ನು ಕರೆಯುವುದು, ಅವುಗಳನ್ನು ತಿರಸ್ಕರಿಸುವುದು (reject ಮಾಡುವುದು) ಈ ರೀತಿಯಾಗಿದೆ. ಈ ವಿಷಯವನ್ನು ಹಿಂದಿನ ಅಸೆಂಬ್ಲಿಯಲ್ಲಿ 1951 ನೆ ಇಸವಿ ಜನವರಿ 30 ನೇ ತಾರೀಖು ಪ್ರಸ್ತಾಪ ಮಾಡಿದಾಗ ಆಗಿನ ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ. ಟಿ. ಭಾಷ್ಯಂಅವರು, ಕೂಡಲೇ ಕಾಗದಪತ್ರಗಳನ್ನು ತರಿಸಿಕೊಂಡು, fresh tenders call for ಮಾಡಿ ಕಟ್ಟಡಗಳನ್ನು ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಅಲ್ಲಿಂದೀಚೆಗೆ ಆರು ವರ್ಷಗಳಾದರೂ ಕೂಡ ಇನ್ನೂ ಏನೂ ಆಗಿಲ್ಲ.

ಇಲ್ಲಿ ಎರಡು ಮೂರು ರೀತಿಯ ಸಿಬ್ಬಂದಿ ಇದೆ. main line maintenance staff, stepdown station staff, ತಾಲ್ಲೂಕಿಗೆಲ್ಲ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಕೆಲವು ಸಿಬ್ಬಂದಿ, ಹೀಗೆ ಎರಡು ಮೂರು ಬಗೆಯ ಸಿಬ್ಬಂದಿ ಇದೆ. ಅವರಿಗೆ ವಾಸಕ್ಕೆ ಮನೆಗಳಿಲ್ಲ, quarters ಇಲ್ಲ. ಇದು ಚಿಕ್ಕಹಳ್ಳಿ. ಈಗ ನಾಲ್ಕೈದು ವರ್ಷಗಳಿಂದ ಷೆಡ್ಡುಗಳಲ್ಲಿ ವಾಸಮಾಡುತ್ತಿದ್ದಾರೆ. ಹಳ್ಳಿಯಲ್ಲಿರುವ ಮನೆಯ ಮುಂಭಾಗದ ಪಡಸಾಲೆಗಳಲ್ಲಿ ವಾಸಮಾಡುತ್ತಿದ್ದಾರೆ. ಈ ಜನರು ಇಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರೂ ಕೂಡ ನಾಲ್ಕು ವರ್ಷಗಳ ಹಿಂದೆಯೇ ಮಂಜೂರಾಗಿದ್ದರೂ ಕೂಡ ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರು ಟೆಂಡರುಗಳನ್ನು ಕಳುಹಿಸಿಕೊಟ್ಟಿದ್ದರೂ ಸಹ ಸರ್ಕಾರದವರು ಷೆಡ್ಯೂಲ್ ರೇಟಿಗಿಂತ ಬಹಳ ಜಾಸ್ತಿಯಾಗಿ ಟೆಂಡರುಗಳು ಬಂದಿವೆ ಎಂಬ ಕಾರಣದ ಮೇಲೆ ಅವುಗಳನ್ನು reject ಮಾಡಿದ್ದಾರೆ. ಯಾವಾಗ ಮೂರು ನಾಲ್ಕು ಸಲ ಇದೇ ರೀತಿ ಬರುತ್ತದೆಯೋ ಆಗ ಆ ಸ್ಥಳದಲ್ಲಿ ಕಂಡೀಷನ್ಸ್ ಕಷ್ಟವಾಗಿವೆ ಎಂದು ತಿಳಿದುಕೊಂಡು ಸರ್ಕಾರದವರು ಮಂಜೂರ್ಮಾಡಬೇಕು. ಒಂದು ವೇಳೆ ಹಾಗೆ ಮಾಡುವುದಕ್ಕಾಗದೆ ಹೋದರೆ ಇಲಾಖೆಯಿಂದಲೇ ಅಮಾನಿಯಾಗಿ ಕೆಲಸ ಮಾಡಿ ವಸತಿಗೃಹಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

*Sri S. SRINIVASA IYENGAR (T.-Narasipur).—Sir, the Government appointed a committee under the Chairmanship of Prof. Thacker to revise the tariff rates of the electric department. Till today the Government have not placed before us what their suggestions are. If the Government had only placed the revised tariff rates before us, it would have been better for us to give suggestions or fight for the reduction of the revised rates. I hope the Hon'ble Minister will tell us what the Government propose to do.

Secondly, Government have invested nearly 28 crores on Hydro-Electrical Projects. This investment is out of the loans raised from the public. The return is estimated to be 10·8 lakhs. I have taken into consideration the payment of interest, the working expenses and all other things. The net income to the Exchequer of the State would not be more than about 10·8 lakhs. Sir, for a capital outlay of nearly 28 crores this income is far less and the working expense is high. Government should do well in reorganising the department in such a manner as to have a greater percentage of return.

Sir, in many of the taluk headquarters, I notice the voltage drop in street lights. Such drops are so extensive that it will not be possible to read in the evenings in some taluk headquarters. Government should set right the defect in this behalf.

(SRI S. SRINIVASA IYENGAR.)

Lastly, for the domestic lighting, we are charged at the rate of four annas a unit. I believe that it does not cost the Government more than one anna per unit for generating. I have been pressing this issue for these four years. We would certainly welcome a little reduction in the charge of domestic lighting. I suggest that it may be two annas per unit.

Sir, regarding rural electrification, I wish to make a remark. In taluks where there are a number of villages, electricity is provided only for a very small number and the claim of that taluk for further electrification is ignored. I suggest that while sanctioning rural electrification, taluks where the least percentage of villages are provided with electricity may be given preference and electrification of other villages in that taluk may be taken up so that the villagers of other villages of the taluk may also have the benefit of electricity.

Sri P. R. RAMAIYA (Basavanagudi).—Sir, the minimum rate in the case of small industries has been raised causing great hardship to them. Till now the practice was to charge for the number of units consumed. Now, a minimum has been fixed ; this is very high and it works a great hardship to the small industries which consume power. The schedule works a great hardship to even those who use motors of one H.P., 5 H.P. and 10 H.P. Again, there are many points in the schedule which are not quite clear to those who are using power. I want the Government to consider the hardship experienced by the small industries due to this change and remedy it suitably.

(Several members rose.)

Mr. SPEAKER.—Sri Mulka Govinda Reddy may speak.

Sri Mulka GOVINDA REDDY (Chitaldrug).—If the time that would be allowed to me is only three minutes, I do not propose to speak.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಶ್ರೀ ಶ್ರೀನಿವಾಸಯ್ಯಂಗಾರ್ ಅವರು ತಮ್ಮ ಭಾಷಣದ ಕಡೆಯಲ್ಲಿ ಅಪ್ಪಣೆಕೊಡಿಸಿದ ಹಾಗೆ ದುರದೃಷ್ಟಕ್ಕೆ ಪಾತ್ರರಾಗಿರುವ ತಾಲ್ಲೂಕಿನವರ ಪೈಕಿ ನಾನು ಒಬ್ಬ. ಕುಣಿಗಲು ತಾಲ್ಲೂಕಿನಲ್ಲಿ ತೀರಾ ಕಡಮೆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಾಗಿದೆ; 314 ಗ್ರಾಮಗಳಿರುವ ತಾಲ್ಲೂಕಿನಲ್ಲಿ ಮೂರು ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿ ಸರಬರಾಯಾಗಿದೆ. ಐದುಸಾವಿರ ಪ್ರಜಾಸಂಖ್ಯೆಯಿರುವ ಹೋಬಳಿ ಹೆಡ್‌ಕ್ವಾರ್ಟರುಗಳಿಗೆ ಕೂಡ ಪವರ್ ಕೊಟ್ಟಿಲ್ಲ. ಇನ್ನೂ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯಕ್ಕೆ ಪಂಪನ್ನು ಹಾಕಿಸಲು ಕೆಲವು ಕಡೆ ಕೇಳುತ್ತಿದ್ದಾರೆ. ಅಂಥ ಕಡೆಗೆ ಎಸ್ಟಿಮೇಟ್ ಆಗಿರುವುದು ಮಂಜೂರು ಆಗಿದೆಯೋ ಇಲ್ಲವೋ, ಈಸಲವಾದರೂ ಅಲ್ಲಿಗೆ ಪವರ್ ಸರಬರಾಯಿ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ; ಶರಾವತಿ ವ್ಯಾಲಿಯಿಂದ ಪವರ್ ಸರಬರಾಯಾಗುವವರೆಗೆ ಸಿಕ್ಕುತ್ತದೆಯೋ ಇಲ್ಲವೋ ಅನುಮಾನವಾಗಿದೆ. ಮೊನ್ನೆ ತಾನೆ ವಿದ್ಯುಚ್ಛಕ್ತಿ ಇಲಾಖಾ ಮಂತ್ರಿಗಳು ಪ್ರವಾಸ ಬಂದಾಗಲೂ ಮನವಿ ಮಾಡಿದೆವು. ಈಗಲಾದರೂ ಶ್ರೀ ಶ್ರೀನಿವಾಸಯ್ಯಂಗಾರ್‌ಅವರು ಹೇಳಿದ ಹಾಗೆ ಯಾವಯಾವ ತಾಲ್ಲೂಕುಗಳಲ್ಲಿ ಕಡಮೆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಾಗಿದೆಯೋ ಅವುಗಳಿಗೂ, ಅಂಥ ಕುಣಿಗಲು ತಾಲ್ಲೂಕಿಗೂ ಜಾಗ್ರತೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, 38 ಮತ್ತು 42ನೆಯ ಡಿಮ್ಯಾಂಡ್ ಮನವಿಗಳನ್ನು ಸ್ವಾಗತಿಸುತ್ತೇನೆ. ವಿದ್ಯುಚ್ಛಕ್ತಿ ಇಲಾಖಾ ಅಧಿಕಾರಿಗಳು ಮತ್ತು ಮಂತ್ರಿಗಳು ಈಚೆಗೆ ಇಂಡಿಯಾ ಸರ್ಕಾರದಿಂದ ಗ್ರ್ಯಾಂಟು ಬಂದಮೇಲೆ ದೇಶಕ್ಕೆ ಹೆಚ್ಚಿನ ಅನುಕೂಲ ಮಾಡುತ್ತಿದ್ದಾರೆ. ಮಾಗಡಿ ತಾಲ್ಲೂಕು ಬಹಳ ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶ, ಬೆಂಗಳೂರಿಗೆ ಸುಮಾರು 40 ಮೈಲಿಗಳ ದೂರದಲ್ಲಿದೆ, ಅದರಲ್ಲಿ 400 ಹಳ್ಳಿಗಳಿವೆ. ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ ಹಾಗೆ, ಮಾಗಡಿ ತಾಲ್ಲೂಕಿನಲ್ಲಿ ಎರಡು ಮೂರು ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನೊದಗಿಸಿದ್ದಾರೆ. ಸರ್ಕಾರದವರು ನಿಯಮಿತವಾದ ಮತ್ತು ನಿರ್ದಿಷ್ಟವಾದ ರೀತಿಯಲ್ಲಿ ಕ್ರಮಬದ್ಧವಾಗಿ ಕೆಲಸಕಾರ್ಯಗಳನ್ನು ಮಾಡಿ ದೇಶದ ಜನರೆಲ್ಲರಿಗೂ ಸರಿಸಮಾನವಾಗಿ ವಿದ್ಯುಚ್ಛಕ್ತಿಯನ್ನೊದಗಿಸಲು ಏರ್ಪಾಡು ಮಾಡಿಲ್ಲವೆಂದು ಪದೇ ಪದೇ ಹೇಳುತ್ತಿದ್ದಾರೆ. ಈಗ ಸೋಷಿಯಲಿಸ್ಟಿಕ್ ಪ್ಯಾಟ್ರ್ನ್ ಎಂದು ಹೇಳುವಾಗಲೂ ಒಂದು ತಾಲ್ಲೂಕಿಗೆ ಹೆಚ್ಚು ಅನುಕೂಲ ಮಾಡಿ ಇನ್ನೊಂದು ತಾಲ್ಲೂಕನ್ನು ಕೈಬಿಡುತ್ತಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ ಸುಮಾರು 166 ಪಂಪುಗಳಿಗೆ ಹಣ ಕಟ್ಟಿದ್ದಾರೆ. ಅವುಗಳ ಪೈಕಿ ಸುಮಾರು 112 ಪಂಪುಗಳಿಗೆ ಸರ್ಕಾರದವರು ಮಂಜೂರಾತಿಯನ್ನಿತ್ತಿದ್ದಾರೆ. ಇದರ ಕಾರ್ಯಕ್ರಮವನ್ನು ಮುಂದುವರಿಸಲು ಒಂದು ಆಜ್ಞೆ ಮಾಡಿದ್ದರು. ಶೇಕಡ 80 ಭಾಗ ಕೆಲಸ ನಡೆದಿರುವ ಕಡೆಗೆ ಅವಕಾಶ ಕಲ್ಪಿಸಿಕೊಡಬೇಕು, ಬಾಕಿಯಾದವನ್ನು ನಿಲ್ಲಿಸಬೇಕು ಎಂದು ಮಾಡಿದ್ದರು. ಆದರೆ ಮನೆಗೆ ಹೊಸ ಸೊಸೆ ಬಂದ ಕೂಡಲೆ ಮನೆ ಯಜಮಾನಿ ಓಡಿಹೋದ ಹಾಗೆ ಈ ಹೊಸ ಆಜ್ಞೆಯ ಪರಿಣಾಮವಾಗಿದೆ; ಹಾಗಾಗಬಾರದು. ದೇಶದ ಜನರೆಲ್ಲರಿಗೆ ಇದರ ಲಾಭ ದೊರೆಯಬೇಕು. ಮಾಗಡಿತಾಲ್ಲೂಕು ಬಹಳ ಹೀನಸ್ಥಿತಿಯಲ್ಲಿರುವ ತಾಲ್ಲೂಕೆಂದು ಸರ್ಕಾರದವರು ಹಿಂದೆಯೇ ಮನಗಂಡಿದ್ದಾರೆ. ಆದ್ದರಿಂದ ದೇಶಕ್ಕೆ ಬೆನ್ನುಮೂಳೆಯಂತಿರುವ ಬರೀ ರೈತರೇ ವಾಸಮಾಡುವ ಮಾಗಡಿತಾಲ್ಲೂಕಿನ ಬೇಡಿಕೆಯನ್ನು ಜಾಗ್ರತೆ ಕಾರ್ಯಗತ ಮಾಡಬೇಕು. ಒಂದುಸಾವಿರ ಪ್ರಜಾಸಂಖ್ಯೆಯಿರುವ ಎಲ್ಲ ಗ್ರಾಮಗಳೂ ವಿದ್ಯುಚ್ಛಕ್ತಿ ದೀಪದ ಸೌಲಭ್ಯವನ್ನೊದಗಿಸಿ ಮಾಗಡಿ ತಾಲ್ಲೂಕಿನ ಜನರ ಜೀವನಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂಬುದನ್ನು ಈ ಸಂದರ್ಭದಲ್ಲಿ ವಿನಯ

ದಿಂದ ಸರ್ಕಾರದ ಗಮನಕ್ಕೆ ತರುತ್ತೇನೆ. ಇದನ್ನು ಗಮನಿಸಿ ಈ ಬೇಡಿಕೆಯನ್ನು ಕಾರ್ಯಗತಮಾಡಬೇಕು. ಶಾಸನ ಸಭೆಗೆ ಬರುವ ನಾವು, ದೇಶದ ಬೆನ್ನುಮೂಳೆ ಯೆಂದು ಹೇಳುವ ಪ್ರಜೆಗಳ ಪರವಾಗಿ ಈ ಸಭೆಗೆ ಬರುವ ನಾವು, ಸುಮ್ಮನೆ ಇಲ್ಲಿಗೆ ಬಂದು ನಮ್ಮ ಪ್ರಜೆಗೆ ಯಾವ ಅನುಕೂಲತೆಯನ್ನೂ ಒದಗಿಸದೆ ಭತ್ಯ ವಗ್ಯೆರೆ ತೆಗೆದುಕೊಂಡು ಹೋದರೆ ಯಾರೂ ನಮ್ಮನ್ನು ಗ್ರಾಮಗಳಿಗೆ ಸೇರಿಸುವಹಾಗಿಲ್ಲ. ಆದ್ದರಿಂದ ದಯ ಮಾಡಿ ನಾವು ಈ ಸಭೆಯ ಮೂಲಕ ಸೂಚಿಸುವುದನ್ನು ಗಮನಿಸಿ ಕೂಡಲೆ ಅದನ್ನು ಕಾರ್ಯಗತ ಮಾಡಬೇಕು ಎಂದು ಪ್ರಾರ್ಥಿಸಿ ಸಭಾಧ್ಯಕ್ಷರು ದಯಮಾಡಿ ನಾನು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

4-30 P.M.

*Sri H. C. LINGA REDDY (Malur).—In supporting these two Demands on Electricity, I would like to say a few words. I think it is very necessary that a survey is made with regard to the needs for irrigation purposes, for industrial purposes and for electricity in the whole of our State. During the past 5 or 7 or 8 years after the attainment of independence, though we have given power for irrigation and for rural electrification, I think if reasonable requirements of the villages have got to be met, we have got to go a very long way. I think we are almost at the point of exhaustion with regard to the supply of electricity and we have been supplying power to the Andhra and also Bombay people probably according to agreements. Now we have reached a stage when it is very necessary to see how much power is necessary for rural electrification, for industrial purposes and for irrigation purposes and if we see now, I think we have not met the major demads from the people at all. From Malur taluk I have written again and again for the supply of electricity for irrigation purposes and also for rural electrification for a number of villages and I am sorry to say that not a single new pump has been given and not a single village has been electrified during the last four years. For example, Hulimangala, Hoskote, Alambadi and Sampangi. I have been insisting upon the Government to supply electricity to these villages. Though electric lines are taken very near, for some reason or other these villages have not been given electricity till now. With regard to the difficulties of the ryots specially in the scarcity areas I must bring to the notice of the Government the demand that has been made upon the Government every year and also during the question hour that the minimum per Horse Power now fixed for irrigation purposes, that is, 1,000 should be raised to 1,500 per Horse Power and though they have said that they would sympathetically consider this representation of ours, they have not been in a position to do so. I request the Government to consider this aspect of the matter very sympathetically, because, unless it is raised to 1,500, the ryots are not in a position to get electricity.

Again, in Kolar District, the voltage has been dropping and the pumps or the radios or even the electric lights in various towns are not working properly and there is voltage drop. We have been requesting the Government to convert the 25 cycles into 50 cycles system all these years and I am afraid Government has not made much headway in the matter. I request the Government to convert 25 cycles to 50 cycles very early so that there may not be any voltage drop.

ಶ್ರೀ ಎಸ್. ಪರಮೇಶ್ವರಪ್ಪ (ಸಿರಗುಪ್ಪ).—ಸ್ವಾಮಿ, ನಮ್ಮ ಬಳ್ಳಾರಿ ಜಿಲ್ಲೆಗೆ ಈ ದಿವಸ ಹಿಂದೆ ಏನು ಮೈಸೂರು ಸರ್ಕಾರ ಮದ್ರಾಸ್ ಸರ್ಕಾರದೊಡನೆ ಒಂದು ಒಪ್ಪಂದವನ್ನು ವಿದ್ಯುಚ್ಛಕ್ತಿ ಸರಬರಾಯಿನ ಬಗ್ಗೆ ಮಾಡಿಕೊಂಡಿತ್ತೋ, ಆ ಒಪ್ಪಂದದಪ್ರಕಾರ ನಾಲ್ಕನೆ ಒಂದು ಭಾಗದ ಪವರನ್ನೂ ಸಹ ಈಗ ಸರಬರಾಯಿ ಮಾಡುತ್ತಿಲ್ಲ. ಆದರೆ ಎಲ್ಲೋ ಕೆಲವು ಗ್ರಾಮಗಳಿಗೆ ಮಾತ್ರ ಕೊಟ್ಟಿದ್ದಾರೆ. ಹಿಂದೆ ನಮ್ಮ ಸಿರಗುಪ್ಪೆಗೆ ವಿದ್ಯುಚ್ಛಕ್ತಿಯನ್ನು ಕೊಡುವಂತೆ ಮಂಜೂರಾಯಿತು ಎಂಬುದಾಗಿ ಮಾನ್ಯ ಮಂತ್ರಿಗಳಾದ ಡಾ॥ ನಾಗನಗೌಡರು ಹಿಂದೆ ವಿದ್ಯಾದಾನ—ಭೂದಾನ ಕಾರ್ಯದ ಸಂಬಂಧದಲ್ಲಿ ಅಲ್ಲಿಗೆ ಬಂದಿದ್ದಾಗ್ಗೆ ತಿಳಿಸಿದ್ದರು. ಆದರೆ ಈಗ ಅಲ್ಲಿ ಅರ್ಧ ಲೈನು ಹಾಕಿದ್ದಾರೆ. ಇನ್ನರ್ಧ ಲೈನು ಹಾಗೆ ಉಳಿದಿದೆ. ಕಂಬ, ತಂತಿ ವಗ್ಯೆರೆಗಳನ್ನೆಲ್ಲಾ ಸಿದ್ದಮ್ಮನಹಳ್ಳಿವರೆಗೆ ಮಾತ್ರ ಹಾಕಿ ಮುಂದಕ್ಕೆ ಕೈ ಬಿಟ್ಟಿದ್ದಾರೆ. ಇದೇ ವಿಚಾರದಲ್ಲಿ ನಾವು ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರನ್ನೂ ಕೂಡ ಒಂದಾವರ್ತಿ ಭೇಟಿ ಮಾಡಲು ಹೋಗಿದ್ದೆವು. ಆದರೆ ಈ ದಿವಸದವರೆಗೂ ಅಲ್ಲಿಗೆ ಈ ವಿದ್ಯುಚ್ಛಕ್ತಿಯನ್ನಿನ್ನೂ ಒದಗಿಸಿಲ್ಲ. ಆದಷ್ಟುಬೇಗ ಅಲ್ಲಿಯ ಕೆಲಸಗಳನ್ನು ಮುಗಿಸಿ, ಆ ಗ್ರಾಮಕ್ಕೆ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ನಾನು 1939ರಲ್ಲಿ ಮೈಸೂರು ಸಿಟಿಯಲ್ಲಿ ಸತ್ಯಾಗ್ರಹ ಮಾಡಲು ಹೋಗಿದ್ದೆನು. ಆ ದಿವಸ ನಾನು ಅಲ್ಲಿ ಭಾಷಣಮಾಡುತ್ತಾ ಇಂಥ ದೊಡ್ಡ ದೊಡ್ಡ ನಗರಗಳಿಗೂ ಅರಮನೆಗಳಿಗೂ ಮತ್ತು ಚಾಮುಂಡಿ ಬೆಟ್ಟಕ್ಕೆ ಇತ್ಯಾದಿಗಳಿಗೆಲ್ಲಾ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು ವಿದ್ಯುಚ್ಛಕ್ತಿಯಿದೆ. ಆದರೆ ಹಳ್ಳಿ ಜನರಿಗೆ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳಿದರೆ ಪವರ್ ಉತ್ಪತ್ತಿ ಕಡಮೆ ಇದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ—ಇದೆಂಥ ನೀತಿ ಎಂಬುದಾಗಿ ಆ ದಿವಸ ಭಾಷಣ ಮಾಡುತ್ತಾ ಹೇಳಿದ್ದೆನು. ಆದರೆ ಆಗಿದ್ದ ಸರ್ಕಾರ ಈಗಿಲ್ಲ. ಆದಾಗ್ಯೂ ಆ ಸರ್ಕಾರ ಇದ್ದಾಗ ಯಾವ ರೀತಿ ಕೇಳುತ್ತಿದ್ದೆವೋ ಅದೇ ರೀತಿಯಾಗಿ ಆ ದಿವಸದಿಂದ ಈ ದಿನದವರೆಗೂ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ನಾವು ಕೇಳುತ್ತಲೇ ಇದ್ದೇವೆ. ಆದರೆ ಇನ್ನೂ ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಎನ್ನುವುದು ಬರಲಿಲ್ಲ. ಇದನ್ನು ನೋಡಿದರೆ ನಾವು ಏನು ವಿದ್ಯುಚ್ಛಕ್ತಿಯ ಅನುಕೂಲತೆಯನ್ನು ಅನುಭವಿಸುತ್ತೇವೆ ಎಂದು ಒಂದು ಆಸೆಯನ್ನಿಟ್ಟುಕೊಂಡಿದ್ದೆವೋ ಅದು ದಿನದಿನಕ್ಕೂ ದೂರ ಹೋಗುತ್ತಿದೆ. ಬೆಂಗಳೂರು—ಮೈಸೂರು ಪಟ್ಟಣಗಳಲ್ಲಿ ಕೇಳಿದರೆ ಅವರಿಗೆ ತಕ್ಷಣ ಪವರನ್ನು ಕೊಡುತ್ತಾರೆ. ನಾವೇನಾದರೂ ಕೇಳಿದರೆ ಇಲ್ಲದ ನಿರ್ಬಂಧಗಳನ್ನು ಹಾಕುತ್ತಿದ್ದಾರೆ. ಸರಿಯಾದ ರಿಟರ್ನ್ ಬರುವುದಿಲ್ಲ—ಅದಕ್ಕಾಗಿ ನಿಮಗೆ ಪವರ್ ಸಪ್ಲೈ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಪಟ್ಟಣಗಳಲ್ಲಿ ಈ ಕೆಲಸ ಚುರುಕಾಗಿ ನಡೆಯುತ್ತಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿಲ್ಲ. ಹಿಂದಿನ ರಾಗವನ್ನೇ ಇವರೂ ಹೇಳುತ್ತಿದ್ದಾರೆ. ಹಳ್ಳಿಗಳ ಲೈಟಿಗಾಗಲಿ ಅಥವಾ ಇರಿಗೇಷನ್ ಪಂಪ್ ಸೆಟ್ಟುಗಳಿಗಾಗಲಿ ಸರ್ಕಾರ ಯಾವ ಒಂದು ಪ್ರಯಾರ್ಟಿಯನ್ನೂ ಕೊಡುತ್ತಿಲ್ಲ. ಆದರೆ ಈ ದಿವಸ ಇದಕ್ಕೆಲ್ಲಾ ಕಾರಣ ಈ ಪ್ರಯಾರ್ಟಿಯನ್ನು ಬಳ್ಳಾರಿ ಜಿಲ್ಲೆಗೆ ಕೊಡಲಾಯಿತು ಎಂದು ಹೇಳುತ್ತಿದ್ದಾರೆ. ಆದರೆ ಆ ಪ್ರದೇಶ ಮುಂದುವರಿಯಲ್ಲಿ ಎಂಬ ಕುತೂಹಲದಲ್ಲಿ ಈ ಹಳ್ಳಿಗಳನ್ನು ಮರೆಯಬಾರದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಸರ್ಕಾರದವರು ಈ ದಿವಸ ವಿದ್ಯುಚ್ಛಕ್ತಿಯನ್ನು ನೀರಾವರಿ ಕಾಮಗಾರಿಗಳಿಗೂ, ಬಾವಿಗಳಿಗೂ ವ್ಯವಸಾಯದ ಉದ್ದೇಶಕ್ಕಾಗಿ ಕೊಡುತ್ತಿದ್ದಾರೆ. ಆದರೆ ಈ ದಿವಸ ಈ ಪವರನ್ನು ಕಬ್ಬಿನ ಗಾಣಗಳಿಗೆ ಕಬ್ಬನ್ನು ಅಲೆಯಾಡತಕ್ಕ ಸಂಬಂಧದಲ್ಲಿ ಕೇಳಿದರೆ ಅದಕ್ಕೆ ಪವರ್ ಸಪ್ಲೈ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಈ ಸಂಬಂಧವಾಗಿ ಸರ್ಕಾರದವರೇನಾದರೂ ಹೇಳಿಕೆ ಹೊರಡಿಸಿದ್ದಾರೋ ಏನೋ ಒಂದೂ ತಿಳಿಯದು. ಆದ ಪ್ರಯುಕ್ತ ಈಗಲಾದರೂ ಸರ್ಕಾರದವರು ಕಬ್ಬನ್ನು ಕ್ರಷ್‌ಮಾಡುವುದಕ್ಕೆ 5-10 H.P. ವಿದ್ಯುಚ್ಛಕ್ತಿಯನ್ನಾದರೂ ಒದಗಿಸಬೇಕೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಮಂತ್ರಿಗಳು).—ಸ್ವಾಮಿ, ಅನೇಕ ಮಾನ್ಯ ಸದಸ್ಯರು ಈಗ ಪವರ್ ಷಾರ್ಟೇಜ್ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ ಸ್ಥಾಪಿಸಿರತಕ್ಕ ವಿದ್ಯುತ್ ಕೇಂದ್ರಗಳಲ್ಲಿ 1,79,220 K.W. ಪವರನ್ನು ಉತ್ಪತ್ತಿಮಾಡತಕ್ಕ ಕೆಪ್ಯಾಸಿಟಿಯಿದೆ. ಆದರೆ ಈಗ ಈ ಪವರ್ ಉತ್ಪತ್ತಿ ಎಲ್ಲಿಯವರೆಗೆ ಹೋಗಿದೆ ಎಂದರೆ 1ಲಕ್ಷ 52 ಸಾವಿರದ 300 K.W. ಶಕ್ತಿಯನ್ನು ನಾವೀಗ ಟ್ಯಾಪ್ ಮಾಡುತ್ತಿದ್ದೇವೆ. ಇದು ಈಗೀಗ ಬರಬರುತ್ತ ಪೊಟೆನ್ಷಿಯಲ್ ಪೀಕ್‌ನ ಹತ್ತಿರಹತ್ತಿರಕ್ಕೆ ಬರುತ್ತಿದೆ. ಈಗ 1 ಲಕ್ಷ 73 ಸಾವಿರದ 500 K.W. ಹತ್ತತ್ತಿರಕ್ಕೆ ಬಂದಿದೆ.

ಆದರೆ ಈ ವಿದ್ಯುಚ್ಛಕ್ತಿಯನ್ನು ಕೈಗಾರಿಕಾ ಉದ್ದೇಶಗಳಿಗೆ ಒದಗಿಸುವುದೊಂದು ವಿಚಾರ. ಲಿಫ್ಟ್ ಇರಿಗೇಷನ್ನಿಗೆ ಪವರ್ ಸರಬರಾಯಿ ಮಾಡತಕ್ಕದ್ದು ಎರಡನೆಯ ವಿಚಾರ. ಇನ್ನು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಒದಗಿಸಬೇಕೆಂಬ ಅಭಿಪ್ರಾಯವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಈಗ್ಗೆ ಕೆಲವು ದಿವಸಗಳ ಹಿಂದೆ ಗ್ರಾಮಾಂತರ ಪ್ರದೇಶಗಳಿಗೆ ಪವರ್ ಕೊಡತಕ್ಕದ್ದನ್ನು ಸ್ವಲ್ಪಮಟ್ಟಿಗೆ ನಿಧಾನಮಾಡಬೇಕೆಂದು ಎಲೆಕ್ಟ್ರಿಕಲ್ ಚೀಫ್ ಇಂಜಿನಿಯರ್ ಅವರಿಗೆ ತಿಳಿಸಿ—ಈ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಅದರ ಪರಿಣಾಮವಾಗಿ ಕೆಲವು ದಿವಸ ಅಲ್ಲಿನ ಜನಗಳೆಲ್ಲರೂ ಕೂಡ ವಿದ್ಯುಚ್ಛಕ್ತಿ ಕೊಡುತ್ತಾ ಇಲ್ಲ ಎಂದು ಹಾಹಾಕಾರ ಮಾಡಿದರು. ಅದನ್ನೆಲ್ಲಾ ಪುನರಾಲೋಚನೆಮಾಡಿ ಈಗ ಸದ್ಯದಲ್ಲೇ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕಾಗಿ ಕೊಡಬೇಕೆಂದು ತೀರ್ಮಾನ ಮಾಡಿ, ಅದರ ಮೇಲೆ ಸೂಚನೆಯನ್ನು ಸಹ ಕೊಡಲಾಗಿದೆ. ಆದ್ದರಿಂದ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಅದರಲ್ಲೂ ವ್ಯವಸಾಯಕ್ಕೆ ಕೊಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ, ಯಾವ ಅಡ್ಡಿ ಆತಂಕವೂ ಇಲ್ಲ.

ಶಿಂಷಾ ಪ್ರಾಜೆಕ್ಟನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಶರಾವತಿ ವ್ಯಾಲಿ ಪ್ರಾಜೆಕ್ಟ್ ಮಂಜೂರು ಮಾಡಿರುವುದೇ ಆಗಿದೆ ಶಿಂಷಾ ಪ್ರಾಜೆಕ್ಟಿಗೆ ಭಾರತ ಸರ್ಕಾರದವರು ಅನುಮತಿ ಕೊಡಲಿಲ್ಲ. ತಮಗೆಲ್ಲರಿಗೂ ಗೊತ್ತಿರುವಂತೆ ಇದಕ್ಕೆ ಹೇರಳವಾಗಿ ಹಣ ಬೇಕು. ಅದಕ್ಕೆ ಅವರ ಅನುಮತಿಯನ್ನು ಪಡೆದೇ ಕೆಲಸ ಮಾಡಬೇಕು. ಈಗ ತಕ್ಷಣದಲ್ಲೇ ಕೆಲವಾರು ತಿಂಗಳಿನಲ್ಲಿ ತುಂಗಭದ್ರ ಪ್ರಾಜೆಕ್ಟಿನಿಂದ ವಿದ್ಯುಚ್ಛಕ್ತಿ ಬರುತ್ತದೆ. ಅದರ ಜೊತೆಗೆ ಭದ್ರಾಪ್ರಾಜೆಕ್ಟಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಲಿಕ್ಕೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ. ಇದಕ್ಕೂ ಮಿಗಿಲಾಗಿ ಹಳ್ಳಿಗಾಡುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೂ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೂ ಏನಾದರೂ ತೊಂದರೆ ಆದೀತು ಎಂದು ಹೇಳಿ ನುಗು ಜಲಾಶಯದಿಂದ ಸುಮಾರು 200 ಕ್ಯೂಸೆಕ್ಸ್ ನೀರನ್ನು ಶಿವನ ಸಮುದ್ರಕ್ಕೆ ಬಿಟ್ಟು ತನ್ಮೂಲಕ ಅಲ್ಲಿನ ಉತ್ಪನ್ನವನ್ನು ಹೆಚ್ಚುಮಾಡಿಕೊಳ್ಳಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ವಿದ್ಯುಚ್ಛಕ್ತಿ ಪರಿಸ್ಥಿತಿ ಬಹಳ ಉತ್ಕಟವಾಗುವ ಸಂದರ್ಭದಲ್ಲಿ 200 ಕ್ಯೂಸೆಕ್ಸ್ ನೀರಿನಿಂದ 7-8 ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬಹುದು. ಆದ್ದರಿಂದ ಗ್ರಾಮಾಂತರಗಳಿಗೆ ಮತ್ತು ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಕಮ್ಮಿಯಾಗುತ್ತದೆಯಲ್ಲಾ ಎಂದು ಹೇಳಿ ಗ್ರಾಮಾಂತರ ಜನ ಮತ್ತು ವ್ಯವಸಾಯಗಾರರು ಯಾವ ವಿಧವಾದ ಶಂಕೆಯನ್ನಾಗಲೀ ಇಟ್ಟುಕೊಳ್ಳಬೇಕಾದದ್ದು ಅನಾವಶ್ಯಕ. ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳಿಗೆ ತೊಂದರೆಯಾಗುತ್ತದೆ ಎಂದು ಕೆಲವರು ಹೇಳಿದರು. ಕೈಗಾರಿಕೆಗಳು ಎಲ್ಲಕ್ಕೂ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಗ್ರಾಮಾಂತರಗಳಲ್ಲಿ ಕಾಟೇಜ್ ಇಂಡಸ್ಟ್ರೀಸ್‌ಗೆ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಯಾ

ರಿಟಿ ಬೇಸಿಸ್ ಮೇಲೆ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಒಂದು ವೇಳೆ ಇನ್ನೂ ಹೆಚ್ಚಿನ ವಿದ್ಯುಚ್ಛಕ್ತಿ ಬೇಕಾಗುವ ಪಕ್ಷದಲ್ಲಿ ಹೆಚ್ಚು ಲೋಡ್ ಇರತಕ್ಕ ಪ್ರದೇಶಗಳಿಗೆ ಸ್ಟ್ಯಾಂಡ್‌ಬೈ ಜನರೇಟರ್ಸ್ 2-3 ಘಂಟೆಗಳ ಕಾಲ ಉಪಯೋಗ ಮಾಡಿದ ಪಕ್ಷದಲ್ಲಿ 18 ಸಾವಿರ ಕಿಲೋವಾಟ್‌ಗಳವರಗೂ ಉಪಯೋಗಿಸಿಕೊಳ್ಳಬಹುದು ಎಂದು ಹೇಳಿ ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರಾಗಿದ್ದ ಹಯಾತ್ ಅವರು ಒಂದು ಯೋಜನೆಯನ್ನು ಕೊಟ್ಟಿದ್ದಾರೆ. ಅದರ ಸಾಧಕ ಬಾಧಕಗಳನ್ನು ಯೋಚನೆ ಮಾಡಿದ್ದರಲ್ಲಿ ಏನೂ ತೊಂದರೆಯಿಲ್ಲ ಎಂದು ತಿಳಿದುಬಂದಿದೆ. ಅಂದ ಮೇಲೆ ತಾವು ಯೋಚನೆ ಮಾಡುತ್ತಾ ಇದ್ದಷ್ಟು ಅಭಾವ, ಆ ಪ್ರಮಾಣದಲ್ಲಿ, ಅಷ್ಟು ಉಗ್ರರೀತಿಯಲ್ಲಿ ಇಲ್ಲ ಎಂದು ಹೇಳಬೇಕಾಗಿದೆ. As a matter of abundant caution the department has got to be a little careful. ನಾನು ತಮ್ಮನ್ನು confidenceಗೆ ತೆಗೆದುಕೊಂಡು ಇರತಕ್ಕ ವಿಷಯವನ್ನು ತಮಗೆ ತಿಳಿಸಿದ್ದೇನೆ. ಆದ್ದರಿಂದ ವಿದ್ಯುಚ್ಛಕ್ತಿ ಕೊಡತಕ್ಕ ವಿಷಯದಲ್ಲಿ ಕಡಮೆ ಆಯಿತಲ್ಲಾ ಎಂದು ವ್ಯಥೆ ಪಡಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಫರ್ಟಿಲೈಸರ್ ಪ್ರಾಜೆಕ್ಟಿಗೆ ವಿದ್ಯುಚ್ಛಕ್ತಿ ಸಾಕಾಗುತ್ತಿಲ್ಲ ಎಂದು ಹೇಳಿದ್ದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಕೈಗಾರಿಕೆಗಳ ವಿಷಯ ಬಂದಾಗ ಅದನ್ನು ಯೋಚನೆ ಮಾಡಬೇಕಾಗುತ್ತದೆಯೇ ಹೊರತು ಈ ಸಣ್ಣಪುಟ್ಟ ಗ್ರಾಮಗಳಿಗೆ ಕೊಡುವುದಕ್ಕೆ ತೊಂದರೆ ಆಗುವುದಿಲ್ಲ ಮತ್ತು ಫರ್ಟಿಲೈಸರ್ ಕಾರ್ಖಾನೆಯನ್ನು ಹಾಕಬೇಕೆಂದು ಯೋಚನೆ ಮಾಡಿದಾಗ ಆಗಿನ ಪರಿಸ್ಥಿತಿ ಏನಿತ್ತು ಎಂಬುದು ಈಗ ಗೊತ್ತಿಲ್ಲ. ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸಲೀಸಾಗಿ ಮಂಜೂರಾಗುತ್ತಿಲ್ಲ, ಹಣವನ್ನು ಕೊಟ್ಟಿದ್ದೇವೆ, ಮಂಜೂರು ಮಾಡಿದ್ದರೂಕೂಡ ಕೆಲಸ ಆಗುತ್ತಿಲ್ಲ ಎಂಬ ದೂರುಗಳು ಏನಿವೆಯೋ ಅವನ್ನು ಎಲ್ಲ ಮಾನ್ಯಸದಸ್ಯರೂ ತಿಳಿಸಿದ್ದೀರಿ. ಸಾಧಾರಣವಾಗಿ ನಾನು ಗ್ರಾಮಾಂತರಗಳಿಗೆ ಹೋದಾಗ ಆ ಜನಗಳಿಗೆ ಹೇಳಿದ್ದೇನೆ. ಅನೇಕ ಸಂದರ್ಭಗಳಲ್ಲಿ ಯಾವರೀತಿ ಮುಂದುವರಿಯಬೇಕು ಎಂಬುದು ಗೊತ್ತಿಲ್ಲದೆ ಅರ್ಧಪಾಲು ಜನ ಗ್ರಾಮಗಳಲ್ಲಿ ತೊಂದರೆ ಪಡುತ್ತಾ ಇದ್ದಾರೆ. ಯಾವ ಕ್ರಮವನ್ನು ಅನುಸರಿಸಬೇಕೋ ಆ ಕ್ರಮವನ್ನು ಅನುಸರಿಸದೇ ತೊಂದರೆ ಆಗುತ್ತಾ ಇದೆ. ಈರೀತಿ ಆದರೆ ಇನ್ನು 10 ವರ್ಷ ಆದರೂ ಕೂಡ ಅಂಥವರಿಗೆ ವಿದ್ಯುಚ್ಛಕ್ತಿ ಸಿಕ್ಕುವುದಿಲ್ಲ. ಅದಕ್ಕೆ ಕ್ರಮ ಯಾವುದಿದೆಯೋ ಅದನ್ನು ಅನುಸರಿಸಬೇಕು.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಯಾವ ಕ್ರಮ ಅನುಸರಿಸಬೇಕು ಎಂದು ಹೇಳುತ್ತೀರೋ ಆ ಕ್ರಮವನ್ನು ಅನುಸರಿಸಿದರೂ ಕೂಡ ಕೆಲವರಿಗೆ ಕೊಡುವುದಿಲ್ಲ. ಇನ್ನು ಕೆಲವರಿಗೆ ಕ್ರಮ ಅನುಸರಿಸದೇ ಇದ್ದರೂಕೂಡ ಕೊಡುತ್ತೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಷಮಿಸಬೇಕು. ತಾವು ಒಂದು ನಿದರ್ಶನ ಕೊಟ್ಟ ಪಕ್ಷದಲ್ಲಿ ನಾನು ಹೇಳಿದ್ದು ತಪ್ಪು ಎಂದು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಕ್ರಮವನ್ನನುಸರಿಸದೆ ಒಂದು ಕೇಸನ್ನು ಕೂಡ ನಾವು ಮಂಜೂರು ಮಾಡುವುದಿಲ್ಲ, ಮಂಜೂರು ಮಾಡಿಯೂ ಇಲ್ಲ ಎಂದು ಹೇಳುತ್ತೇನೆ. ಕೆಲವು ಪ್ರದೇಶಗಳಲ್ಲಿ ಲೈನ್ ಎಳೆಯಬೇಕಾಗಿದ್ದರೆ ಕೆಲವು ತೊಂದರೆಗಳಿವೆ. ಅಲ್ಲಿರತಕ್ಕ ರೈತರು ಯಾರಿದ್ದಾರೋ ಅವರು ಅದನ್ನು ಸದುಪಯೋಗಪಡಿಸಿಕೊಂಡಲ್ಲಿ ಪರವಾಗಿಲ್ಲ. ಹಾಗಲ್ಲದೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಲೈನ್ ಎಳೆದರೆ ಯಾವನೋ ಒಬ್ಬ ರೈತ 5 ಎಚ್. ಪಿ. ಪಂಪ್‌ಗೋಸ್ಕರ ವಿದ್ಯುಚ್ಛಕ್ತಿ ತೆಗೆದುಕೊಂಡರೆ ಅದರಿಂದ ಪ್ರಯೋಜನವಿಲ್ಲ. ಆದ್ದರಿಂದ ಶೇಕಡ 80ರಷ್ಟು ಜನಗಳಾದರೂ ಪವರ್ ತೆಗೆದುಕೊಂಡಲ್ಲಿ ಮುಂದುವರಿಯುವುದಕ್ಕೆ ಸುಲಭವಾಗುತ್ತದೆ. ಅದೇರೀತಿ ಗ್ರಾಮಾಂತರಗಳಿಗೂ ಕೂಡ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಬಗ್ಗೆ ಅಲ್ಲಿನ ಜನರು ಕ್ರಮವರಿತು ಕೆಲಸಮಾಡಿದರೆ ಯಾವ ತೊಂದರೆಯೂ ಆಗುವುದಿಲ್ಲ. ಇಲ್ಲದೇ ಇದ್ದರೆ ಯಾವುದೇ ಒಂದು ಸಣ್ಣ ಕಾರಣಕ್ಕಾಗಲಿ ಮಂಜೂರಾಗದೇ ನಿಂತುಹೋಗಬಹುದು. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ, ತಾವು ಕ್ರಮ ಅನುಸರಿಸಿಯೂ ನಿಧಾನ ಮಾಡಿದರೆ ಆಗ ನಮ್ಮಿಂದ ಲೋಪ ಆಗಿದೆ ಎಂದು ಒಪ್ಪಿಕೊಳ್ಳಬಹುದು. ಕೋಲಾರ, ತುಮಕೂರು ಜಿಲ್ಲೆಗಳವರಿಗೆ—ನೀರಿನ ಅಭಾವ ಇರತಕ್ಕ ಜಿಲ್ಲೆಗಳು—ವಿಶೇಷ ಸಹಾನುಭೂತಿಯಿಂದ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಸಂಪ್ರದಾಯವನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ. ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳು ನೀರಿನ ಅಭಾವದಿಂದ ಇರತಕ್ಕ ಜಿಲ್ಲೆಗಳು. ಇಲ್ಲಿಗೆ ವಿಶೇಷ ಆಸಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಕೊಡುವ ವಿಚಾರದಲ್ಲಿ ಸರ್ಕಾರದವರಿಗೆ ಸಂಪೂರ್ಣ ಸಹಾನುಭೂತಿ ಇದೆ.

ಇನ್ನು ದರದ ವಿಷಯವಾಗಿ ಮಾತನಾಡುತ್ತ ಶ್ರೀ ಶ್ರೀನಿವಾಸ ಅಯ್ಯಂಗಾರ್ಯರು ನಾಲ್ಕು ಆಣೆ ಇರುವುದನ್ನು ಎರಡಾಣೆಗೆ ಇಳಿಸಿ ಎಂದು ಹೇಳಿದರು. ಒಂದು ಆಣೆ ಕಮ್ಮಿ ಮಾಡಿದರೂ ಸಹ ಸುಮಾರು 56 ಲಕ್ಷ ರೂಪಾಯಿಗಳ ವರಮಾನ ಕಡಮೆಯಾಗುತ್ತದೆ. ದರದ ಮಟ್ಟಿಗೆ ಹೇಳುವುದಾದರೆ, ಮೈಸೂರು ಸಂಸ್ಥಾನದಲ್ಲಿ ಮನೆಗಳಿಗೆ ಒದಗಿಸುತ್ತಿರತಕ್ಕ ದರ ಎಲ್ಲಾ ಸಂಸ್ಥಾನಗಳಲ್ಲಿರುವುದಕ್ಕಿಂತಲೂ ಬಹಳ ಕಡಮೆ ದರ. ಆಂಧ್ರದಲ್ಲಿ ಐದು ಆಣೆಯಿದೆ. ಹಾಲಿ ನಮ್ಮ ಇಲಾಖೆ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲವೆಂಬುದು ತಮಗೇ ಗೊತ್ತಿದೆ. ಒಟ್ಟಿನಲ್ಲಿ ಬಡ್ಡಿ ವಜಾ ಹಾಕಿದರೆ ಕೇವಲ 8-10 ಲಕ್ಷ ರೂಪಾಯಿಗಳ ಉತ್ಪತ್ತಿಯಿದೆ. ಈ ಸಂದರ್ಭದಲ್ಲಿ ಇನ್ನೂ ಉತ್ಪತ್ತಿಯನ್ನು ಕಡಮೆ ಮಾಡಿದರೆ ಕೆಲಸ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಮಗೇ ಯೋಚನೆ ಮಾಡುವುದಕ್ಕೆ ಬಿಡುತ್ತೇನೆ.

ಒಬ್ಬ ಸದಸ್ಯರು.—ಲಾಭ ಕಡಮೆ ತೆಗೆದುಕೊಳ್ಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—No profit, no loss basis ಮೇಲೆಯೇ ಈಗ ಕೆಲಸ ಮಾಡುತ್ತಿರುವುದು. ಈಚೆಗೆ ಟ್ಯಾರಿಫ್‌ನ್ನು ಈಗ ಬದಲಾವಣೆ ಮಾಡುತ್ತಿದ್ದೇವೆ. ಬರುವ ತಿಂಗಳಿನಿಂದ ಅದು ಜಾರಿಗೆ ಬರುತ್ತದೆ. ಸರ್ಕಾರಿ ಗೆಜೆಟ್ಟಿನಲ್ಲಿ ಅದು ಫಾಯುಷ್ ಆಗಿದೆ. ಅದರಲ್ಲೇನೂ ಹೆಚ್ಚಿನ ವಿಷಯವಿಲ್ಲ ಇರುವ ದರಗಳನ್ನೇ Rationalise ಮಾಡಿದ್ದೇವೆ ಅಷ್ಟೆ. ಮುಂಚೆ ಒಂದೊಂದು ಕೈಗಾರಿಕೆಗೆ ಒಂದೊಂದು ದರವಿತ್ತು. ಯಾವ ಯಾವಾಗ ಯಾವಯಾವರೀತಿ ಅನುಕೂಲವಿತ್ತೋ ಅದರಂತೆ ನಾನಾ ಕಾರ್ಖಾನೆಗಳಿಗೆ ಕೊಡಲಾಗಿತ್ತು. ಈರೀತಿ ಬೇರೆಬೇರೆ ದರಗಳಲ್ಲಿ ಒದಗಿಸುವುದು ಸರಿಯಲ್ಲವೆಂದು ಭಾವಿಸಿ ಒಂದು Rational basis ಮೇಲೆ ಈಗ ವಿಧಿಸಿದ್ದೇವೆ. ಅಲ್ಲದೆ ಹೆಚ್ಚುಹೆಚ್ಚು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದಂತೆ ಕಮ್ಮಿಕಮ್ಮಿ ದರವಿರಬೇಕೆಂದು ಥ್ಯಾಕರೆ ಕಮಿಟಿಯವರು ಮಾಡಿದ ಒಂದು ಶಿಫಾರಸ್ಸಿ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಗನುಗುಣವಾಗಿ ಇದನ್ನು ಮಾಡಲಾಗಿದೆ. ಇದರಿಂದಾಗಿ ಒಟ್ಟಿನಲ್ಲಿ 10-20 ಲಕ್ಷ ರೂಪಾಯಿಗಳು ಹೆಚ್ಚಿಗೆ ಉತ್ಪತ್ತಿ ಬರಬಹುದೆಂದು ನಿರೀಕ್ಷಿಸಲಾಗಿದೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ಅವರು 70-80 ಲಕ್ಷ ರೂಪಾಯಿಗಳು ಬರುತ್ತವೆಂದು ಹೇಳಿದರು. ಹಾಗೆ ಬರುವುದಾದರೆ ಸಂತೋಷ.

ಒಬ್ಬ ಸದಸ್ಯರು.—ಆ ಸರ್ಕಾರಿ ಹುಕುಂ ಎಲ್ಲಿದೆ? ಆ ರಿಪೋರ್ಟನ್ನೂ ಸದಸ್ಯರಿಗೆ ಒದಗಿಸಿದ್ದರೆ ಚೆನ್ನಾಗಿತ್ತು.

ಶ್ರೀ ಎಚ್. ಎಂ. ಚನ್ನಬಸಪ್ಪ.—Drop in voltage ವಿಷಯವನ್ನು ಹೇಳಿದರು. ಈ ಬಗ್ಗೆ ವಿದ್ಯುಚ್ಛಕ್ತಿ ಇಲಾಖಾಧಿಕಾರಿಗಳಿಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ತಿಳಿವಳಿಕೆ ಕೊಡುತ್ತೇನೆ. ಆಮೇಲೆ, frequency conversion ಕೆಲಸವೂ ಕೂಡ ಭರದಿಂದ ಸಾಗುತ್ತಿದೆ. ಆದರೆ ಕೆಲವು ವೇಳೆ ಸಾಮಾನುಗಳಿಲ್ಲದೆ ತೊಂದರೆಯಾಗಿದೆ. ಈಗ ನಮಗೆ Electric poleಗಳ ಅಭಾವವುಂಟಾಗಿದೆ. ಕಬ್ಬಿಣದ ಕಂಬಗಳನ್ನು ಹಾಕಿದರೆ ಎಸ್ಟಿಮೇಟ್ ಜಾಸ್ತಿಯಾಗುತ್ತದೆ. ಈ ಕಾರಣದಿಂದ ನಾವು ಸ್ವಲ್ಪ ನಿಧಾನ ಮಾಡುತ್ತಿದ್ದೇವೆ. ಹೀಗಾಗಿ ವಿದ್ಯುಚಕ್ತಿಯ ಸರಬರಾಜು ಕಡಮೆಯಾಗಿದೆ. ನಮ್ಮ ಅರಣ್ಯ ಇಲಾಖೆಯಿಂದ ಏಳೆಂಟು ಸಾವಿರಕ್ಕಿಂತ ಹೆಚ್ಚಿಗೆ ಮರಗಳು ಸಿಕ್ಕುವುದೇ ಕಷ್ಟ. ಇದರ ಮೇಲೆ ಮೊನ್ನೆತಾನೆ ಡಾ॥ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿಸಿ ತಿಂಗಳೊಂದಕ್ಕೆ 30,000 poles ನ್ನಾದರೂ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒಂದು ಸೂಚನೆ ಕೊಟ್ಟಿದ್ದೇವೆ. ನಮ್ಮಲ್ಲಿ ವಿದ್ಯುಚ್ಛಕ್ತಿಯಿದೆ; ಹೇರಳವಾಗಿ ದುಡ್ಡಿದೆ. ಅದನ್ನು ಉಪಯೋಗಿಸಿದರೆ ವರಮಾನ ಬರುವುದಾಗಿದೆ. ಆದ್ದರಿಂದಲೇ Irrigation ಬಗ್ಗೆ ಈ ಸಲ 40 ಲಕ್ಷ ರೂಪಾಯಿಗಳನ್ನೂ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಕ್ಕಾಗಿ 31 ಲಕ್ಷ ರೂಪಾಯಿಗಳನ್ನೂ ಒದಗಿಸಿದ್ದೇವೆ. ನಮ್ಮ ಆಸೆ, ಈ ಒಟ್ಟು 71 ಲಕ್ಷ ರೂಪಾಯಿಗಳನ್ನು ಖರ್ಚ ಮಾಡಬೇಕೆಂಬುದೇ ಆಗಿದೆ. ಆದರೆ ನಾನೀಗ ಹೇಳಿದಂತೆ wire ಮತ್ತು polesಗಳ ಅಭಾವದಿಂದ ಕೆಲಸ ನಿಧಾನವಾಗಿದೆ. Wireಗಳ ಬಗ್ಗೆ ಅಲ್ಯೂಮಿನಿಯಂ ವೈರ್‌ಗಳನ್ನು ಹಾಕಿದರೆ ಇನ್ನೂ ಕಮ್ಮಿ ದರದಲ್ಲಿ ಆಗಬಹುದೆಂದು ಆರ್ಡರ್ ಕೊಟ್ಟಿದ್ದೇವೆ. ಅದು ಬಂದ ಮೇಲೆ ಯಾರುಯಾರು ಕೇಳುತ್ತಾರೋ ಅವರಿಗೆಲ್ಲಾ ಒದಗಿಸುತ್ತೇವೆ.

ಆಮೇಲೆ ನೀರಾವರೀ ಪಂಪುಗಳ ವಿಷಯದಲ್ಲಿ ಒಂದು ಹಾರ್ಸ್ ಪವರ್‌ಗೆ 1,000 ದಂತೆ ಗೊತ್ತು ಮಾಡಿರುವುದು ಬಹಳ ಕಡಮೆಯೆಂದು ಹೇಳಿದರು. ಆದರೆ, ಇದನ್ನು ಗೊತ್ತು ಮಾಡಿರುವುದು ನಾವಲ್ಲ; ಭಾರತ ಸರ್ಕಾರದವರು. ಏಕೆಂದರೆ, ಈಗ ಹಣ ಕೊಡುತ್ತಿರುವವರು ಭಾರತ ಸರ್ಕಾರದವರು. ಈಗ 1,000 ರೂಪಾಯಿಗಳನ್ನಿಟ್ಟರೂ ಹಣ ಬರುತ್ತಿಲ್ಲ. ಅಂಥದರಲ್ಲಿ 1,500 ರೂಪಾಯಿಗಳಿಗೆ ಹೆಚ್ಚಿಸಿದರೆ ಬಹಳ ನಷ್ಟವಾಗುತ್ತದೆ. ಆಮೇಲೆ ಶೇಕಡ 80 ಇರುವುದನ್ನು ಶೇಕಡ 70ಕ್ಕೆ ಇಳಿಸುವುದಕ್ಕೆ ಆರ್ಡರ್ ಮಾಡಿದ್ದೇವೆ. ನಾಳೆಯೇ ಆರ್ಡರ್ ಸಾದರಾಗುತ್ತದೆ.

ಆಮೇಲೆ Sugar Industryಯ ವಿಚಾರದಲ್ಲಿ, ಅದೊಂದು cottage industryಯಂತೆ ನಡೆಯುತ್ತಿದೆಯೇ, ಎಲ್ಲಿವೆ, ಯಾವ ಗ್ರಾಮದಲ್ಲಿ ನಡೆಯುತ್ತಿದೆಯೆಂಬುದನ್ನು ನೋಡಿಕೊಂಡು ಅದಕ್ಕೆ ಯಾವ ರೀತಿ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂಬುದನ್ನು ಯೋಚನೆ ಮಾಡುತ್ತೇವೆ.

Mr. SPEAKER.—The question is:

"That a sum not exceeding Rs. 1,84,45,000 be granted to the Government to defray the charges which will come in course of payment during the year ending 31st day of March 1957, in respect of 'Receipts from Electricity Schemes—Working Expenses'."

The motion was adopted.

DEMAND NO. 42—ELECTRICITY SCHEMES.

81A. CAPITAL OUTLAY ON ELECTRICITY SCHEMES.

Mr. SPEAKER.—The question is:

"That a sum not exceeding Rs. 12,54,10,000 be granted to the Government to defray the charges which will come in course of payment during the year ending 31st day of March 1957, in respect of 'Capital Outlay on Electricity Schemes'."

The motion was adopted.

Mr. SPEAKER.—Now the House will rise and meet at 8-30 A.M. tomorrow.

The House adjourned at Five of the Clock to meet again at Thirty Minutes past Eight of the Clock on Friday the 30th March 1956.

WD 2896—GPB—550—21-7-56.